ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

14 ಅಕ್ಟೋಬರ್ 2015 ಪುಟ 20 ರೂ. 15/-


ಮೌಢ್ಯ ವಿರೋಧಿಸಿದ ಚೆನ್ನಬಸವಣ್ಣ




ಮುಕ್ತಿಗೆ 25 ಕೋಟಿ!



...ೇಶಪಾಂಡೆಯ ...್ಯಾಂಡ್ ಲಫಡಾ




...ಮೊಗ್ಗ:
...ಲ್ಲಿ ಹೊಸ್ತಿಲಲ್ಲಿ
...ಡ್ಡಿಯ
...ಸ ಗೇಮ್



ಮಳವಳ್ಳಿ:
ಜೆಡಿಎಸ್ ಮಾನ ತೆಗೆದ ಅನ್ನದಾನಿ

ಅಂಚಿನಿಂದ....



ಡಾ.ವಾಸು ಎಚ್.ವಿ.

ಈ ಪ್ರಚಾರ ವ್ಯವಸ್ಥಿತ ಹೌದೇ ಅಲ್ಲವೇ

- ರೈತರು ಕೃಷಿ ಬಿಕ್ಕಟ್ಟಿನ ಕಾರಣದಿಂದಾಗಿ ಸಾಲದ ಬಾಧೆ ತಾಳಲಾರದೇ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ ಎಂಬುದು ಸುಳ್ಳು. ಬಹುತೇಕ ಆತ್ಮಹತ್ಯೆಗಳು ವ್ಯಕ್ತಿಗತ ಕಾರಣಗಳಿಗಾಗಿ ಆಗುತ್ತಿವೆ.
- ಕಾರ್ಮಿಕರು ಸೋಮಾರಿಗಳು. ಅವರು ಕೆಲಸ ಕದಿಯಲೆಂದೇ ನೋಡುತ್ತಿರುತ್ತಾರೆ. ಅಗತ್ಯಕ್ಕಿಂತ ಹೆಚ್ಚು ಜನ ಕಾರ್ಮಿಕರು ಆ ಉದ್ದಿಮೆಯಲ್ಲಿ ಇದ್ದಾರೆ. ಅವರಿಗೆ ಹೆಚ್ಚು ಸಂಬಳ ಕೊಡುವುದು ಪರಿಹಾರವಲ್ಲ, ಗುತ್ತಿಗೆ ಪದ್ಧತಿಯಲ್ಲಿ ತಪ್ಪಿಲ್ಲ.
- ಅತ್ಯಾಚಾರಗಳಿಗೆ ಮಹಿಳೆಯರು ಧರಿಸುವ ಉಡುಪೇ ಕಾರಣ. ಹಿಂದಿಗಿಂತ ಇಂದು ಅತ್ಯಾಚಾರಗಳು ಹೆಚ್ಚಾಗಿಲ್ಲ, ಮಾಧ್ಯಮಗಳಲ್ಲಿ ತೋರಿಸುತ್ತಿರುವುದು ಹೆಚ್ಚಾಗಿದೆ ಅಷ್ಟೇ.
- ದಲಿತರು ಮೀಸಲಾತಿಯಿಂದ ತುಂಬಾ ಲಾಭ ಪಡೆದುಕೊಂಡಿದ್ದಾರೆ.. ಮೀಸಲಾತಿಯಿಂದ ಮೇಲ್ಜಾತಿಗಳಿಗೆ ಅನ್ಯಾಯವಾಗುತ್ತಿದೆ.

–ಇವೆಲ್ಲಾ ಕೆಲವು ಸ್ಯಾಂಪಲ್‌ಗಳಷ್ಟೇ. ಇನ್ನು ಮುಸ್ಲಿಮರ ಬಗ್ಗೆ ಇರುವ ಪ್ರಚಾರಗಳಂತೂ ಲೆಕ್ಕವಿಲ್ಲದಷ್ಟಿವೆ.

ಈ ಅಭಿಪ್ರಾಯಗಳು ಸಾಕಷ್ಟು ವ್ಯಾಪಕವಾಗಿ ಜನರ ಮನಸ್ಸಿನಲ್ಲಿರುವುದನ್ನು ನಾವು ಕಾಣಬಹುದು. ಇವು ಜನಸಾಮಾನ್ಯರ ಮನಸ್ಸಿನಲ್ಲಿ ಇವೆ ಎಂದರೆ, ಮೇಲೆ ಹೇಳಲಾದ ಶೋಷಿತ ಸಮುದಾಯಗಳೊಳಗೆ ಇಲ್ಲ ಎಂದಲ್ಲ. ಉದಾಹರಣೆಗೆ ಈ ಎಲ್ಲಾ ಸಮುದಾಯಗಳ ಗಂಡಸರೂ ಮಹಿಳೆಯರ ಬಗ್ಗೆ ಇಂತಹ ಅಭಿಪ್ರಾಯಗಳನ್ನು ಹೊಂದಿರುವುದು ಸಾಧ್ಯ. ಸ್ವತಃ ತಾನೂ ಶೋಷಿತನಾಗಿರುವ ಒಬ್ಬ ಒಕ್ಕಲಿಗ ಅತೀ ಸಣ್ಣ ರೈತನು ತನ್ನ ಕಷ್ಟಗಳಿಗೆ ಮೀಸಲಾತಿ ಪಡೆದುಕೊಳ್ಳುತ್ತಿರುವ ದಲಿತರಲ್ಲಿ ಕಾರಣ ಹುಡುಕುವುದು ನಡೆಯುತ್ತದೆ. ಅದೇ ರೀತಿ ವಿವಿಧ ಜಾತಿ-ವರ್ಗಗಳಿಗೆ ಸೇರಿದ ಮಹಿಳೆಯರು ಮುಸ್ಲಿಮರ ಬಗ್ಗೆ ಪೂರ್ವಗ್ರಹವನ್ನು ಹೊಂದಿರುತ್ತಾರೆ. ರೈತ-ಕಾರ್ಮಿಕರೂ ಪರಸ್ಪರ ಪೂರ್ವಗ್ರಹಗಳನ್ನು ಸಾಕಷ್ಟು ಹೊಂದಿದ್ದಾರೆ.

ವಾಸ್ತವವೇನು?

ಅತೀ ಸಣ್ಣ ಸಂಖ್ಯೆಯ ದಲಿತರು ಮಾತ್ರ ಮೀಸಲಾತಿಯ ಲಾಭ ಪಡೆದುಕೊಂಡಿದ್ದಾರೆ. 2006ರ ಅಖಿಲ ಭಾರತ ಅಂಕಿ-ಅಂಶದ ಪ್ರಕಾರ 2ನೇ ಪಿಯುಸಿ ದಾಟುವ ದಲಿತ ಮಕ್ಕಳ ಸಂಖ್ಯೆ ಶೇ.8 ಮಾತ್ರ. ಉನ್ನತ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿಯ ಪ್ರಶ್ನೆ ಉದ್ಭವಿಸುವುದೇ 2ನೇ ಪಿಯುಸಿಯ ನಂತರ. ಏಕೆಂದರೆ, ಇಂದು ತಮ್ಮ ಅವಕಾಶಗಳನ್ನು 'ಪ್ರತಿಭಾವಂತರಲ್ಲದ' ಅಂದರೆ 'ಅಷ್ಟು ಒಳ್ಳೆಯ ಅಂಕ ತೆಗೆಯದ' ದಲಿತರು ಕಿತ್ತುಕೊಳ್ಳುತ್ತಿದ್ದಾರೆ ಎಂಬ ಭಾವ ಪ್ರಬಲವಾಗಿರುವುದು ಉನ್ನತ ಶಿಕ್ಷಣ ಮತ್ತು ಉದ್ಯೋಗದಲ್ಲಿನ ಅವಕಾಶಗಳ ಕುರಿತಾಗಿಯೇ. ಆದರೆ ಇಂದಿಗೂ ದಲಿತ ಸಮುದಾಯದ ಶೇ.92ರಷ್ಟು ಜನ ಈ 'ಅಪರಿಮಿತ' 'ಸ್ವರ್ಗ ಸದೃಶ' ಸೌಲಭ್ಯದ ಹತ್ತಿರಕ್ಕೆ ಸುಳಿದಿಲ್ಲ.

ಎರಡನೆಯದಾಗಿ ಈ ಸೌಲಭ್ಯವನ್ನು ಪಡೆದುಕೊಂಡಿರುವುದು ದಲಿತರು ಮಾತ್ರವಲ್ಲ, ಕರ್ನಾಟಕದಲ್ಲಂತೂ ಮೂರ್‍ನಾಲ್ಕು ಜಾತಿಗಳು ಬಿಟ್ಟರೆ ಮಿಕ್ಕೆಲ್ಲರೂ ಮೀಸಲಾತಿಯನ್ನು ಪಡೆದುಕೊಂಡಿದ್ದಾರೆ. ಹಾಗಿದ್ದ ಮೇಲೆ ಈ ರೀತಿಯ ಪ್ರಚಾರ ಏಕಿದೆ?

ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರಗಳಿಗೂ ಅವರ ಉಡುಪಿಗೂ ನೇರವಾದ ಸಂಬಂಧವಿಲ್ಲದಿರುವುದನ್ನು ಹತ್ತು ಹಲವಾರು ಘಟನೆಗಳು ಸಾಬೀತುಪಡಿಸುತ್ತವೆ. ಆದರೆ, ಇನ್ಯಾರೋ ಮಹಿಳೆ ಕಡಿಮೆ ಉಡುಪಿನಲ್ಲಿ ಇದ್ದುದನ್ನು ನೋಡಿ ಪ್ರಚೋದನೆಗೊಂಡು, ಎಳೆ ಮಕ್ಕಳ ಮೇಲೂ - ಸಾಕಷ್ಟು ಉಡುಪು ಧರಿಸಿದ್ದವರ ಮೇಲೂ ಅತ್ಯಾಚಾರ ಆಗುತ್ತದೆ ಎಂಬ ವಾದವೂ ಇದೆ. ಹಾಗಾದರೆ, ಕಡಿಮೆ ಉಡುಪಿನಲ್ಲಿ ಇರುವ ಪುರುಷರನ್ನು ನೋಡಿ ಪ್ರಚೋದನೆಗೊಂಡು ಮಹಿಳೆಯರೇಕೆ ಪುರುಷರನ್ನು ಲೈಂಗಿಕವಾಗಿ ಹಿಂಸಿಸುತ್ತಿಲ್ಲ ಎಂಬ ಮೂಲಭೂತ ಪ್ರಶ್ನೆ ಎಂದಿಗೂ ಇಂಥವರ ಮನಸ್ಸಿನಲ್ಲಿ ಉದ್ಭವಿಸುವುದೇ ಇಲ್ಲ, ಲೈಂಗಿಕ ಬಯಕೆಯೆನ್ನುವುದು ಇಬ್ಬರಿಗೂ ಇರುತ್ತಾದಲ್ಲಿ, ಅತ್ಯಾಚಾರ, ಲೈಂಗಿಕ ಕಿರುಕುಳಗಳೂ ಇಬ್ಬರಿಗೂ ಆಗಬೇಕಲ್ಲವೇ?

ಜನಸಂಖ್ಯೆಯ ಅರ್ಧದಷ್ಟಿರುವ, ಈ ಜಗತ್ತಿನ ಹೆಚ್ಚು ಹೊರೆಯನ್ನು ಹೊತ್ತುಕೊಂಡಿರುವ ಮಹಿಳೆಯರ ಬಗ್ಗೆ ಇಂಥದ್ದೊಂದು ಅಭಿಪ್ರಾಯವನ್ನು ಪ್ರತೀ ಮನೆಯಲ್ಲಿ ತಾಯಿ, ಮಗಳು, ಹೆಂಡತಿ, ಅಕ್ಕ-ತಂಗಿ ಇತ್ಯಾದಿ ಸಂಬಂಧಗಳನ್ನು ಹೊಂದಿರುವ ಸಮಾಜದಲ್ಲಿ ಏಕಿದೆ? ಮಹಿಳೆಯರ ಮೇಲಿನ ಇಂತಹ ಪೂರ್ವಗ್ರಹಗಳು ಕೇವಲ ಲೈಂಗಿಕ ಹಿಂಸೆಗೆ ಸಂಬಂಧಿಸಿದ್ದಲ್ಲ, ಅದು ಇನ್ನೂ ನೂರಾರು ಆಯಾಮಗಳನ್ನು ಹೊಂದಿದೆ.

ಮುಸ್ಲಿಮರಲ್ಲಿ ಜನಸಂಖ್ಯೆಯ ಬೆಳವಣಿಗೆಯ ದರ



ವಾಸ್ತವದಲ್ಲಿ ಇಳಿಮುಖದಲ್ಲಿದೆ ಎಂಬುದು ಪ್ರತೀ ಹತ್ತು ವರ್ಷಗಳ ಎಲ್ಲಾ ಗಣತಿಗಳೂ ಸಾಬೀತುಪಡಿಸಿವೆ. ಆದರೆ, ಅದು ಹಿಂದೂಗಳ ಜನಸಂಖ್ಯೆಯ ಬೆಳವಣಿಗೆಯ ದರಕ್ಕಿಂತ ಹೆಚ್ಚಿದೆಯೆಂಬುದು ನಿಜ. ಭಾರತದಲ್ಲೂ ಸೇರಿದಂತೆ ಜಗತ್ತಿನೆಲ್ಲೆಡೆ ಬದುಕಿನ ಭದ್ರತೆ, ಶಿಕ್ಷಣ, ಆರೋಗ್ಯದ ಸ್ಥಿತಿ-ಗತಿ ಇವುಗಳಲ್ಲಿ ಬರುವ ಬೆಳವಣಿಗೆಯು ಜನಸಂಖ್ಯೆಯ ಬೆಳವಣಿಗೆಯ ದರವನ್ನು ನಿರ್ಧರಿಸಿದೆ ಎಂಬುದು ಕಾಣುತ್ತದೆ. ಬಡವರ ಮನೆಯಲ್ಲೇ ಮಕ್ಕಳು ಹೆಚ್ಚು ಎಂಬುದೂ ಕಾಣುತ್ತದೆ. ಆದರೆ, ಮುಸ್ಲಿಮರನ್ನು ಗುರಿಯಾಗಿಸಿಕೊಂಡು ಅಂಕಿ-ಅಂಶಗಳಲ್ಲಿ ತಮಗೆ ಬೇಕಾದ್ದನ್ನು ಆಯ್ದುಕೊಂಡು ತಪ್ಪು ಅಭಿಪ್ರಾಯ ಹೇಗೆ ಸೃಷ್ಟಿ ಮಾಡಲಾಗುತ್ತದೆ? ಭಾರತದ ಮುಸ್ಲಿಮರಲ್ಲಿ ಶೇಕಡಾ ಎಷ್ಟು ಭಾಗ ಪ್ರತ್ಯಕ್ಷವಾಗಿಯಾಗಲೀ, ಪರೋಕ್ಷವಾಗಿಯಾಗಲೀ ಭಯೋತ್ಪಾದಕ ಚಟುವಟಿಕೆಗಳಲ್ಲಿ ಭಾಗಿಯಾಗಿರುವ ಸಾಧ್ಯತೆ ಇದೆ. ಒಂದು ವೇಳೆ ಅದು ಶೇ.1ರಷ್ಟಿದ್ದರೂ ಈ ದೇಶ ಪ್ರತಿನಿತ್ಯ ರಣರಂಗವಾಗಿರುತ್ತಿರಲಿಲ್ಲವೇ?

ಹಾಗೆಯೇ ರೈತ-ಕಾರ್ಮಿಕರ ವಿಚಾರ. ಪ್ರತೀ ವರ್ಷ ಉತ್ಪಾದನೆ ಹೆಚ್ಚಳವಾಗುತ್ತಿದ್ದರೂ, ಈ ವರ್ಗಗಳು ಸೋಮಾರಿಗಳು ಎಂಬ ಮಾತನ್ನು ಒಂದಲ್ಲ ಒಂದು ಕಡೆಯಲ್ಲಿ ಕೇಳುತ್ತಿರಬೇಕಾಗುತ್ತದೆ. ಇಡೀ ಸಮಾಜದಲ್ಲೇ ತಂತ್ರಜ್ಞಾನ, ಯಂತ್ರೋಪಕರಣಗಳ ಬೆಳವಣಿಗೆಯಾದಂತೆಲ್ಲಾ ಕಠಿಣ ಶ್ರಮದ ಪ್ರಮಾಣ ಕಡಿಮೆಯಾಗುತ್ತಿರುತ್ತದೆ. ಆದರೂ, ಒಟ್ಟಾರೆ ಸಮಾಜದಲ್ಲಿ ಹೆಚ್ಚಿನ ಶ್ರಮವನ್ನು ರೈತ-ಕಾರ್ಮಿಕರೇ ಹಾಕುತ್ತಿರುತ್ತಾರೆ. ಆದರೂ, ಅವರು ಇನ್ನೂ ಯಾಕೆ ನೂರು ವರ್ಷಗಳ ಹಿಂದೆ ಇದ್ದಂತೆ ಶ್ರಮಪಟ್ಟು ಕೆಲಸ ಮಾಡುತ್ತಿಲ್ಲ ಎಂಬ ಪ್ರಶ್ನೆ ಪದೇ ಪದೇ ಬರುತ್ತಿರುತ್ತದೆ.

ಇಷ್ಟು ವ್ಯಾಪಕವಾಗಿರುವ, ದುಡಿವ ಸಮುದಾಯಗಳ, ಶೋಷಿತ ಸಮುದಾಯಗಳ ವಿರುದ್ಧದ ಪ್ರಚಾರ ಯಾಕೆ ಮತ್ತು ಹೇಗೆ ನಡೆಯುತ್ತದೆ? ಇದು ವ್ಯವಸ್ಥಿತವಾ, ಅಲ್ಲವಾ? ಇದು ವ್ಯವಸ್ಥಿತವಾದದ್ದು, ವ್ಯವಸ್ಥಿತ ಎಂದಕೂಡಲೇ ಕೆಲವು ವ್ಯಕ್ತಿಗಳು ಕೂತು ಸಭೆ ಸೇರಿ, ಯೋಜಿಸಿ, ಕರಪತ್ರ ಇತ್ಯಾದಿಗಳನ್ನು ಮುದ್ರಿಸಿ ಹಂಚಿ ಪ್ರಚಾರ ಮಾಡಿದರು ಎಂದು ಅರ್ಥವಲ್ಲ, ಆದರೆ, ಈ ವ್ಯವಸ್ಥೆಯ ಒಳಗೇ ಇಂಥದ್ದನ್ನು ಹರಿಯಬಿಡುವ ಒಂದು ಅಘೋಷಿತವಾದ ಯಂತ್ರಾಂಗವಿದೆ.

ಇದನ್ನು ನಮ್ಮ ಮಾಧ್ಯಮಗಳ ಪಾತ್ರದಿಂದ ಆರಂಭಿಸಬಹುದು. ಮುಸ್ಲಿಮರ ವಿಚಾರದಲ್ಲಿ ಅದು ನೇರವಾಗಿಯೇ ಪೂರ್ವಗ್ರಹವನ್ನು ಬಿತ್ತುವ ಕೆಲಸ ಮಾಡುತ್ತದೆ. ಆದರೆ, ಉಳಿದಂತೆ ಅದರದ್ದು ಪ್ರತ್ಯಕ್ಷಕ್ಕಿಂತಲೂ ಪರೋಕ್ಷ ಪಾತ್ರ ಹೆಚ್ಚು. ಅಂದರೆ, ಘಟನೆಯೊಂದು ನಡೆದಾಗ ಆ ಘಟನೆಯನ್ನು ಖಂಡಿಸುವ ವರದಿಗಳೇನೋ ಪ್ರಕಟಗೊಳ್ಳುತ್ತವೆ, ಬಿತ್ತರವಾಗುತ್ತವೆ. ಆದರೆ ಅದಕ್ಕೆ ಮುಂಚೆ ಅಂತಹ ಘಟನೆ ನಡೆಯಲು ಬೇಕಾದ ವಾತಾವರಣವನ್ನು ಇದೇ ಮಾಧ್ಯಮಗಳು ಸೃಷ್ಟಿ ಮಾಡಿರುತ್ತವೆ. ಬೇರೆಲ್ಲದಕ್ಕಿಂತಲೂ ಮಹಿಳೆಯರ ಮೇಲಿನ ದೌರ್ಜನ್ಯಗಳು, ಲೈಂಗಿಕ ಹಿಂಸೆಯ ವಿಚಾರದಲ್ಲಿ ಇದು ಸ್ಪಷ್ಟವಾಗಿ ಗೋಚರಿಸುತ್ತದೆ. ಮಹಿಳೆಯನ್ನು ಒಂದು ಸರಕೆಂದು ಬಿಂಬಿಸುವಲ್ಲಿ, ಆಕೆಯನ್ನು ಸೆಕ್ಸ್ ಬೊಂಬೆಯಂತೆ ತೋರುವಲ್ಲಿ, ಮಹಿಳೆಯನ್ನು ಎರಡನೆಯ ದರ್ಜೆ ಪ್ರಜೆಯನ್ನಾಗಿ ಚಿತ್ರಿಸುವ ಎಲ್ಲಾ ಕೆಲಸವನ್ನೂ ಮಾಡುವ ಮಾಧ್ಯಮವು ಅತ್ಯಾಚಾರಗಳು ಹೆಚ್ಚಾದಾಗ ಸರ್ಕಾರದತ್ತ ಬೆರಳು ಮಾಡಿ ತೋರಿಸಿ ಸುಮ್ಮನಾಗುತ್ತದೆ. ಇಂತಹುದೇ ಕೆಲಸವನ್ನು ಅದು ಉಳಿದ ಶೋಷಿತ ಸಮುದಾಯಗಳ ವಿಚಾರದಲ್ಲೂ ಮಾಡುತ್ತದೆ.

ಅದು ಭಾಷೆ, ವ್ಯಾಕರಣ, ಪುನರಾವರ್ತನೆ, ಆಯ್ಕೆ, ಆದ್ಯತೆ ಇತ್ಯಾದಿಗಳಲ್ಲಿ ವ್ಯಕ್ತವಾಗುತ್ತದೆ. ಒಂದು ಉದಾಹರಣೆ ನೋಡೋಣ. ಕೆಲ ವರ್ಷಗಳ ಹಿಂದೆ ಕೊಲ್ಕೊತ್ತಾದಲ್ಲಿ ನಡೆದ ಘಟನೆಯೊಂದನ್ನು ರಾಷ್ಟ್ರೀಯ ವಾಹಿನಿಯೊಂದು ತನ್ನದೇ ಟಿಪಿಕಲ್ ರೀತಿಯಲ್ಲಿ ವರದಿ ಮಾಡಿತ್ತು. ತಮ್ಮ ನ್ಯಾಯಯುತ ಹಕ್ಕುಗಳಿಗಾಗಿ ಸೆಣಬಿನ ಕಾರ್ಖಾನೆ ಕಾರ್ಮಿಕರು ಮುಷ್ಕರನಿರತರಾಗಿದ್ದರು. ಅವರ ಮೇಲೆ ಅಂತಹ ಮುಖ್ಯ ಕಾರಣಗಳಿಲ್ಲದೇ ಪೊಲೀಸರು ಗುಂಡು ಹಾರಿಸಿ ಇಬ್ಬರನ್ನು ಕೊಂದರು. ಕಾರ್ಮಿಕರು ಆಕ್ರೋಶಗೊಂಡು ಪೊಲೀಸರ ಮೇಲೆ ತಿರುಗಿಬಿದ್ದರು. ಆ ಗಲಾಟೆಯಲ್ಲಿ ಒಬ್ಬ ಪೊಲೀಸ್ ಸಿಬ್ಬಂದಿಯನ್ನು ಕೊಂದರು. ಇದನ್ನು ಟಿವಿ ಈ ರೀತಿಯಲ್ಲಿ ವರದಿ ಮಾಡಿತ್ತು - 'ಕೊಲ್ಕೊತ್ತಾದ ಸೆಣಬಿನ ಕಾರ್ಖಾನೆಯಲ್ಲಿ ತಲೆದೋರಿದ್ದ ಉದ್ವಿಗ್ನ ಪರಿಸ್ಥಿತಿಯ ಸಂದರ್ಭದಲ್ಲಿ ಪೆ[...] ಬಂದೂಕಿನಿಂದ ಹಾರಿದ ಗುಂಡು ಇಬ್ಬರು ಕಾ[...] ಬಲಿ ತೆಗೆದುಕೊಂಡಿತು. ಆ ನಂತರ ಗಲ[...] ಕಾರ್ಮಿಕರು ಒಬ್ಬ ಪೊಲೀಸ್ ಸಿಬ್ಬಂದಿಯನ್ನು [...] ಹಾಕಿದರು.'

ಇದಕ್ಕಿಂತಲೂ ಗಂಭೀರವಾದದ್ದು ಸಮ[...] ವ್ಯವಸ್ಥೆಯಲ್ಲಿನ ದೋಷ. ಅದು ಏನನ್ನು ಮಾ[...] ಮೂಲಕ ಸಮಾಜದಲ್ಲಿ ಶೋಷಿತ ಸಮುದಾಯ[...] ತಪ್ಪು ಅಭಿಪ್ರಾಯವನ್ನು ಮೂಡಿಸುತ್ತಿದೆ ಎಂಬ[...] ಯಾವುದನ್ನು ಮಾಡದೇ ಒಂದು ರೀತಿಯ ಅಭಿಪ್[...] ಸಮಾಜದಲ್ಲಿ ನೆಲೆಗೊಳಿಸುತ್ತಿದೆ ಎಂಬುದಕ[...] ಮಹತ್ವವಿದೆ.

ಅಂದರೆ, ಒಂದು ಸಮಾಜದಲ್ಲಿ 'ಕಾವ[...] ಎಂಬಂತೆ ಹರಿಯಬಿಡಲಾಗುವ ಅಭಿಪ್ರಾಯಗಳ[...] ತಾನೇ ಚಲಾವಣೆಯಲ್ಲಿರುವುದಿಲ್ಲ, ಇದರಲ್ಲಿ ಸ[...] ಆಳುವ ವರ್ಗಗಳ ಪಾತ್ರ ಕೀಲಕವಾದದ್ದು. ನಿರ[...] ಆರ್ಥಿಕವಾಗಿ, ರಾಜಕೀಯವಾಗಿ, ಸಾಮಾ[...] ಸಾಂಸ್ಕೃತಿಕವಾಗಿ ಕೈಗೊಳ್ಳಬೇಕಿರುವ ಕ್ರ[...] ಆಲೋಚನೆಗಳು ಹಾಗೂ ಯೋಜನೆಗಳ [...] ಪ್ರಜಾಪ್ರಭುತ್ವವನ್ನು ನೆಲೆಗೊಳಿಸಬಹುದೇ ಹೊರ[...] ನ್ಯೂಟ್ರಲ್' ಎಂಬ ನಿಲುವಿನಂದಲ್ಲ, ಅ[...] ಅಪ್ರಜಾತಾಂತ್ರಿಕತೆ ಐತಿಹಾಸಿಕವಾಗಿ ನೆಲೆಗ[...] ಒಂದು ಸಮಾಜದಲ್ಲಿ ಈ ತಟಸ್ಥತೆಯು [...] ಅಸಮಾನತೆಯನ್ನು ಹೆಚ್ಚಿಸುತ್ತದೆ.

ಆದರೆ, ಅದಕ್ಕೆ ಸ್ವತಃ ದುಡಿಯುವ ಸಮುದ[...] ಬಲಿಯಾಗುವುದು ಮಾತ್ರ ದುರಂತದ ಸಂಗ[...] ಇನ್ನೊಂದು ಶೋಷಿತ ಸಮುದಾಯದ [...] ಮಾತನಾಡುವುದರ ಮೂಲಕ ತನ್ನ [...] ವಾದಿಸಿಕೊಳ್ಳುತ್ತಿದ್ದೇನೆ ಎಂಬ ಅರಿವು ಅವಕ[...] ಇದರರ್ಥ ಲೇಖನದ ಆರಂಭದಲ್ಲಿ ಹೇಳ[...] ಅಂಶಗಳಿಗೆ ಆಯಾ ಸಮುದಾಯಗಳು ಎಳ್ಳಷ್ಟೂ [...] ಎಂದಲ್ಲ, ಆದರೆ, ಬಿಡಿ ಕಾರ್ಮಿಕರಲ್ಲಿ, ಬಿಡಿ [...] ಬಿಡಿ ಮಹಿಳೆಯರಲ್ಲಿ, ಬಿಡಿ ದಲಿತರಲ್ಲಿ, ಬಿಡಿ ವ[...] ಇರುವ ಸಮಸ್ಯೆಗಳನ್ನು ಇಡಿ ಇಡೀ ಸಮುದಾ[...] ಆರೋಪಿಸುವ ಪ್ರವೃತ್ತಿಯ ಹಿಂದೆ ಒಂದು ರಾಜ[...] ಅದು ವ್ಯವಸ್ಥಿತ ರಾಜಕಾರಣವೂ ಆಗಿದೆ.

ದೇಶದ ಎಲ್ಲ ಜನಸಮುದಾಯಗಳ [...] ಅಧಿಕಾರಸ್ಥರು ಮತ್ತು ರೊಕ್ಕಸ್ಥರು ಸಮರ ಸ[...] ಈ ಸಂದರ್ಭದಲ್ಲಿ ಈ ರಾಜಕಾರಣದ ವಿರು[...] ವ್ಯವಸ್ಥಿತ ವಿಚಾರಾಂದೋಲನದ ಅಗತ್ಯವೂ [...]

ಲಂಕೇಶ್ ಪ್ರಕಾಶನದ ಪುಸ್ತಕಗಳು

ಕರ್ನಾಟಕದ ಎಲ್ಲಾ ಪ್ರಮುಖ ಪುಸ್ತಕ ಮಳಿಗೆಗಳಲ್ಲಿ ಲಭ್ಯವಿ[...]
ಹೆಚ್ಚಿನ ಮಾಹಿತಿಗಾಗಿ ಫೋನ್: 080-26676427

ಪಿ.ಲಂಕೇಶರ ಕೃತಿಗಳು

ಕತೆ-ಕಾದಂಬರಿ

ಮುಸ್ಸಂಜೆಯ ಕಥಾ ಪ್ರಸಂಗ	250.00
ಬಿರುಕು	60.00
ಅಕ್ಕ	80.00
ಮಂಜು ಕವಿದ ಸಂಜೆ	85.00
ಉಮಾಪತಿ ಸ್ಕಾಲರ್‌ಶಿಪ್ ಯಾತ್ರೆ	70.00
ಕಲ್ಲು ಕರಗುವ ಸಮಯ	125.00
ನಾನಲ್ಲ	60.00
ಕೆರೆಯ ನೀರನು ಕೆರೆಗೆ ಚೆಲ್ಲಿ	50.00
ಉಲ್ಲಂಘನೆ	80.00

ಲೇಖನಗಳ ಸಂಗ್ರಹಗಳು

ಟೀಕೆ-ಟಿಪ್ಪಣಿ 1	200.00
ಟೀಕೆ-ಟಿಪ್ಪಣಿ 2	200.00
ಟೀಕೆ-ಟಿಪ್ಪಣಿ 3	200.00
ಮರೆಯುವ ಮುನ್ನ-ಸಂಗ್ರಹ 1	150.00
ಮರೆಯುವ ಮುನ್ನ-ಸಂಗ್ರಹ 2	150.00
ಮರೆಯುವ ಮುನ್ನ-ಸಂಗ್ರಹ 3	150.00
ಮನಕೆ ಕಾರಂಜಿಯ ಸ್ಪರ್ಶ	150.00
ಈ ನರಕ ಈ ಪುಲಕ	125.00
ಆಟ-ಜೂಜು-ಮೋಜು!	150.00

ಸಾಹಿತಿ ಸಾಹಿತ್ಯ ವಿಮರ್ಶೆ
ರೂಪಕ ಲೇಖಕರು
ಕಂಡದ್ದು ಕಂಡಹಾಗೆ
ಪ್ರಸ್ತುತ
ಪಾಂಚಾಲಿ

ಲಂಕೇಶ್‌ರ ಕವನ ಸಂಗ್ರಹ[...]

ನೀಲು ಕಾವ್ಯ -ಸಂಗ್ರಹ 1
ನೀಲು ಕಾವ್ಯ -ಸಂಗ್ರಹ 2
ನೀಲು ಕಾವ್ಯ -ಸಂಗ್ರಹ 3
ಚಿತ್ರ ಸಮೂಹ
ಅಕ್ಷರ ಹೊಸ ಕಾವ್ಯ
ಪಾಪದ ಹೂಗಳು

ಆತ್ಮಕಥನ

ಹುಳಿಮಾವಿನ ಮರ

ಲಂಕೇಶ್‌ರ ನಾಟಕಗಳ[...]

ಬಿರುಕು
ಸಂಕ್ರಾಂತಿ
ತೆರೆಗಳು
ಈಡಿಪಸ್ ಮತ್ತು ಅಂತಿಗೊನೆ
ಟಿ. ಪ್ರಸನ್ನನ ಗೃಹಸ್ಥಾಶ್ರಮ
ಗುಣಮುಖ
ಕ್ರಾಂತಿ ಬಂತು ಕ್ರಾಂತಿ

ಶಾಮಣ್ಣ ಎಂಬ ಚಿರ ಯೌವ್ವನಿಗ....

ಕಂಡಹಾಗೆ



• ಗೌರಿ ಲಂಕೇಶ್
editorlankesh@gmail.com

ಮಿತ್ರರೊಂದಿಗೆ ಅಪ್ಪನ ಭೇಟಿಗಳು ಹೆಚ್ಚಾಗಿ ...ಯುತ್ತಿದ್ದದ್ದು ಅವರು ಪಾಠ ಹೇಳುತ್ತಿದ್ದ ಕಾಲೇಜಿನಲ್ಲಿ ...ಅನಂತರ ಪತ್ರಿಕೆಯ ಆಫೀಸಿನಲ್ಲಿ. ಇನ್ನು ಅಪ್ಪ ...ಊ ತನ್ನ ಊರೂರು ಸುತ್ತಾಟಕ್ಕೆಂದು ನಮ್ಮನ್ನು ...ಕೊಂಡು ಹೋದದ್ದು ಇಲ್ಲವಾದ್ದರಿಂದ ಅವರ ಮಿತ್ರರ ...ಯವೂ ನಮಗಿರಲಿಲ್ಲ. ಜೊತೆಗೆ ಅಪ್ಪ ತನ್ನ ಸ್ನೇಹಿತರ ...ಮ್ಮೊಂದಿಗೆ ಚರ್ಚಿಸುತ್ತಿರಲಿಲ್ಲವಾದ್ದರಿಂದ ಅವರಲ್ಲಿ ...ರ ಹೆಸರುಗಳು ನಮಗೆ ಗೊತ್ತಿರುತ್ತಿತ್ತೇ ಹೊರತು ...ಬಗ್ಗೆ ನಮಗೆ ಏನೇನೂ ಗೊತ್ತಿರುತ್ತಿರಲಿಲ್ಲ. ಹಾಗಾಗಿ ...ಮನೆಗೆ ಹೆಚ್ಚಾಗಿ ಬರುತ್ತಿದ್ದ ಕಿ.ರಂ.ನಾಗರಾಜ್, ಕೆ. ...ಳಸಿದ್ದಪ್ಪ, ಅಗ್ರಹಾರ ಕೃಷ್ಣಮೂರ್ತಿ, ...ಸೀತಾರಾಮ್ ಇಂತಹವರು ನಮಗೆ ಗೊತ್ತಿದ್ದರೆ ...ಉ ಮಿಕ್ಕವರಲ್ಲ.

...ಕಾರಣಕ್ಕೇ ಇರಬೇಕು, ಅಪ್ಪ ಮತ್ತು ಕಡಿದಾಳು ...ಣ್ಣ ಹಲವು ದಶಕಗಳ ಮಿತ್ರರಾಗಿದ್ದರೂ ನನಗೆ ...ಣ್ಣನವರನ್ನು 'ಪರಿಚಯಿಸಿದ್ದು' ಅಪ್ಪ ಅಲ್ಲ, ...ಗಿ ಪೂರ್ಣಚಂದ್ರ ತೇಜಸ್ವೀ ಎಂದರೆ ...ಅದೂ ಹೇಗೆಂದರೆ ತೇಜಸ್ವಿಯವರು ...ಯಲ್ಲಿ 'ಅಣ್ಣನ ನೆನಪು' ...ಲಾರಂಭಿಸಿದಾಗ ನಾನು ಶಾಮಣ್ಣನವರನ್ನು ...ಉ ಭೇಟಿಯಾದೆ! ಮೊದಮೊದಲು ...'ಅಣ್ಣನ ನೆನಪು' ಅಂಕಣದ ಮೇಲೆ ...ಯುತ್ತಿದ್ದೆ. ಆದರೆ ಯಾವಾಗ 'ಬುಲ್‌ಬುಲ್ ...' ಎಂಬ ಶೀರ್ಷಿಕೆಯಡಿ ಪ್ರಕಟಗೊಂಡ ...ಮಲ್ಲಿ ಶಾಮಣ್ಣ ಭರ್ಜರಿಯಾದ ಎಂಟ್ರಿ ...ಟೋ ಅವತ್ತಿನಿಂದ ಅದನ್ನು ತಪ್ಪದೇ ...ರಂಭಿಸಿದೆ. ಸಂಗೀತದ ಬಗ್ಗೆ ತೇಜಸ್ವಿ ...ಶಾಮಣ್ಣ ಹುಚ್ಚು ಹಿಡಿಸಿಕೊಂಡು ...ದ ಅಪರಾತಪರಾಗಳನ್ನು ಓದುತ್ತಾ ...ಣ್ಣ ಸುಸ್ತಾಗುತ್ತಿದ್ದೆ. ಗ್ರಾಮಾಫೋನ್ ಅನ್ನೇ ...ನ್ನಾಗಿಸಿಕೊಳ್ಳುವ ಪ್ರಯತ್ನ, ಶಾಮಣ್ಣನವರ ...'ದಂತವಾದ್ಯ', ಸಂಗೀತ ಅಭ್ಯಾಸದಿಂದ ...ನಲ್ಲಿ ಅವರಿಬ್ಬರೂ ಎಬ್ಬಿಸಿದ ರಾದ್ಧಾಂತ, ...ನ್ನನ ಶಹನಾಯ್ ಜೊತೆ ನಾಯಿಗಳ ...ಬಂಧಿ, 'ಹುಚ್ಚು ಕುದುರೆ' ಎಂಬ ...ಡ್ ... ಇವನ್ನೆಲ್ಲಾ ಯಾರಾದರೂ ...ಯ್ ಮಾಡದೆ ಇರಲು ಸಾಧ್ಯವಾ? ...ಣ್ಣನವರ ಸಂಗೀತದ ಗೀಳು ಮತ್ತು ...ಯವರ ಬರಹದ ಶೈಲಿಯಲ್ಲಿ ...ಬಂದ ಆ ನೆನಪುಗಳು ಇವತ್ತಿಗೂ ...ಗಿವೆ. ಎಷ್ಟರಮಟ್ಟಿಗೆಂದರೆ ಇದನ್ನು ...ವ ಮುನ್ನ 'ಅಣ್ಣನ ನೆನಪು' ಪುಸ್ತಕದ ಹಾಳೆಗಳನ್ನು ...ಹಾಕುತ್ತಿದ್ದ ನಾನು ಈ ಅಂಕಣ ಬರೆಯುವುದನ್ನೇ ...ಅದನ್ನೇ ಓದುತ್ತಾ ಕೂತೆ. ಈಗ ಬಲವಂತವಾಗಿ ...ಬಿಟ್ಟು ಈ ಕೆಲಸಕ್ಕೆ ಹಿಂದಿರುಗಿದ್ದೇನೆ!

...ತಹ ಶಾಮಣ್ಣನವರನ್ನು ಆಮೇಲೆ ನನಗೆ ಮತ್ತೆ ...ಯಿಸಿದ್ದು' ನಮ್ಮ ಬಿ.ಚಂದ್ರೇಗೌಡ. ನಾನು ಪತ್ರಿಕೆಯ ...ದ್ದಾರಿಯನ್ನು ವಹಿಸಿಕೊಂಡ ನಂತರ ಗೌಡರು ...ಳು ಶಾಮಣ್ಣನ ಶೌಚಾಲಯಗಳು' ಎಂಬ ...ವನ್ನು ಬರೆದರು. ಅದು ಶಾಮಣ್ಣ ತಮ್ಮ ...ಕೆರೆಯಲ್ಲಿ ಶೌಚಾಲಯಗಳನ್ನು ಕಟ್ಟಿಸಲು ಮಾಡಿದ ...ಟ ಕುರಿತ ಹಾಸ್ಯಮಯ ಲೇಖನವಾಗಿತ್ತು. ಆದಾದ ...ಸಮಯದ ನಂತರ ಯಾವುದೋ ಕಾರಣಕ್ಕೆ ...ಗ್ಗೆ ಹೋದೆ. ಆಗ ಗೌಡರು "ಬಾರವ್ವ, ಶಾಮಣ್ಣನ ...ಹೋಗೋಣ" ಎಂದರು. ಇಬ್ಬರೂ ಕಾರನ್ನೇರಿ ...ರೆಯತ್ತ ಹೋದೆವು. ದಾರಿಯಲ್ಲಿ ಹಲವು ಮನೆಗಳ ...ಹಾಳು ಬಿದ್ದ ಶೌಚಾಲಯಗಳನ್ನು ತೋರಿಸಿದ ...'ನೋಡವ್ವ, ನಮ್ಮ ಶಾಮಣ್ಣ ಕಷ್ಟಪಟ್ಟು ...ಯಗಳನ್ನು ಕಟ್ಟಿಸಿಕೊಟ್ಟಿದ್ದರೆ ಜನ ಅವುಗಳನ್ನು ...ಗಿಸದೆ ಈಗಲೂ ಬಯಲಲ್ಲೇ ಬಹಿರ್ದೆಸೆಗೆ ...ರೆ. ಬೆಳಗ್ಗೆ ಎದ್ದು ಇವರೆಲ್ಲಾ ಶೌಚಾಲಯವನ್ನು ...ಗಿಸುತ್ತಿದ್ದಾರೋ ಇಲ್ಲವೋ ಎಂದು ಚೆಕ್ ...ವುದೇ ಶಾಮಣ್ಣನವರಿಗೆ ದೊಡ್ಡ ತಲೆನೋವಾಗಿತ್ತು ...ಶೌಚಾಲಯಗಳನ್ನು ಜನ ಕಸ, ಸಗಣಿ ಹಾಕುವ ...ಟಿಕೊಂಡಿದ್ದಾರೆ. ಇವರನ್ನೆಲ್ಲ ಶಾಮಣ್ಣ ಅದು ...ಗೆ ಮಾಡುತ್ತಾರೋ" ಎಂದು ನಕ್ಕಿದ್ದರು.

...ಶಾಮಣ್ಣನವರ ತೋಟದಲ್ಲಿ ಸುತ್ತಾಡುತ್ತಿದ್ದಾಗ ...ಪಾಮ್ ಮರಗಳ ಕಾಂಡಗಳು ಬಿದ್ದದ್ದು ...ಅಲ್ಲಿಯತನಕ ನಾನು ಪಾಮ್ ಆಯಿಲ್ ...ನೋಡಿರಲಿಲ್ಲ, ಚೂಪಾದ ಚಿಪ್ಪುಗಳನ್ನು ...ದ್ದ ಆ ಕಾಂಡಗಳು ಕೆರೆ ಪಕ್ಕದಲ್ಲಿ ಒಂದಿಷ್ಟು ...ಬಿದ್ದಿರುವ ಮೊಸಳೆಗಳಂತೆ ಕಾಣಿಸುತ್ತಿದ್ದವು. ...ಶಾಮಣ್ಣನವರೇ?" ಎಂದು ಕೇಳಿದೆ. ಆಗ ಅವರು ತಮ್ಮ ಪಾಮ್ ಆಯಿಲ್ ಆಂದೋಲನದ ಬಗ್ಗೆ ನಗುನಗುತ್ತಲೇ ಹೇಳಿದರು.

ಏನಾಗಿತ್ತೆಂದರೆ ಅದಕ್ಕೂ ಮುನ್ನ ಭದ್ರಾವತಿಯಲ್ಲಿ ಅದ್ಯಾರೋ ಒಬ್ಬರು ಪಾಮ್ ಆಯಿಲ್ ಕಾರ್ಖಾನೆಯನ್ನು ತೆರೆದು ಸುತ್ತಮುತ್ತಲಿನ ರೈತರಿಗೆ ಪಾಮ್ ಮರಗಳನ್ನು ಬೆಳೆಯುವಂತೆ ಉತ್ತೇಜಿಸಿದ್ದರು. ಅಷ್ಟೇ ಅಲ್ಲ, ಕಾರ್ಖಾನೆಯವರು ತೋಟಗಳಿಗೆ ಬಂದು ಸಂಗ್ರಹಿಸಿದ ಪಾಮ್ ಹಣ್ಣುಗಳಿಗೆ ಅವತ್ತೇ ಚೆಕ್‌ಗಳನ್ನೂ ನೀಡಲಾರಂಭಿಸಿದರು. ಅದನ್ನು ಕಂಡು ಶಾಮಣ್ಣ ಚಕಿತರಾದರು. ರೈತರ ಎಲ್ಲಾ ಸಮಸ್ಯೆಗಳಿಗೆ ಪಾಮ್ ಹಣ್ಣುಗಳೇ 'ಸಂಜೀವಿನಿ' ಎಂದು ಅವರು ಭಾವಿಸಿದರು. ಶಾಮಣ್ಣ ಎಂತಹವರೆಂದರೆ ಅದು ರೈತ ಚಳವಳಿಯಾಗಲಿ, ಶೌಚಾಲಯ ಚಳವಳಿಯಾಗಲಿ, ಮತ್ತಿನ್ನೇನೋ ಆಗಲಿ, ಒಂದು ಸಾರಿ ಒಂದು ವಿಷಯ ಅವರ ತಲೆ ಹೊಕ್ಕರೆ ಸಾಕು ಅವರು ಕಾರ್ಯಪ್ರವೃತ್ತವಾಗದೆ ಸುಮ್ಮನೆ ಕೂರುವವರಲ್ಲ. ಹಾಗಾಗಿ ಅವರು ಸ್ವತಃ ಪಾಮ್ ಸಸಿಗಳನ್ನು ನೆಟ್ಟರಲ್ಲದೆ ಇತರೆ ರೈತರೂ ಅದನ್ನು ಬೆಳೆಯುವಂತೆ ಒತ್ತಾಯಿಸಿದರು. ಪರಿಣಾಮವಾಗಿ ಸುತ್ತಮುತ್ತಲೂ ಹಲವಾರು ಪಾಮ್ ತೋಟಗಳು ಎದ್ದುನಿಂತವು. ಆದರೆ ಅದೇನೇನೋ ಸಮಸ್ಯೆಯಾಗಿ ರೈತರಿಂದ ಪಾಮ್ ಹಣ್ಣನ್ನು ಖರೀದಿಸುತ್ತಿದ್ದ ಕಾರ್ಖಾನೆಯೇ ಬಂದ್ ಆಯಿತು. ಇನ್ನು ಪಾಮ್ ಬೆಳೆದು ಏನು ಪ್ರಯೋಜನ? ವಿಧಿ ಇಲ್ಲದೆ ಶಾಮಣ್ಣ ಸೇರಿದಂತೆ ಎಲ್ಲ ರೈತರೂ ಪಾಮ್ ಮರಗಳನ್ನು ಕೆಡವಿ ಅಡಿಕೆ ಸಸಿಗಳನ್ನು ನೆಟ್ಟಿದ್ದರು.

"ಈಗ ಈ ಕಾಂಡಗಳನ್ನು ಏನು ಮಾಡುತ್ತೀರಿ?" ಎಂದು ಕೇಳಿದೆ. "ಇನ್ನೇನು ಮಾಡೋದು, ಅವು ಅಲ್ಲೇ ಕೊಳೆತು ಗೊಬ್ಬರವಾಗಬೇಕಷ್ಟೇ" ಎಂದು ಶಾಮಣ್ಣ ನಕ್ಕರು. ಸೋತ ಪ್ರಯೋಗದ ಬಗ್ಗೆ ಅವರಲ್ಲಿ ಕಿಂಚಿತ್ತೂ ಬೇಸರ ಇದ್ದಂತಿರಲಿಲ್ಲ.

ಶಾಮಣ್ಣ 'ಮೂಡ್'ನಲ್ಲಿದ್ದರೆ ಸಖತ್ ಮಜಾ ಕೊಡುತ್ತಾರೆ. ಮೂಡ್‌ನಲ್ಲಿಲ್ಲದಿದ್ದರೆ ಅವರು ಮಾತನ್ನೇ ಆಡುವುದಿಲ್ಲ. ನಮ್ಮ ಅದೃಷ್ಟಕ್ಕೆ ಅವತ್ತು ಶಾಮಣ್ಣ 'ಮೂಡ್'ನಲ್ಲಿದ್ದರು. ಅಪ್ಪ ಅವರ ತೋಟಕ್ಕೆ ಭೇಟಿ ಕೊಟ್ಟಾಗ ಆದದ್ದನ್ನೆಲ್ಲ ಹೇಳುತ್ತಾ ನಮ್ಮಿಬ್ಬರನ್ನು ನಗಿಸಿದರು. ಜೊತೆಗೆ ತಮ್ಮ ಸರೋದ್ ಅನ್ನೂ ಮರೆಯದೆ ನಮ್ಮ ಮುಂದೆ ನುಡಿಸಿದರು.

2008ರ ವಿಧಾನಸಭಾ ಚುನಾವಣೆಗಳು ಬಂದವು. ತೀರ್ಥಹಳ್ಳಿಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಆರಗ ಜ್ಞಾನೇಂದ್ರ ಸ್ಪರ್ಧಿಸಿದರೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಕಿಮ್ಮನೆ ರತ್ನಾಕರ್‌ಗೆ ಟಿಕೆಟ್ ಸಿಕ್ಕಿತ್ತು. ನಮ್ಮೆಲ್ಲರಿಗೂ ಕಿಮ್ಮನೆ ಗೆಲ್ಲಬೇಕೆಂಬ ಆಶಯ ಇತ್ತು. ಆದರೆ ಆ ಚುನಾವಣೆಯಲ್ಲಿ ದೇವೇಗೌಡರು ತಮ್ಮ ಜನತಾ ದಳದ ಅಭ್ಯರ್ಥಿಯಾಗಿ ಗೋಪಾಲಗೌಡರ ಪುತ್ರ ರಾಮ್‌ಮನೋಹರ್ ಅವರನ್ನು ಕಣಕ್ಕೆ ಇಳಿಸಿದರು. ನಮಗೆಲ್ಲ ಒಂದೇ ಆತಂಕ: ರಾಮ್‌ಮನೋಹರ್ ಮತ್ತು ಕಿಮ್ಮನೆ ನಡುವೆ ಜಾತ್ಯತೀತ ಮತಗಳು ಹಂಚಿಹೋಗಿ ಮತ್ತೆ ಎಲ್ಲಿ ಆರಗ ಜ್ಞಾನೇಂದ್ರ ಗೆದ್ದುಬಿಡಬಹುದೋ ಎಂಬ ಆತಂಕ ಅದು.

ಅಂತಹ ಸಮಯದಲ್ಲಿ ಶಾಮಣ್ಣನವರು ಕಾರ್ಯಾಚರಣೆಗೆ ಇಳಿದರು. ಕಿಮ್ಮನೆ ಪರವಾಗಿ ಅಲ್ಲ, ಬದಲಾಗಿ ತಮ್ಮ ಹಳೆ ಗುರು ಗೋಪಾಲಗೌಡರ ಪುತ್ರನ ಪರವಾಗಿ. ಕ್ರಾಂತಿಕಾರಿ ಕವಿ ಮತ್ತು ಹಾಡುಗಾರ ಗದ್ದರ್ ಶೈಲಿಯಲ್ಲಿ ಶಾಮಣ್ಣನವರು ತಮ್ಮ ಕಾಲುಗಳಿಗೆ ಗೆಜ್ಜೆಗಳನ್ನು ಕಟ್ಟಿಕೊಂಡು, ಕತ್ತಿನ ಸುತ್ತ ಒಂದು ಕೊಳಲನ್ನು ನೇತು ಹಾಕಿಕೊಂಡು, ಕೈಯಲ್ಲಿ ಮೌತ್ ಆರ್ಗನ್ ಹಿಡಿದು ತೀರ್ಥಹಳ್ಳಿಯಲ್ಲಿ ಹಾಡುತ್ತ ಕುಣಿಯುತ್ತಾ ರಾಮ್‌ಮನೋಹರ್ ಪರ ಪ್ರಚಾರದಲ್ಲಿ ತೊಡಗಿದರು. ಒಂದು ದಿನ ಹೀಗೆ ಅವರು ಪ್ರಚಾರ ಮಾಡುತ್ತಿದ್ದ ಸಂದರ್ಭದಲ್ಲಿ ಚಂದ್ರೇಗೌಡರು ಒಂದು ಫೋನ್‌ಬೂತ್ ನಿಂದ ನನಗೆ ಫೋನ್ ಮಾಡಿ "ಶಾಮಣ್ಣನವರು ಮಾತನಾಡುತ್ತಾರಂತೆ" ಎಂದು ಅವರಿಗೆ ಫೋನ್ ಕೊಟ್ಟರು. "ಹೇಗೆ ನಡೆಯುತ್ತಿದೆ ಶಾಮಣ್ಣರೆ ಚುನಾವಣೆ ತಯಾರಿಗಳು. ಯಾರು ಗೆಲ್ಲಬಹುದು ಅನ್ನಿಸುತ್ತೆ ನಿಮಗೆ?" ಎಂದು ಕೇಳಿದೆ. ಅದಕ್ಕೆ ಅವರು "ನಮ್ಮ ಗೋಪಾಲಗೌಡರ ಮಗ ಭಾರೀ ಅಂತರದಿಂದ ಗೆಲ್ತಾನೆ" ಎಂದು ಭವಿಷ್ಯ ನುಡಿದಿದ್ದರು. ಅಷ್ಟೇ ಅಲ್ಲ ಫೋನ್ ಮೂಲಕವೇ ತಾವು ಪ್ರಚಾರದಲ್ಲಿ ಹಾಡುತ್ತಿದ್ದ ಒಂದೆರಡು ಹಾಡುಗಳನ್ನೂ ಹಾಡಿದರು. ಶಾಮಣ್ಣನವರಿಗೆ ಚುನಾವಣಾ ರಾಜಕೀಯದ ಅರಿವು ಇಲ್ಲದಿದ್ದರೂ ಅವರ ಉತ್ಸಾಹ ಮತ್ತು ಗುರುಗಳ ಬಗ್ಗೆ ಇರುವ ಬದ್ಧತೆ ಕಂಡು ಬೆರಗಾಗಿದ್ದೆ.

ಕೆಲ ವರ್ಷಗಳ ಹಿಂದೆ ತೀರ್ಥಹಳ್ಳಿಯಲ್ಲಿ ಪ್ರಗತಿಪರ ರೈತರೊಬ್ಬರು ಸಾವಿಗೀಡಾದರು. ಅವರ ಕುಟುಂಬದವರು ತಿಥಿ ಎಂಬ ಮೌಢ್ಯಾಚರಣೆಗೆ ಹಣವನ್ನು ಪೋಲು ಮಾಡುವ ಬದಲು ರೈತ ಸಮುದಾಯಕ್ಕೆ ನೆರವಾಗಬಲ್ಲ 'ಪ್ರಸ್ತುತ ಚಳವಳಿ ಮತ್ತು ಸಮಸ್ಯೆ'ಗಳನ್ನು ಕುರಿತು ಒಂದು ವಿಚಾರಸಂಕಿರಣವನ್ನು ಹಮ್ಮಿಕೊಂಡು ನನ್ನನ್ನೂ ಸೇರಿದಂತೆ ಹಲವರನ್ನು ಆಹ್ವಾನಿಸಿದರು. ಅಂದಿನ ಸಭೆಗೆ ರೈತ ಹೋರಾಟಗಳ ಮುಂಚೂಣಿಯಲ್ಲಿದ್ದ ಶಾಮಣ್ಣನವರೂ ಬಂದಿದ್ದರು. ಆದರೆ ಸಭೆಯನ್ನುದ್ದೇಶಿಸಿ ಮಾತನಾಡಲು ಅಲ್ಲ, ಬದಲಾಗಿ ಫೋಟೋಗ್ರಾಫರ್ ಆಗಿ! ಅವರು ಅವತ್ತು ತಮ್ಮ ಕ್ಯಾಮೆರಾ ಹಿಡಿದು ಫೋಟೋಗಳನ್ನು ಕ್ಲಿಕ್ಕಿಸಿದ್ದೇ ಕ್ಲಿಕ್ಕಿಸಿದ್ದು.

ಸಭೆಯ ನಂತರ ನನ್ನನ್ನು ತಮ್ಮ ಕಾರಿನಲ್ಲಿ ಕೂರಿಸಿಕೊಂಡ ಶಾಮಣ್ಣ ಕಡಿದಾಳಿನಲ್ಲಿ ತಮ್ಮ ತಂದೆ ಕಟ್ಟಿಸಿದ್ದ ಮತ್ತು ಈಗ ಅವರ ಸಹೋದರ ಪ್ರಕಾಶ್ ಅವರ ಕುಟುಂಬ ವಾಸಿಸುತ್ತಿರುವ ಮನೆಗೆ ಕರೆದುಕೊಂಡು ಹೋದರು. ಅವತ್ತು ಸಣ್ಣಗೆ ಮಳೆ ಬೀಳುತ್ತಿತ್ತು. ಮನೆಯ ಸುತ್ತಲೂ ಬತ್ತದ ಹೊಲಗಳು ಕಂಗೊಳಿಸುತ್ತಿದ್ದವು. ದೂರದಲ್ಲಿದ್ದ ಬೆಟ್ಟಗಳ ಹತ್ತಿರ ಮನಮೋಹಕ ಮೋಡಗಳು. ಆ ಹಳೆ ಮನೆಯನ್ನು ಆದಷ್ಟು ರಕ್ಷಿಸುತ್ತಾ ಅವಶ್ಯಕತೆಗೆ ಸೂಕ್ತವಾಗುವಂತೆ ಮಾರ್ಪಾಡುಗಳನ್ನು ಮಾಡಿಕೊಂಡಿದ್ದರೂ ಆ ಮನೆ ತುಂಬಾ ಚಂದವಾಗಿದೆ; ಅದರಲ್ಲಿ ವಾಸಿಸುವ ಜನರ ಅಭಿರುಚಿಯಂತೆ. ಅವತ್ತು ಆ ಮನೆಯ ಸುತ್ತಮುತ್ತಲಿನ ದೃಶ್ಯ ನನಗೆ ಮಲೆನಾಡಿನ ಸಕಲ ಸೌಂದರ್ಯವನ್ನೂ ಕಟ್ಟಿಕೊಟ್ಟಿದ್ದರಿಂದಲೋ ಏನೋ ಇವತ್ತಿಗೂ ಅದು ನನ್ನ ಕಣ್ಣಿಗೆ ಕಟ್ಟಿದಂತಿದೆ.


ಆಮೇಲೆ ನಾವಿಬ್ಬರೂ ತೀರ್ಥಹಳ್ಳಿಯಲ್ಲಿರುವ ಶಾಮಣ್ಣರ ಮತ್ತೊಬ್ಬ ಸಹೋದರ ದಯಾನಂದ ಅವರ ಮನೆಗೆ ಹೋದೆವು. ಅಲ್ಲೊಂದಿಷ್ಟು ಹೊತ್ತು ಹರಟೆ ಹೊಡೆದ ನಂತರ ಶಿವಮೊಗ್ಗೆಯತ್ತ ನಮ್ಮ ಸವಾರಿ ಸಾಗಿತು. ಅವತ್ತು ನಮ್ಮ ಸುತ್ತಾಟ ಹೆಚ್ಚಾಗಿದ್ದರಿಂದ ಮತ್ತು ಶಾಮಣ್ಣನವರು ನನಗಿಂತ ಹಿರಿಯರಾದ್ದರಿಂದ ಅವರಿಗೆ ಸುಸ್ತಾಗಿರಬೇಕೆಂದು "ನಾನೇ ಕಾರ್ ಡ್ರೈವ್ ಮಾಡಲೆ?" ಎಂದು ಕೇಳಿದೆ. "ಯಾಕೆ?" ಅಂದರು ಶಾಮಣ್ಣ. ಆಗ ಅವರ ಇನ್ನೊಂದು ವ್ಯಾಮೋಹದ ಬಗ್ಗೆ ನೆನಪಾಗಿ "ವಾಹನಗಳ ಬಗ್ಗೆ ನಿಮಗೂ ಮತ್ತು ತೇಜಸ್ವಿಗೂ ಇದ್ದ ಆಸಕ್ತಿ ಗೊತ್ತಿದ್ದೂ ಹೋಗಿಹೋಗಿ ನಿಮ್ಮನ್ನು ಕೇಳುತ್ತಿದ್ದೇನಲ್ಲ! ನೀವೇ ಡ್ರೈವ್ ಮಾಡಿ" ಎಂದು ನಕ್ಕೆ. ಶಾಮಣ್ಣ ಯುವಕನೊಬ್ಬನ ಉತ್ಸಾಹದಲ್ಲಿ ಕಾರ್ ಡ್ರೈವ್ ಮಾಡುತ್ತಾ ಸಾಗಿದರು.

ಕೆಲ ದಿನಗಳ ಹಿಂದೆಯಷ್ಟೇ ಗಣೇಶ ಹಬ್ಬ ಬಂದುಹೋಗಿತ್ತು. ಆದ್ದರಿಂದ ದಾರಿಯಲ್ಲಿ ಹಲವಾರು ಗುಂಪುಗಳು ಗಣೇಶನ ವಿಗ್ರಹಗಳನ್ನು ವಿಸರ್ಜನೆಗೆ ತೆಗೆದುಕೊಂಡು ಹೋಗುತ್ತಿದ್ದರು. ಅಂತಹ ಒಂದು ಗುಂಪಿನ ಮುಂದೆ ಹಲವು ಯುವಕರು ಮೈಗೆಲ್ಲ ಕಪ್ಪು ಬಣ್ಣ ಬಳಿದುಕೊಂಡು ಕುಣಿಯುತ್ತಿದ್ದರು. ಅಂತಹ ದೃಶ್ಯವನ್ನು ನಾನು ಅಲ್ಲಿಯತನಕ ನೋಡಿರಲಿಲ್ಲ. ಶಾಮಣ್ಣ ಕಾರ್ ಅನ್ನು ನಿಲ್ಲಿಸಿ "ಅದು ಇಲ್ಲಿನ ಬುಡಕಟ್ಟೊಂದರ ಸಂಪ್ರದಾಯ. ಅವರು ಅಡಿಕೆ ಸಿಪ್ಪೆಗಳನ್ನು ಸುಟ್ಟ ನಂತರ ಸಿಕ್ಕ ಬೂದಿಯಿಂದ ಆ ಕಪ್ಪುಬಣ್ಣವನ್ನು ತಯಾರಿಸುತ್ತಾರೆ. ಹಬ್ಬ ಹರಿದಿನಗಳಲ್ಲಿ ಅದನ್ನು ಮೈಗೆಲ್ಲ ಬಳಿದುಕೊಂಡು ಕುಣಿಯುತ್ತಾರೆ. ಆ ಬಣ್ಣವನ್ನು ತೊಳೆದುಕೊಳ್ಳುವುದೇ ಒಂದು ದೊಡ್ಡ ಸಮಸ್ಯೆ. ಆದ್ದರಿಂದ ಈಗೀಗ ಯುವಕರು ಅದನ್ನು ಹಚ್ಚಿಕೊಳ್ಳಲು ನಿರಾಕರಿಸುತ್ತಿದ್ದಾರೆ" ಎಂದು ವಿವರಿಸಿದ ನೆನಪು. ನನ್ನನ್ನು ಆ ಕಪ್ಪು ಬಣ್ಣವನ್ನು ಬಳಿದುಕೊಂಡಿದ್ದ ಯುವಕರ ನಡುವೆ ನಿಲ್ಲಿಸಿದ ಶಾಮಣ್ಣ ತಮ್ಮ ಕ್ಯಾಮೆರಾದಲ್ಲಿ ಅದನ್ನು ಸೆರೆಹಿಡಿದಿದ್ದರು.

ಶಾಮಣ್ಣನವರಿಗೆ ಸರೋದ್ ಕಲಿಸಿದ ಗುರು ಅಲಿ ಅಕ್ಬರ್ ಖಾನ್ ಆದರೂ ಅವರಿಗೆ ಸರೋದ್ ಪಂಡಿತ ರವಿಶಂಕರ್ ಅವರ ಪರಿಚಯವೂ ಇತ್ತು. ಮಾತ್ರವಲ್ಲ, ರವಿಶಂಕರ್ ಅವರ ಮೊದಲ ಪತ್ನಿ ಅನ್ನಪೂರ್ಣ ಅವರ ಹತ್ತಿರವೂ ಅವರು ಕೆಲ ಸಮಯ ಸಂಗೀತ ಅಭ್ಯಾಸ ಮಾಡಿದ್ದರು. ಪಂಡಿತ್ ರವಿಶಂಕರ್ ಅವರು 2012ರಲ್ಲಿ ತೀರಿಕೊಂಡಾಗ ಅವರು ಅನ್ನಪೂರ್ಣರಿಗೆ ಕೊಟ್ಟ ಸಮಸ್ಯೆಗಳು, ನೋವುಗಳು ಇತ್ಯಾದಿಗಳನ್ನು ಕುರಿತು ನನ್ನ ಕಂಡಹಾಗೆ ಅಂಕಣದಲ್ಲಿ ಬರೆದಿದ್ದೆ. ಅದನ್ನು ಓದಿದ ಶಾಮಣ್ಣನವರು ನನಗೆ ಫೋನ್ ಮಾಡಿ "ಅಯ್ಯೋ, ಅನ್ನಪೂರ್ಣ ಅವರು ನನಗೂ ಗುರುಗಳಾಗಿದ್ದವರು. ಆದರೆ ಅವರು ತಮ್ಮ ಜೀವನದಲ್ಲಿ ಇಷ್ಟೆಲ್ಲಾ ಕಷ್ಟಗಳನ್ನು ಎದುರಿಸಿದ್ದಾರೆ ಎಂದು ನನಗೆ ಗೊತ್ತೇ ಇರಲಿಲ್ಲ" ಎಂದು ಬೇಸರ ಪಟ್ಟುಕೊಂಡಿದ್ದರು.


ಶಾಮಣ್ಣ ಇವತ್ತಿಗೂ ರೈತ ನಾಯಕ ಮಾತ್ರವಲ್ಲ, ಅವರು ಈಗಲೂ ಸಂಗೀತದ ಅಪ್ಪಟ ಅಭಿಮಾನಿ ಕೂಡ. ಎಲ್ಲಾದರೂ ಖ್ಯಾತ ಸಂಗೀತಗಾರರ ಗೋಷ್ಠಿ ಇದ್ದರೆ ಅಲ್ಲಿಗೆ ಶಾಮಣ್ಣ ತಪ್ಪದೇ ಹಾಜರು. ಭಗವತಿಕೆರೆಯಲ್ಲಿ ಅವರು ಈ ಹಿಂದೆ ಮಾಡಿದ್ದ ಶೌಚಾಲಯ ಆಂದೋಲನ ವರ್ಕ್‌ಔಟ್ ಆಗಿರಲಿಲ್ಲ ನಿಜ. ಆದರೆ ಅದಾದ ಹಲವು ವರ್ಷಗಳ ನಂತರ ಆ ಊರಿನವರೇ ಬಂದು "ನನ್ನ ಮಗನಿಗೆ ಹೆಣ್ಣು ಕೊಡಲು ಜನ ಒಪ್ಪುತ್ತಿಲ್ಲ, ಯಾಕೆಂದರೆ ನಮ್ಮ ಮನೆಯಲ್ಲಿ ಶೌಚಾಲಯ ಇಲ್ಲ" ಎಂದು ಗೋಗರೆದಾಗ ಶಾಮಣ್ಣನಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಇತ್ತೀಚೆಗೆ ಹೆಗ್ಗೋಡು ಪ್ರಸನ್ನ ಅವರು ಬದನವಾಳುವಿನಲ್ಲಿ ಹೋರಾಟ ಹಮ್ಮಿಕೊಂಡಾಗ ಅಲ್ಲಿಗೂ ಎಂದಿನ ಉತ್ಸಾಹದೊಂದಿಗೆ ಹೋದ ಶಾಮಣ್ಣ ಅಲ್ಲೊಂದು ಪರಿಸರ ಸ್ನೇಹಿ ಶೌಚಾಲಯವನ್ನು ನಿರ್ಮಿಸಿ ಬಂದಿದ್ದಾರೆ.

ಶಾಮಣ್ಣನವರಿಗೆ ಈಗ 75ರ ಹರೆಯ. ಆದರೇನಂತೆ ಅಪಾರ ಜೀವನೋತ್ಸಾಹವನ್ನು ಹೊಂದಿರುವ ಶಾಮಣ್ಣ ಈಗಲೂ ಚಿರಯೌವ್ವನಿಗ ಎಂದರೆ ತಪ್ಪಲ್ಲ! ■




ಬದನವಾಳುವಿನಲ್ಲಿ ಪರಿಸರ ಸ್ನೇಹಿ ಶೌಚಾಲಯವನ್ನು ಕಟ್ಟುತ್ತಿರುವ ಕಡಿದಾಳು ಶಾಮಣ್ಣ


ಹಳಿಯಾಳದಲ್ಲಿರುವ ದೇಶಪಾಂಡೆಯ ರುಡ್‌ಸೆಟ್ ಕಟ್ಟಡ


ರುಡ್‌ಸೆಟ್, ದೇಶಪಾಂಡೆಯ ಜಕ್ಕೂರು

ಡಾನ್ ದೇಶಪಾಂಡೆಯ ಲ್ಯಾಂಡ್ ಲಫಡಾ ಪುರಾಣ


ದೇಶಪಾಂಡೆ

ವ್ಯಾಪಾರಿ ರಾಜಕಾರಣವನ್ನು ಕಳೆದ ಮೂರು ದಶಕದಿಂದ ವ್ಯವಸ್ಥಿತವಾಗಿ ಮತ್ತು ಅಷ್ಟೇ ನಾಜೂಕಾಗಿ ನಿಭಾಯಿಸಿ ಕೊಂಡು ಬರುತ್ತಿರುವ ಪಡಪೋಸಿ ಪುಢಾರಿ ರಘುನಾಥ ವಿಶ್ವನಾಥರಾವ್ ದೇಶಪಾಂಡೆಯ ದಗಾ-ದಗಲುಬಾಜಿ ಪುರಾಣಗಳು ಕೆದಕಿದಷ್ಟೂ ಉಕ್ಕುವಷ್ಟಿದೆ. ಆತನ ಧನದಾಹದ ದೋಖಾಬಾಜಿಯಷ್ಟೇ ಲೋಕ ಪ್ರಸಿದ್ಧ ಭೂ ಭಾನ್ಗಡಿಗಳು. ಹಳಿಯಾಳದಲ್ಲಿ 'ರವಿವಾರದ ವಕೀಲ'ನಾಗಿದ್ದ ಈತ ರಾಮಕೃಷ್ಣ ಹೆಗಡೆಜೀ ಪಟ್ಟ ಶಿಷ್ಯನೆಂಬ ಟ್ರೇಡ್ ಮಾರ್ಕ್ ಮಹಿಮೆಯಿಂದ ರಾಜಕೀಯ ಪಡಸಾಲೆಯಲ್ಲಿ ಭಯಾನಕವಾಗಿ ಬೆಳೆದದ್ದೇ ಒಂದು ದೊಡ್ಡ ಕತೆ.

ಅದು ಜಾಗತೀಕರಣ, ಉದಾರೀಕರಣದ ಹವಾ ಎದ್ದ ಹಂಗಾಮು. ಬಂಡವಾಳ ಹರಿಯುವ ಆ ಕಾಲಘಟ್ಟದಲ್ಲೇ ವರ್ತಕ ಖಾನ್‌ದಾನ್‌ನ ದೇಶಪಾಂಡೆ ಕೈಗೆ ಬೃಹತ್ ಕೈಗಾರಿಕೆಯಂಥ ಆಯಕಟ್ಟಿನ ಮಂತ್ರಿಗಿರಿ ಸಿಗುತ್ತದೆ. ದೇವೇಗೌಡರ ಯುಗದಿಂದ ಎಸ್ಸೆಂ ಕೃಷ್ಣರ ಕಾಲಕೀರ್ದಿಯವರೆಗೆ ಸತತ ಒಂದು ದಶಕಕ್ಕೂ ಹೆಚ್ಚು ದೊಡ್ಡ ಕೈಗಾರಿಕಾ ಮಂತ್ರಿಯಾಗಿ ಮೆರೆದ ದೇಶಪಾಂಡೆಗೆ ದೇಶ-ವಿದೇಶದ ಅತಿರಥ ಮಹಾರಥರಂಥ ಕೈಗಾರಿಕೋದ್ಯಮಿಗಳ ಸಂಗ ಸಹವಾಸದ ಯೋಗಾಯೋಗ ಕೂಡಿಬರುತ್ತದೆ. ಈ ಹಣವಂತರ ಸಂಪರ್ಕವನ್ನು ಸಮರ್ಥವಾಗಿ ಬಳಸಿಕೊಂಡ ಸಮಯಸಾಧಕ ದೇಶಪಾಂಡೆ ಬೃಹತ್ ಕೈಗಾರಿಕೋದ್ಯಮಿಯಾಗಿ ಅವತರಿಸಿಬಿಟ್ಟರು.

ದೇಶಪಾಂಡೆಯ ಕೈಗಾರಿಕಾ ಮಂತ್ರಿಗಿರಿಯ ವಿಕಟ ವ್ಯಂಗ್ಯವೆಂದರೆ, ಆತನ ಆಡಳಿತದ ಅತಿರೇಕದಲ್ಲಿ ರಾಜ್ಯದ ಕೈಗಾರಿಕಾ ವಲಯ ಮಕಾಡೆ ಮಲಗಿಬಿಟ್ಟಿತು. ಕಣ್ಣಿಗೆ ಕಾಣುವಂಥ ಒಂದೇ ಒಂದು ಬದಲಾವಣೆಯೂ ದೂರದೃಷ್ಟಿ ದೋಷದ ದೇಶಪಾಂಡೆಯಿಂದ ಮಾಡಲಾಗಲಿಲ್ಲ. ಅಭಿವೃದ್ಧಿ ಪರವಾದ ಒಂದು ಕೈಗಾರಿಕಾ ನೀತಿ ನಿರೂಪಿಸಲೂ ಈ ಖಾಲಿ ಬುರುಡೆ ಭೂಪನಿಂದಾಗಲಿಲ್ಲ. ದುರಂತವೆಂದರೆ, ದೇಶಪಾಂಡೆ ಕೈಗಾರಿಕಾ ಖಾತೆಯ ದೊರೆಯಾಗಿದ್ದಾಗ ಆತನ ತವರು ಜಿಲ್ಲೆಯ ಹಲವು ಕೈಗಾರಿಕೆಗಳು ಬಾಗಿಲು ಮುಚ್ಚುವ ಪರಿಸ್ಥಿತಿ ಬಂತು. ಇರುವ ಕೈಗಾರಿಕೆಗಳನ್ನೇ ಬಂದ್ ಮಾಡಿದ ಈತನಿಂದ ಹೊಸ ಕೈಗಾರಿಕೆ ಸ್ಥಾಪಿಸಲಿಕ್ಕೂ ಆಗಲಿಲ್ಲ! ಹಸಿದ ಕೈಗಳಿಗೆ, ನಿರುದ್ಯೋಗಿ ಯುವಜನತೆಗೆ ಉದ್ಯೋಗ ಕೊಡುವ ಯೋಜನೆ-ಯೋಚನೆಯೇ ಫ್ಯೂಡಲ್ ಪಾಲಿಟಿಸಿಯನ್ ದೇಶಪಾಂಡೆಯಲ್ಲಿ ಇರಲೇ ಇಲ್ಲ.

ಕಂಪನಿ ಕಿಂಗ್

ಪಕ್ಕಾ ಜಾತಿವಾದಿ, ಸ್ವಜನ ಉದ್ಧಾರಕ ಎಂಬ ಕುಖ್ಯಾತಿಯ ದೇಶಪಾಂಡೆ ದರ್ಬಾರಿನಲ್ಲಿ ಆತನ ಪರಿವಾರದ ದೆಸೆ ಬದಲಾಗಿಹೋಯಿತು. ಸ್ವತಃ ದೇಶಪಾಂಡೆ ಮತ್ತವನ ಹೆಂಡತಿ, ಇಬ್ಬರು ಗಂಡು ಸಂತಾನ ಮತ್ತವರ ಹೆಂಡಂದಿರು ಕೈಗಾರಿಕೋದ್ಯಮಿಗಳಾಗಿ ರೂಪಾಂತರಗೊಂಡರು. ಗೂಡಂಗಡಿ, ಬೀಡಾ ಅಂಗಡಿ ನಡೆಸುತ್ತಿದ್ದ ಸ್ವ-ಜಾತಿ ಕೊಂಕಣಿ ಬಂಟರು ಮಿಲ್, ಡೈರಿ, ಐಸ್‌ಕ್ರೀಮ್ ಫ್ಯಾಕ್ಟರಿ ತೆರೆದರು; ಸರ್ಕಾರಿ ಬೊಕ್ಕಸಕ್ಕೆ ಕನ್ನ ಕೊರೆಯುವ ಗುತ್ತೇಗಾರ ಉದ್ಯಮಿಗಳಾದರು; ಪ್ರವಾಸೋದ್ಯಮದ ಹೆಸರಲ್ಲಿ ದೊಡ್ಡ-ದೊಡ್ಡ ಹೋಟೇಲ್ ಎಬ್ಬಿಸಿ ಸಬ್ಸಿಡಿ ಸ್ವಾಹಾ ಮಾಡಿದರು. ಸಾಕ್ಷಾತ್ ದೇಶಪಾಂಡೆ, ಆತನ ಹೆಂಡತಿ ರಾಧಾ ದೇಶಪಾಂಡೆ, ದೊಡ್ಡ ಮಗ ಪ್ರಸಾದ್, ಎರಡನೇ ಮಗ ಪ್ರಶಾಂತ್, ಹಿರಿಯ ಸೊಸೆ ಮೇಘನಾ, ದ್ವಿತೀಯ ಸೊಸೆ ಅವನಿ ಬರೋಬ್ಬರಿ 28 ತರಹೇವಾರಿ ಕಂಪನಿಗಳ ಒಡೆಯರಾಗಿ ಕಂಗೊಳಿಸಿದರು.

ದೇಶ-ವಿದೇಶದ ದೊಡ್ಡ-ದೊಡ್ಡ ಕಂಪನಿಗಳಲ್ಲಿ ದೇಶಪಾಂಡೆ ಕುಟುಂಬದ ಷೇರು ಸೇರಿಕೊಂಡಿತು. ಮುಂಬೈ, ಬೆಂಗಳೂರು, ಬೆಳಗಾವಿ ಮುಂತಾದೆಡೆ ದೇಶಪಾಂಡೆ ಕುಟುಂಬದ ಚರ-ಸ್ಥಿರ ಆಸ್ತಿ, ಕೈಗಾರಿಕೆಯ ಫ್ಯಾಕ್ಟರಿಗಳು ಎದ್ದವು. ರಾಮನ ಲೆಕ್ಕ-ಕೃಷ್ಣನ ಲೆಕ್ಕ ಅಚ್ಚುಕಟ್ಟಾಗಿ ಬರೆದ ದೇಶಪಾಂಡೆ ಆದೆಷ್ಟೇ ಆದಾಯ-ಆದಾಯದ ಮೂಲ ಬಚ್ಚಿಟ್ಟರೂ ಚುನಾವಣೆ ಬಂದಾಗ ಕಾಲುಭಾಗವನ್ನಾದರೂ ಬಹಿರಂಗ ಮಾಡಲೇ ಬೇಕಾಗಿಬಂತು. ದೇಶಪಾಂಡೆ 2004, 2008 ಮತ್ತು 2013ರ ಎಲೆಕ್ಷನ್ ಹೊತ್ತಲ್ಲಿ ಘೋಷಿಸಿದ ಆಸ್ತಿ ಅಜ-ಗಜಾಂತರದಲ್ಲಿ ಹಿಗ್ಗಿದೆ. ಅಧಿಕೃತ ಲೆಕ್ಕವೇ ನಂಬಲಸಾಧ್ಯವಾದ ರೀತಿ ಬೆಳೆದಿರುವಾಗ ಆತನ ರಹಸ್ಯ ಸಾಮ್ರಾಜ್ಯ ಅದೆಷ್ಟು ದೊಡ್ಡದಾಗಿರಬಹುದು? ನೀವೇ ಯೋಚಿಸಿ. ದೇಶಪಾಂಡೆಯ ಧನಾಕೋರ ದರ್ಬಾರಿನ ಮಹಿಮೆ ಬಲ್ಲವರು ಆತ ಕಡಿಮೆಯೆಂದರೂ 30-40 ಸಾವಿರ ಕೋಟಿಯ ಕಳ್ಳ ಕುಬೇರನೆಂದು ಮಾತಾಡಿಕೊಳ್ಳುತ್ತಾರೆ. ರಾಜಕೀಯ ರಂಗದಲ್ಲಂತೂ ದೇಶಪಾಂಡೆ ಎಂದರೆ ಮಲ್ಟಿ ಮಿಲಿಯೇನರ್ ಎಂದೇ ಸುಪ್ರಸಿದ್ಧ.


ದೇಶಪಾಂಡೆಯ ಕುಟುಂಬದ ಕೈಗಾರಿಕೆಯ ಉದ್ಯಮಿಗಳು ರಾಧಾ ದೇಶಪಾಂಡೆ, ಪ್ರಶಾಂತ್ ದೇಶಪಾಂಡೆ, ಪ್ರಸಾದ್ ದೇಶಪಾಂಡೆ.

1998 ಮಂಗಳಮ್ ಎನರ್ಜಿ ಡೆವಲಪ್‌ಮೆಂಟ್ ಎಂಬ ಕಂಪನಿ ಶುರು ಮಾಡಿದ್ದ ದೇಶಪಾಂಡೆ ಕುಟುಂಬ 2012ರಲ್ಲಿ ಎಟ್ ಒನ್ಸ್ ಎನೊಳ ಎಲ್‌ಎಲ್‌ಪಿ ಎಂಬ ಕಂಪನಿ ತನಕ ಬಂದುನಿಂತಿದೆ. ಈ 28 ಕಂಪನಿಗಳು ದಿಲ್ಲಿ, ಮುಂಬೈ, ಬೆಂಗಳೂರು, ಲೂದಿಯಾನಾ, ಕೊಲ್ಕತ್ತಾ ಹುಬ್ಬಳ್ಳಿಯ ವಿಳಾಸದಿಂದ ಕಾರ್ಯಾಚರಣೆ ನಡೆಸುತ್ತಿವೆ. ಇದರಲ್ಲೆಲ್ಲ ದೇಶಪಾಂಡೆಯ ಧರ್ಮಪತ್ನಿ ರಾಧಾ, ಸುಪುತ್ರರಾದ ಪ್ರಸಾದ್, ಪ್ರಶಾಂತ್ ಮತ್ತು ಸೊಸೆಯಂದಿರಾದ ಮೇಘನಾ ಹಾಗು ಅವನಿಗಳೇ ನಿರ್ದೇಶಕರು, ಪಾಲುದಾರರು ಅಥವಾ ಮಾಲೀಕರು! ಈ ಇಪ್ಪತ್ತೆಂಟು ಕಂಪನಿಗಳ ಒಟ್ಟು ಬಂಡವಾಳವೇ ಹತ್ತಿರತ್ತಿರ 300 ಕೋಟಿ!! ವಿದ್ಯುತ್ ಉತ್ಪಾದನೆ ಮಾಡುವ 250 ಕೋಟಿಯ ಜಿಎಸ್‌ಡಬ್ಲ್ಯೂ ಎನರ್ಜಿ ಕಂಪನಿ ಮುಂಬೈನಲ್ಲಿ ಪ್ರಶಾಂತ ದೇಶಪಾಂಡೆ ಒಡೆತನದಲ್ಲಿ ನಡೆಯುತ್ತಿದೆ. ನಿಷ್ಠುರ-ಪ್ರಾಮಾಣಿಕ ತನಿಖೆ ಮಾಡಿದರೆ ಇದಕ್ಕಿಂತ ಹೆಚ್ಚು ಕಂಪನಿ-ಕೈಗಾರಿಕೆ-ಕಾರ್ಖಾನೆ ದೇಶಪಾಂಡೆ ಕುಟುಂಬಸ್ಥರು ನಡೆಸುತ್ತಿರುವುದು ಹೊರಬರುವುದು ಖಂಡಿತ.

ಅರಣ್ಯ ಕಬಳಿಕೆ

ದೇಶಪಾಂಡೆಯ ಅಕ್ರಮ-ಲೂಟಿ-ಕಬಳಿಕೆ ತನಿಖೆ ನಡೆಯುವುದು ಅಷ್ಟು ಸುಲಭದ ಮಾತಲ್ಲ. ಕಾಂಗ್ರೆಸ್ ಸರ್ಕಾರದಲ್ಲಿ ಮಂತ್ರಿಯಾಗಿದ್ದರೂ ಬೇರುಗಳು ಮಾತ್ರ ಬೇರೆ-ಬೇರೆ ಪಕ್ಷದಲ್ಲಿ ಇಳಿಸಿದ್ದಾರೆ ದೋಷಪಾಂಡೆ ಸಾಹೇಬರು. ಎನ್‌ಸಿಪಿಯಿಂದ ಬಿಜೆಪಿ ತನಕದ ಅಷ್ಟೂ ಪಕ್ಷಗಳಲ್ಲಿ ದೇಶಪಾಂಡೆಯ ಹಿತೈಷಿ ಬಳಗವೇ ಇದೆ. ಹೀಗಾಗಿ ಆತನ ಈ ಮೂರು ದಶಕದ ಮಹಾ ಪಾತಕವೆಲ್ಲ ಸದ್ದಿಲ್ಲದೆ ಸಮಾಧಿ ಸ್ಥಿತಿಯಲ್ಲೇ ಇದೆ. ಬೆಂಗಳೂರಿನ ಜಕ್ಕೂರು ವಾಯುನೆಲೆ ಹತ್ತಿರ ಕಾಯ್ದಿಟ್ಟ ಅರಣ್ಯದ ಬರೋಬ್ಬರಿ 5 ಎಕರೆ ಮಂತ್ರಿ ದೇಶಪಾಂಡೆ ಮತ್ತು ಆತನ ಮಡದಿ ರಾಧಾ ದೇಶಪಾಂಡೆ ಒತ್ತುವರಿ ಮಾಡಿಕೊಂಡಿದ್ದಾರೆಂಬ ಬೊಬ್ಬೆ ಜೋರಾಗಿಯೇ ಎದ್ದಿದ್ದರೂ ಆಳುವವರು ಒಂದಿಂಚೂ ಮಿಸುಕಾಡುತ್ತಿಲ್ಲ. ಹೀಗಿರುವಾಗ ದೇಶಪಾಂಡೆಯ ಉಳಿದ ಲಫಡಾದ ತನಿಖೆ ಆಗುವುದು ಸಾಧ್ಯವಾ?

ಜಕ್ಕೂರು ವಾಯುನೆಲೆ ಕಾಂಪೌಂಡ್ ಪಕ್ಕದಲ್ಲೇ ಬರ್ಜರಿ ಬಂಗಲೆಯೊಂದು ಇದೆ. ಈ ಕಣ್ಣು ಕುಕ್ಕುವ ಬಂಗಲೆಯಲ್ಲಿ ದೇಶಪಾಂಡೆ ಕುಟುಂಬ ವಾಸವಾಗಿದೆ. ಹೆಚ್ಚುಕಮ್ಮಿ ನೂರಾ ಐವತ್ತು ಕೋಟಿಯ ಬಂಗಲೆ ಇದೆಂದು ಆರ್ಕಿಟೆಕ್ಟ್‌ಗಳೇ ಅಂದಾಜಿಸಿ ಕೊಂಡಾಡುತ್ತಾರೆ. ಸದ್ರಿ ಜಾಗದ ಒಡೆಯರ‍್ಯಾರು ಗೊತ್ತಾ? ದೇಶಪಾಂಡೆಯ ಹೆಂಡತಿ ರಾಧಾ ದೇ... ಬೆಂಗಳೂರಿನ ಯಲಹಂಕ ಹೋಬಳಿಯ ... ಪ್ಲಾಂಟೇಷನ್ ವಿಲೇಜ್‌ನ ಸರ್ವೇ ನಂಬರ್ ... 29,362 ಚದರ ಅಡಿ ಜಾಗ ರಾಧಾ ... ಹೆಸರಲ್ಲಿದೆ; ಈ ಜಾಗದಲ್ಲಿ 21,600 ಚದರ... ಬಂಗಲೆ ಎದ್ದು ನಿಂತಿದೆ! ಇದೇ ಬಂಗ... ರಕ್ಷಿತಾರಣ್ಯದ 5 ಎಕರೆ ಜಾಗ ದೇಶಪಾಂ... ರಾಧಾಬಾಯಿ ಸ್ವಾಹಾ ಮಾಡಿದ್ದಾರೆ. ಈ ಅರ... ಬೆಲೆ ಲೆಕ್ಕ ಹಾಕಿದರೆ ನೂರಾರು ಕೋಟಿಯಾ...

ಸದ್ರಿ 5 ಎಕರೆ ತನ್ನ ಖರೀದಿ ಎಂದು ದೇ... ಕುಂಡೆ ಸುಟ್ಟ ಬೆಕ್ಕಂತೆ ಚಡಪಡಿಸುತ್ತ ಹೇಳಿದ... ಹಸಿಹಸಿ ಸುಳ್ಳು. ಅರಣ್ಯ ಪ್ರದೇಶದ ಜ... ಬೆಂಗಳೂರು ಉತ್ತರ ಉಪವಿಭಾಗಾಧಿಕಾರಿ ... ದೇಶಪಾಂಡೆ ದಂಪತಿಗೆ ಕೊಟ್ಟಿದ್ದಾರೆ. ... ಅಳ್ಳಾಳಸಂದ್ರದ 177.28 ಎಕರೆ ಅರಣ್ಯ ಭ... ಮಂದಿ ಅತಿಕ್ರಮಣ ಮಾಡಿದ್ದಾರೆ. ಇವರಲ್ಲಿ... ಕುಳಗಳೇ ಜಾಸ್ತಿ. ಈ ಅತಿಕ್ರಮಣದಾರರ... ಬೆಂಗಳೂರು ಉತ್ತರ ವಿಭಾಗದ ಉಪವಿಭ... ಕಚೇರಿಯಲ್ಲೇ ಮೊಕದ್ದಮೆ ದಾಖಲಿಸಲಾಗಿದೆ. ... 50ನೇ ನಂಬರೇ ದೇಶಪಾಂಡೆ ಮತ್ತು ರಾಧಾ ... ಎಂಬ ಹೈಪ್ರೋಫೈಲ್ ದಂಪತಿಯದು!! ಹೀಗೆ ... ಸಮೇತ ಸಿಕ್ಕಿಬಿದ್ದಿದ್ದರೂ ದೇಶಪಾಂಡೆ ತಾನು ... ಅನ್ನುತ್ತಿರುವುದು ಹಾಸ್ಯಾಸ್ಪದವೇ ಸರಿ!! ದೇಶ... ದಗಲುಬಾಜಿ ಜೋಕ್ ಇಡೀ ರಾಜ್ಯದ ... ಬಿಟ್ಟೂಬಿಡದೆ ನಗಿಸುತ್ತಿದೆ.

ಜಕ್ಕೂರು ಜಾಗದ ಬೆಲೆಯೆಷ...

ರಾಧಾ ದೇಶಪಾಂಡೆ ಹೆಸರಲ್ಲಿರುವ ಜಕ್ಕೂ... ನಂಬರ್ 1ಬಿಯ 29,362 ಚದರ ಅಡಿ ಜಾ... 3,33,333 ಎಂದು ದೇಶಪಾಂಡೆ ಆದಾಯ ... ಹೊತ್ತಲ್ಲಿ ಹೇಳಿದ್ದಾರೆ. 2005ರಲ್ಲಿ ಇಲ್ಲಿ ಕಟ್ಟ... ಬಂಗ್ಲೆಗೆ 11,42,83,400 ರೂ. ತಗುಲಿದೆ ... ದೇಶಪಾಂಡೆ ಕೊಟ್ಟಿರುವ ಲೆಕ್ಕಾಚಾರ. ಅಂದರೆ ... ಅಡಿಗೆ 10.35 ರೂ.ಗೆ ದೇಶಪಾಂಡೆ ... ಕೊಂಡಿದ್ದಾರೆಂದಾಯ್ತು. ಇದು ಅಸಾಧ್ಯ. ಬೆ... ಆಯಕಟ್ಟಿನ ಸ್ಥಳಗಳಲ್ಲಿ ಒಂದಾದ ಜಕ್ಕೂರು ... ಏರಿಯಾದಲ್ಲಿ ಚದರಡಿಗೆ ಬಂಗಾರಕ್ಕಿಂತಲ... ಬೆಲೆಯಾಗಿ ಅದ್ಯಾವುದೋ ಕಾಲವಾಗಿದೆ. ಹ... ಬರೀ 10.35 ರೂ.ಗೆ ಚದರಡಿಯಂತೆ ಜಾಗ ... ರುವೆನೆಂದು ಹೇಳುವ ದೇಶಪಾಂಡೆ ಯಾರ ... ಡಬ್ಬಲ್ ಹೂವಿಡಲು ಹವಣಿಸುತ್ತಿದ್ದಾರೆ? ... ಮಾತು ನಂಬುವವರಾದರೂ ಯಾರು? ಇದು ದೇ... ಪಕ್ಕಾ ಕೃಷ್ಣನ ಲೆಕ್ಕ. ತನ್ನಲ್ಲಿರುವ ಕೊಪ್ಪರಿಗೆಗ... ಕಾಸಿನ ಕರ್ಮಕಾಂಡ ಮರೆಮಾಚುವ ಮಸಲ...


ಇಲ್ಲಿ ಮತ್ತೊಂದು ಮಜಾ ಇದೆ. ಇದೇ ... ಬ್ಯಾಟರಾಯನಪುರದಲ್ಲಿ ಮಂತ್ರಿ ಮಾನ್ಯ ದೇಶ... ಹೆಸರಲ್ಲಿ 4,80,000 ರೂ.ಗಳ ಕೃಷಿಯೇತರ ... ಇದರ ಸರ್ವೆ ನಂಬರ್ ಕೂಡ 1ಬಿ. ರಾಧಾ ... ಮತ್ತು ಆರ್.ವಿ. ದೇಶಪಾಂಡೆ ಹೆಸರಲ್ಲಿ ಒಂ... ಎರಡೆರಡು ಬಾರಿ ದಾಖಲಾಗಿದೆಯಾ? ಅಂ... ಅನುಮಾನ ದೇಶಪಾಂಡೆಯ ಅಕ್ರಮ ಆಸ್ತಿ ... ಬಲ್ಲವರನ್ನು ಕಾಡುತ್ತಿದೆ. ಆದೇನೇ ಇರಲಿ, ... ಇಷ್ಟು ಅಗ್ಗಕ್ಕೆ ಜಕ್ಕೂರಿನಂಥ ಕಡೆ ದೇಶಪಾಂಡೆಗ... ಸಿಕ್ಕಿರುವುದು ಹಲವು ಶಂಕೆ ಮೂಡಿಸದೇ ... ದೇಶಪಾಂಡೆ ಮತ್ತಾತನ ಪತ್ನಿ ರಾಧಾ ದೇಶಪಾ... ಎಲೆಕ್ಷನ್ ಹೊತ್ತಲ್ಲೂ ಬೋಗಸ್ ಆಸ್ತಿ ಘೋಷಣೆ ... ಚುನಾವಣಾ ಆಯೋಗ ಮತ್ತು ಜನಸಾಮಾನ್... ಮಣ್ಣೆರಚುತ್ತ ಬಂದಿದ್ದಾರೆ....

ದೇಶಪಾಂಡೆ ಟ್ರಸ್ಟ್ ಭೂ ಭಾ...

ಡಾನ್ ದೇಶಪಾಂಡೆ ತನ್ನ ದಿವಂಗತ ಪಿತಾ... ರಾವ್ ಆರ್. ದೇಶಪಾಂಡೆ ನೆನಪಿಗಾಗಿ ಒಂದು ... ಟ್ರಸ್ಟ್ ನಡೆಸುತ್ತಿದ್ದಾರೆ. ಆದಕ್ಕವರು ಕೊಟ್ಟಿರು...

ಕುಮ್ಮಿ ಗಡುವಿಗೆ ಏನರ್ಥ?

ಜೆಡಿಎಸ್‌ನ ಮಣ್ಣಿನ ಮೊಮ್ಮಗ ಕುಮಾರಸ್ವಾಮಿಯದು ಗುದ್ದೋಡುವ ಸ್ವಭಾವ. ತಾನೇ ಹೊರತರುವ ಹಲವು ಹಗರಣಗಳನ್ನು ಆತ ತಾರ್ಕಿಕ ಅಂತ್ಯ ತೋರಿಸದೆ ಒಳಒಪ್ಪಂದ ಮಾಡಿಕೊಳ್ಳುತ್ತಾರೆಂಬ ಪುಕಾರು ಈಗ ರಾಜಕೀಯ ಪಡಸಾಲೆಯಲ್ಲಿ ಎದ್ದಿದೆ.



ಐದು ಎಕರೆ ಜಕ್ಕೂರಿನ ರಕ್ಷಿತಾರಣ್ಯ ಒತ್ತುವರಿ ಮಾಡಿಕೊಂಡಿರುವ ದೇಶಪಾಂಡೆಗೆ ಕುಮ್ಮಿ ಮತ್ತೂ ಹತ್ತು ದಿನಗಳ ಕಲಾವಕಾಶ ಕೊಟ್ಟಿದ್ದಾರೆ. ಈ ಅವಧಿಯಲ್ಲಿ ದೇಶಪಾಂಡೆ ರಾಜಿನಾಮೆ ಕೊಡದಿದ್ದರೆ ನ್ಯಾಯಾಲಯದ ಹಸಿರು ಪೀಠಕ್ಕೆ ದೂರು ಕೊಡುವುದಾಗಿ ಹೇಳಿದ್ದಾರೆ. ಏನಿದರ ಅರ್ಥ? ದೇಶಪಾಂಡೆ ಮಂತ್ರಿಗಿರಿ ತ್ಯಜಿಸಿದರೆ ಅಥವಾ ಸಿಎಂ ಸಿದ್ದು ಆತನ ಮಂತ್ರಿಗಿರಿಯಿಂದ ವಜಾ ಮಾಡಿದರೆ ಕುಮ್ಮಿ ಸುಮ್ಮನಾಗುತ್ತಾರೆಂದಾ? ಮಂತ್ರಿಗಿರಿ ತ್ಯಜಿಸಿದರೆ ದೇಶಪಾಂಡೆ ಮಾಡಿರುವ ಅತಿಕ್ರಮಣ ಕುಮ್ಮಿ ಮಾಫ್ ಮಾಡ್ತಾರಾ?

ದೇಶಪಾಂಡೆ ಮಂತ್ರಿ ಸ್ಥಾನ ತೊರೆಯುವುದಷ್ಟೇ ಅಲ್ಲ, ಮಾಡಿದ ತಪ್ಪಿಗೆ ಶಿಕ್ಷೆಯೂ ಅನುಭವಿಸಬೇಕಾದುದು ನೈಸರ್ಗಿಕ ನ್ಯಾಯ ತಾನೆ? ದೇಶಪಾಂಡೆ ಮಂತ್ರಿಯಾಗಿರಲಿ, ಬಿಡಲಿ ಕುಮ್ಮಿಗೆ ಹಸಿರು ಪೀಠದಲ್ಲಿ ದೂರು ದಾಖಲಿಸಲು ಅಡ್ಡಿಯೇನು? ಸಿದ್ದುಗೆ ಮಗ್ಗಲು ಮುಳ್ಳಾಗಿರುವ ದೇಶಪಾಂಡೆ ಹಣಿಯುವ ತಂತ್ರವಾ? ಸೆಟಲ್‌ಮೆಂಟ್ ಸಿದ್ಧಾಂತವಾ?

ದೇಶಪಾಂಡೆ ಮೆಮೋರಿಯಲ್ ಟ್ರಸ್ಟ್ ಅಂತ! ಇದಕ್ಕೆ ದೇಶಪಾಂಡೆ ...ನ್ ಎರಡನೇ ಮಗ ಪ್ರಶಾಂತ್ ಖಜಾಂಚಿ. ಮಡದಿ ರಾಧಾಬಾಯಿ ...ಹಿರಿಯ ಮಗ ಪ್ರಸಾದ್ ಇತರರು ಧರ್ಮದರ್ಶಿಗಳು. ಈ ಟ್ರಸ್ಟ್‌ನ ಉದ್ದೇಶ ಸಮಾಜ ಸೇವೆ, ಬಡವರಿಗೆ ನೆರವು, ಶಿಕ್ಷಣ ನೀಡಿಕೆ... ...ಸದುದ್ದೇಶ. ಆದರೆ ಅಸಲಿ ಗುರಿ ಪಕ್ಕಾ ರಾಜಕಾರಣ; ಎರಡನೇ ...ನ್ನು ಎಂಪಿ ಅಥವಾ ಎಮ್ಮೆಲ್ಲೆ ಮಾಡುವ ದೂ(ದು)ರಾಸೆ.

...98ರಲ್ಲಿ ಸ್ಥಾಪನೆಯಾದ ಸದ್ರಿ ಟ್ರಸ್ಟ್ ದೇಶಪಾಂಡೆಯ ಕೈಗಾರಿಕಾ ...ತ್ವದ ಬಲದಿಂದ ಭರ್ಜರಿಯಾಗಿ ಬೆಳೆದಿದೆ. ಬೆಂಗಳೂರಿನ ಆರ್.ಟಿ. ...ಮತ್ತು ಹಳಿಯಾಳದ ಎರಡೆರಡು ವಿಳಾಸದಲ್ಲಿ 'ಸೇವಾ' ಕಾರ್ಯ ...ತ್ತಿರುವ ದೇಶಪಾಂಡೆ ಟ್ರಸ್ಟ್ ರಾಜ್ಯದ ಏಳು ಜಿಲ್ಲೆಗಳನ್ನು ಕಾರ್ಯಕ್ಷೇತ್ರ ...ಕೊಂಡಿದೆ. ಹಳಿಯಾಳದ ಹುಲ್ಲಟ್ಟಿ ಗ್ರಾಮದ ವಿಶಾಲವಾದ 9 ಎಕರೆ ...ಗುಂಟೆ ಜಾಗದಲ್ಲಿ ಹೈಟೆಕ್ ರುಡ್‌ಸೆಟ್ ಸದ್ರಿ ಟ್ರಸ್ಟ್‌ನ ಸುಪರ್ದಿಯಲ್ಲಿ ...ತ್ತಿದೆ. ಕೋಟ್ಯಾಂತರ ರೂ. ರುಡ್‌ಸೆಟ್ ದೇಶಪಾಂಡೆಯ ರಾಜಕೀಯ ...ಷ್ಟೆ ಸಂಕೇತದಂತಾಗಿದೆಯೇ ಹೊರತು ಸ್ಥಳಿಯ ಬಡ ವಿದ್ಯಾರ್ಥಿಗಳಿಗೆ ...ವಾದ ಅನುಕೂಲ-ಲಾಭ ಅಷ್ಟಕ್ಕಷ್ಟೇ.

...ನ್ನ ರುಡ್‌ಸೆಟ್ ನಿಂತಿರುವ ಒಂಭತ್ತೂ ಮುಕ್ಕಾಲು ಎಕರೆ ಜಾಗವಿದೆಯಲ್ಲ, ...ಕಾನೂನುಬಾಹಿರ, ಅನೈತಿಕ ಸ್ವಾಧೀನ ಪ್ರದೇಶ! ದೇಶಪಾಂಡೆ ತನ್ನ ... ಮಂತ್ರಿ ಸ್ಥಾನ ದುರುಪಯೋಗಮಾಡಿಕೊಂಡು ಕಬ್ಜಾ ಮಾಡಿಕೊಂಡಿರುವ ...ಗ ಕೈಗಾರಿಕೆ ಹೊರತು ಬೇರಾವ ಉದ್ದೇಶಕ್ಕೂ ಬಳಸುವಂತೆಯೇ ...001ರಲ್ಲಿ ಬೃಹತ್ ಕೈಗಾರಿಕಾ ಮಂತ್ರಿಯಾಗಿದ್ದ ದೇಶಪಾಂಡೆ ಹಳಿಯಾಳದ ... ಗ್ರಾಮದ ಸರ್ವೆ ನಂಬರ್ 113, 120, 121/1 ಮತ್ತು 121/2ರ ...ಎಕರೆ 20 ಗುಂಟೆ ಜಾಗವನ್ನು ಕೈಗಾರಿಕಾ ವಸಾಹತು ಮಾಡುವ ...ಯಿಂದ ರೈತರಿಂದ ಪಡೆದುಕೊಂಡಿದ್ದರು. ಅಂದು ರೈತರಿಂದ ಬಂದ ...ಪ್ರತಿರೋಧವನ್ನು ದೇಶಪಾಂಡೆಯ ಕೈಗಾರಿಕಾ ಇಲಾಖೆಗೆ ಒಳಪಟ್ಟಿದ್ದ ...ಬಿ (ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ) ಲೆಕ್ಕಿಸದೆ ...ಕೊಂಡಿತ್ತು.

...ಎಡಿಬಿ ಹಠದ ಹಿಂದೆ ದೇಶಪಾಂಡೆಯ ಹಿಡನ್ ಅಜೆಂಡಾ ಅಡಗಿತ್ತು. ...ನ್ನ ರುಡ್‌ಸೆಟ್‌ಗೆ ಬೇಕಾದ ಜಾಗ ಕೆಐಎಡಿಬಿಯಿಂದ ಪಡೆಯುವ ...ಹಾಕಿಕೊಂಡಿದ್ದರು. ದೇಶಪಾಂಡೆ ಮಂತ್ರಿಗಿರಿ ಮಸಲತ್ತಿಂದ 9 ಎಕರೆ ...ಗುಂಟೆ ಜಾಗ ಕಬ್ಜಾ ಮಾಡಿಕೊಂಡರು ತನ್ನ ತಂದೆ ಹೆಸರಿನ ಟ್ರಸ್ಟ್‌ಗೆ! ... ಜಾಗದಲ್ಲಿ ದೇಶಪಾಂಡೆ ಮಂತ್ರಿಯಾಗಿರುವಷ್ಟು ದಿನ ಅಲ್ಲಿ ಒಂದೇ ...ಇತರ ಕೈಗಾರಿಕೆ ಸ್ಥಾಪನೆ ಆಗಲಿಲ್ಲ. 2008ರಲ್ಲಿ ದೇಶಪಾಂಡೆ ಶಾಸಕ ...ನಿಂತು ಜನರಿಂದ ತಿರಸ್ಕೃತನಾದ ನಂತರವೇ ಅಲ್ಲೊಂದು ಸಕ್ಕರೆ ...ನೆ ಆರಂಭವಾಯ್ತು. ಹಳಿಯಾಳದ ಸುತ್ತಲಿನ ಹಳ್ಳಿಗರು ಸ್ವಂತ ಕೈಗಾರಿಕೆ ...ಸಲು ಅಥವಾ ಆ ಭಾಗದವರಿಗೆ ಉದ್ಯೋಗ ಒದಗಿಸಲು ಬಳಕೆ ...ಕಿದ್ದ ಹಲ್ಲಟ್ಟಿಯ ಜಾಗದಲ್ಲೀಗ ದೇಶಪಾಂಡೆಯ ಪಾಳೆಗಾರಿ ವಸಾಹತು ...ಟ್ ಸ್ಥಾಪನೆ ಯಾಗಿದೆ! ದೇಶಪಾಂಡೆಯ ದಗಾಕೋರ ಕಾರ್ಯಾಚರಣೆಗೆ ...ತ ದೊಡ್ಡ ಸಾಕ್ಷಿ ಮತ್ತೇನು ಬೇಕು?

ಟ್ರಸ್ಟ್‌ನ ದಾನಿಗಳು

...ಶಪಾಂಡೆಯ ರುಡ್‌ಸೆಟ್ ತುಂಬ ಸುಸಜ್ಜಿತ, ಹೈಟೆಕ್. ಹಾಗೆಯೇ ... ಇತರ ಕಾರ್ಯಕ್ರಮಗಳೂ ವೈಭವೋಪೇತವಾಗೇ ನಡೆಯುತ್ತಿವೆ. ...ಪ್ರಶಾಂತನನ್ನು ತನ್ನ ಉತ್ತರಾಧಿಕಾರಿಯಾಗಿ ದೀಕ್ಷೆ ಕೊಡಲು ತಿಪ್ಪರಲಾಗ ...ತ್ತಿರುವ ದೇಶಪಾಂಡೆ ಮಗನ ಮುಂದಿಟ್ಟು ಸದ್ರಿ ಟ್ರಸ್ಟ್ ಮುಖಾಂತರ ...'ವಿನೋದಾವಳಿ' ಮಾಡುತ್ತಿದ್ದಾರೆ. ಇದಕ್ಕೆಲ್ಲ ಲಕ್ಷ-ಲಕ್ಷ ರೂ. ಹರಿಸುತ್ತಿದ್ದಾರೆ. ...ಣ ಎಲ್ಲಿಂದ ಬಂತು? ಎಲ್ಲಿಂದ ಬರುತ್ತಿದೆ?

...ಹತ್ ಕೈಗಾರಿಕಾ ಮಂತ್ರಿಯಾಗಿ ದೇಶಪಾಂಡೆ ಮಾಡಿದ್ದೇ ...ವಾಳಶಾಹಿಗಳ ಸಾಮ್ರಾಜ್ಯವೃದ್ಧಿಯ ಹಿತಚಿಂತನೆ. ಇದಕ್ಕೆ ಪ್ರತಿಯಾಗಿ ... ದೇಶಪಾಂಡೆ ಟ್ರಸ್ಟ್‌ಗೆ ಅಪಾರ ಹಣ ದೇಣಿಗೆಯಾಗಿ ಹರಿದುಬಂದಿದೆ. ...ಮತ್ತೆ ದೇಶಪಾಂಡೆ ಬಯಸಿದ ಬೃಹತ್ ಕೈಗಾರಿಕಾ ಇಲಾಖೆಯೇ ...ಸಿದ್ದು ದಯಪಾಲಿಸಿದ್ದಾರೆ. ಹೀಗಾಗಿ ಮತ್ತೆ ದೇಶಪಾಂಡೆ ಟ್ರಸ್ಟ್ ...ಗಳ ಲೆಕ್ಕದಲ್ಲೇ ದಾನ ದೇಣಿಗೆ ಎಣಿಸುವುದು ಗ್ಯಾರಂಟಿ. ಜಿಂದಾಲ ...ವರ್ಕ್ಸ್, ಟೋಯೋಟಾ-ಕಿರ್ಲೋಸ್ಕರ್, ಇನ್‌ಫೋಸಿಸ್, ಕಿರ್ಲೋಸ್ಕರ್ ...ನಿಯರಿಂಗ್ಸ್, ಮಂತ್ರಿ ಡೆವಲಪರ್ಸ್, ಎಸ್.ಡಿ. ಟಾಟಾ, ಶೋಭಾ ಡೆವಲಪರ್ಸ್, ... ಲಾಜಿಸ್ಟಿಕ್ಸ್, ವೆಸ್ಟ್‌ಕೋಸ್ಟ್ ಪೇಪರ್ಸ್ ಮಿಲ್, ವರ್ಲ್ಡ್ ವಿಷನ್.... ...ದ ಪ್ರತಿಷ್ಠಿತ ಕಂಪನಿಗಳಿಂದ ದೇಶಪಾಂಡೆ ಟ್ರಸ್ಟ್‌ಗೆ ದೇಣಿಗೆ ಬಂದಿದೆ.

...ಇವರೆಲ್ಲ ಯಾವ ಫಲಾಪೇಕ್ಷೆಯೂ ಕೈಗಾರಿಕಾ ಮಂತ್ರಿಜೀಯಿಂದ ಬಯಸದೇ ...ವಾಗಿ ದಾನ ಮಾಡಿದರಾ? ಸಾಧ್ಯವೇ ಇಲ್ಲ. ದೇಶಪಾಂಡೆ ಕೈಗಾರಿಕಾ ...ಸಚಿವನಾಗಿ ಈ ಅನಾಹುತಕಾರಿ ಬಂಡವಾಳಶಾಹಿಗಳಿಗೆ ರಹಸ್ಯ ನೆರವು ...ದ್ದಾರೆ. ಅದಕ್ಕೆ ಪ್ರತಿಯಾಗಿ ದೇಶಪಾಂಡೆ ಟ್ರಸ್ಟ್ ಸದೃಢವಾಗಿ ಕೊಬ್ಬಿದೆಯಷ್ಟೇ! ...ಷ್ಟರ ಕಾಲ ಬೃಹತ್ ಕೈಗಾರಿಕಾ ಮಂತ್ರಿಯಾಗಿ ಕೂಡಿ ಹಾಕಿರುವ ...ಣ, ಬೆಳೆಸಿಕೊಂಡಿರುವ ಕಾರ್ಪೊರೇಟ್ ಸಂಪರ್ಕದಿಂದಾಗಿ ದೇಶಪಾಂಡೆ ... ಪೊಲಿಟಿಕಲ್ 'ಡಾನ್' ನಂತಾಗಿದ್ದಾರೆ. ಕಾಂಗ್ರೆಸ್ ಹೈಕಮಾಂಡ್‌ನಲ್ಲಿ ...ದಾಶರ ಮಾಡಿಕೊಂಡಿದ್ದಾರೆ. ಇವರಿಗೆಲ್ಲ ವಿಟಮಿನ್-ಎಂ ಕೊಟ್ಟೇ ...ಕೊಳ್ಳುತ್ತಿದ್ದಾರೆ. ಇದಕ್ಕೆ ಇನಾಮಾಗಿ ಮತ್ತೆ ಬೃಹತ್ ಕೈಗಾರಿಕಾ ಖಾತೆ ...ಕೊಂಡಿದ್ದಾರೆ. ವಿಫಲ ಕೈಗಾರಿಕಾ ಮಂತ್ರಿ ಎಂಬ ಅಭಿದಾನ ಹೊತ್ತಿದ್ದ ...ಶಪಾಂಡೆಗೆ ಸಿದ್ದು ಮತ್ತೆ ಕೈಗಾರಿಕಾ ಖಾತೆ ಅನಿವಾರ್ಯವಾಗಿ ...ಕೊಡಬೇಕಾಗಿದೆ. ದೇಶಪಾಂಡೆಯ ತಾಕತ್ತೇ ಅಂಥದ್ದು.

...ಶಪಾಂಡೆಯಿಂದ ರಾಜ್ಯದ ಕೈಗಾರಿಕಾ ಕ್ಷೇತ್ರಕ್ಕೆ ದಮ್ಮಡಿ ಪ್ರಯೋಜನವೂ ... ಬಂಡವಾಳಶಾಹಿಗಳ ಕೈಗಾರಿಕಾ ಸಾಮ್ರಾಜ್ಯ ವಿಸ್ತಾರವಾದೀತು; ಜತೆಜತೆಗೇ ...ಡೆಯ ಕಳ್ಳ ಖಜಾನೆ ಮತ್ತವನ ಕೈಗಾರಿಕಾ ವಸಾಹತು ದುಪ್ಪಟ್ಟು ... ಸಿಗೊಡ್ಡ ತಾಕತ್ತಿನ ದೇಶಪಾಂಡೆ ಮಾಡಿರುವ ಅನಾಹುತ, ಅನ್ಯಾಯ, ... ಭ್ರಷ್ಟಾಚಾರ, ಭೂ ಸ್ವಾಹಾದ ತನಿಖೆ ನಿಷ್ಪಕ್ಷವಾಗಿ ನಡೆಸುವ ... ದಾರಿಗಿದೆ.

...ಸಾಣಿಕ ತನಿಖೆ ಆಗಿದ್ದೇ ಆದರೆ ದೇಶಪಾಂಡೆ ಬಚಾವಾಗೋದು ... ಇಲ್ಲ!!

■ ನಹುಷ

ಲಂಕೇಶನ ಸಂತತಿಯಿಂದ ನಮಗೆ ನೆಮ್ಮದಿಯಿಲ್ಲ

ಥೂತ್ತೇರಿ

▶ ಯಾಹೂ

ನಿದ್ದಕ್ಕಿದ್ದಂತೆ ಆಫೀಸಿನ ಲ್ಯಾಂಡ್ ಫೋನು ಹೊಡೆದುಕೊಂಡಿತು. ಆಫೀಸಿನ ಫೋನೆಂದರೆ ಆಫೀಸಿನ ವ್ಯವಹಾರದವರಿರಬೇಕೆಂದು ತಾತ್ಸಾರದಿಂದಲೇ ತೆಗೆದುಕೊಂಡಾಗ ಆ ತುದಿಯಿಂದ ಮುತಾಲಿಕನ ಮತಾಂಧ ದನಿಯನ್ನು ಹೋಲುವ ಗಂಟಲು.

"ಗೌರಿ ಲಂಕೇಶ್ ಆಫೀಸೇನ್ರಿ?" ಎಂದಿತು.

"ಹೌದು ಸಾರ್, ತಾವ್ಯಾರ್ರು?"

"ನಾವು ಭಕ್ತರು."

"ಯಾವ ಭಕ್ತರು?"

"ರಾಮಚಂದ್ರಾಪುರ ಮಠದ ಭಕ್ತರು."

"ಏನು ವಿಷಯ ಭಕ್ತರೆ?"

"ನಿಮಗೀಗ ಹಾಲು ಕುಡಿದಂತಾಗಿರಬಹುದಲ್ವಾ?"

"ಯಾಕೆ?"

"ರಾಘವೇಶ್ವರರ ಬಗ್ಗೆ ಸುಳ್ಳು ಕೇಸಿನ ತನಿಖೆ ಕೋರ್ಟಿಗೆ ದಾಖಲಾಯ್ತಲ್ಲ, ಅದಕ್ಕೆ."

"ನಾವು ಹಾಲು ಕುಡಿಯಲ್ಲ, ಅದು ಚಿಕ್ಕ ಮಕ್ಕಳು, ಮರಿಗಳು ಉಳಿದು ಬೆಳೆಯಕ್ಕೆ ಇರೋ ಪಾನೀಯ. ನಾವೇನಿದ್ರೂ ಆಲ್ಕೋಹಾಲ್ ಜನ."

"ಹಾಗಾದರೆ ವಿಸ್ಕಿ ಕುಡಿದಂತಾಗಿರಬಹುದು."

"ತಮಗೆ ವಿಸ್ಕಿ ರುಚಿ ಗೊತ್ತು ಅಂದಂಗಾಯ್ತು?"

"ಕುಡಿದವರು ಹೇಳಿದ ರುಚಿಯನ್ನು ಗ್ರಹಿಸಬಲ್ಲೆವು."

"ಇನ್ನೊಂದು ವಿಷಯ ಭಕ್ತರೆ. ವಿಸ್ಕಿಗೆ ಬರಿ ನೀರು ಬೆರೆಸಿಕೊಂಡು ಕುಡುದ್ರೆ ಸತ್ತ ತುಟಿಗೆ ಮುತ್ತಿಕ್ಕಿದಂತೆ. ಅದೇ ವಿಸ್ಕಿಗೆ ಸೋಡ ಮಿಕ್ಸ್ ಮಾಡಿ ಕುಡುದ್ರೆ ತರುಣಿಯ ತುಟಿಗೆ ಮುತ್ತಿಕ್ಕಿದಂತೆ ಅಂತ ಲಂಕೇಶ್ ಹೇಳತಿದ್ರು ಗೊತ್ತಾ?"

"ಆ ಲಂಕೇಶನ ಸಂತತಿಯಿಂದ ನಮಗೆ ನೆಮ್ಮದಿಯಿಲ್ಲ."

"ಯಾಕೆ ಏನು ಮಾಡಿದ್ರು ಭಕ್ತರೆ?"

"ಏನು ಮಾಡಿದರು ಅಂತ ಕೇಳುವುದ? ಸುಳ್ಳು ಸುದ್ದಿಯನ್ನು ಬರೆಯುವುದು ಮತ್ತೆ ಅದನ್ನೇ ಬೆಳೆಸುವುದು. ನಿಮಗೆ ಬೇರೆ ಕಸುಬಿಲ್ಲವ?"

"ಬರೆಯೋದೆ ನಮ್ಮ ಕಸುಬು."

"ಬರೆದುಕೊಳ್ಳಿ, ಬೇಡ ಅಂದವ್ರು ಯಾರು. ಆದರೆ ನಮ್ಮ ಸ್ವಾಮಿಗಳ ಬಗ್ಗೆ ಸುಳ್ಳು ಬರೆಯುವುದನ್ನು ನಾವು ಸಹಿಸುವುದಿಲ್ಲ."

"ನಿಮ್ಮ ಸ್ವಾಮಿ ಬರಿಯೋ ಅಂತ ಕೆಲಸ ಯಾಕೆ ಮಾಡಬೇಕು?"

"ಯಂತ ಮಾಡಿದ್ದು? ಅವರು ಏನೂ ಮಾಡಿಲ್ಲ, ಗೊತ್ತುಂಟ?"

"ರಾಮಕಥಾ ಗಾಯಕಿ ಮೇಲಿನ ಅತ್ಯಾಚಾರ ಸುಳ್ಳೆ?"

"ಸುಳ್ಳು, ಹಂಡ್ರೆಡ್ಡು ಪರಸೆಂಟು ಸುಳ್ಳು."

"ಹೌದಾ?"

"ಹೌದು. ರಾಮಕಥೆಯೇ ನಡೆದಿಲ್ಲ ಗೊತ್ತುಂಟ? ಹಾಗೊಂದು ವೇಳೆ ನಡೆದಿದ್ದರೆ ಆ ಜಾಗದಲ್ಲಿ ನಮ್ಮ ಗುರುಗಳು ಇರಲಿಲ್ಲ!"

"ಹಾಗಾದ್ರೆ ಎಲ್ಲಿದ್ರು?"

"ರಾಮಪೂಜೆಯಲ್ಲಿ."

"ಅತ್ಯಾಚಾರಕ್ಕೊಳಪಟ್ಟವರ ಬಟ್ಟೆಯಲ್ಲಿ ಜೀವಧಾತು ಇತ್ತು ಅಂತ ವರದಿಯಲ್ಲಿದೆಯಂತೆ."

"ಇರಬಹುದು. ಸಂಭೋಗವೇ ನಡೆದಿಲ್ಲ ಎಂದು ನಮ್ಮ ಗುರುಗಳು ಉತ್ತರ ಕೊಟ್ಟಿದ್ದಾರೆ."

"ಸಂಭೋಗ ನಡೆದಿಲ್ಲ ಆದರೂ ವೀರ್ಯಾಪಾತವಾಗಿದೆ ಅಂದ್ರೆ ಹ್ಯಂಗೆ?"

"ಸಾಧ್ಯವುಂಟು. ಸ್ವಾಮಿ ವಿವೇಕಾನಂದರಿಗೂ ಅಂತಹ ಒಂದು ವೀರ್ಯಪಾತದ ಶಕ್ತಿಯಿತ್ತು."

"ಅಂದ್ರೆ ನೀವೇಳದು, ಗುರುಗಳ ಖಾಸಗಿ ಬದುಕಿನಲ್ಲಿ ಪಾತಗೊಂಡ ವೀರ್ಯದ ಹನಿ ಕಳ್ಳತನವಾಗಿದೆ ಅಂತ."

"ಮತ್ತೆ? ಅದಕ್ಕೆ ಸಾಕ್ಷಿ ಬೇರೆ ಬೇಕಾ? ಮಠದ ಹೆಸರನ್ನು ಹಾಳು ಮಾಡಲು ಹೊರಟವರು ಅವರನ್ನು ಬ್ಲಾಕ್‌ಮೇಲ್ ಮಾಡಿ ಹಣ ವಸೂಲಿಗೆ ಇಳಿದವರ ಷಡ್ಯಂತ್ರದಿಂದ ಇಂತಹ ಕಳ್ಳತನ ನಡೆದಿದೆ."

"ಯಾರಿರಬಹುದು ಭಕ್ತರೆ ಆ ವೀರ್ಯ ಕಳ್ಳರು?"

"ಸ್ವಾಮಿಗಳು ಗಣಿಗಾರಿಕೆ ವಿರೋಧಿಸಿದ್ದರು. ಗೋಕರ್ಣ ಕೈ ತಪ್ಪಿತು ಅಂತ ಸಿಟ್ಟಾದ ಸಮುದ್ರ ತಡದ ಭಕ್ತರು ಮತ್ತು ಸಾಗರದ ಕೆಲವು ಹಳೆಯ ಹವ್ಯಕರ ಷಡ್ಯಂತ್ರದಿಂದ ಇದು ನಡೆದಿದೆ."

"ಇದನ್ನು ಖಚಿತವಾಗಿ ಹೇಳ್ತಿರಾ?"

"ಹೌದು. ಈಚೆಗೆ ಪ್ರಜಾವಾಣಿಯಲ್ಲಿ ನಾಗೇಶ್ ಹೆಗಡೆ ಬರೆದ ಲೇಖನ ನಮ್ಮ ವಾದಕ್ಕೆ ಸಾಕ್ಷಿಯೊದಗಿಸುತ್ತದೆ. ನಮಗಾಗದವರನ್ನು ಮುಗಿಸಬೇಕಾದರೆ ವೀರ್ಯದ ಹನಿ ಕಳ್ಳತನ ಮಾಡಿ ಸೀರೆಯಲ್ಲಿ ಸೋಂಕಿಸಿಕೊಂಡರಾಯ್ತು ನಮ್ಮ ಗುರುಗಳ ಸ್ಥಿತಿಯೇ ಬರುವುದುಂಟು."

"ಹಾಗಿದ್ರೆ ಅನ್ಯಾಯವಾಗಿ ಒಬ್ಬ ನಿರಪರಾಧಿ ಕೋರ್ಟಿಗೆ ಬರಂಗಾಯ್ತಲ್ಲ, ಸಾರ್?"


"ಅದಕ್ಕೆ ನಾನು ಹೇಳುವುದು. ಇನ್ನು ಮೇಲಾದರೂ ಸತ್ಯಸಂಗತಿ ಬರೆಯಿರಿ ಎಂದು."

"ಹೇಳಿ ಸಾರ್, ನಿಮ್ಮ ಭಾಗದ ಸತ್ಯ ಸಂಗತಿಗಳ್ಯಾವು?"

"ನೋಡಿ. ಭಾರತದಲ್ಲಿ ಬೇಕಾದಷ್ಟು ಅತ್ಯಾಚಾರಗಳು ನಡೆಯುವುದುಂಟು. ಅದನ್ನೆಲ್ಲಾ ಬಿಟ್ಟು ನಡೆಯದೇ ಇರುವ ರಾಮಚಂದ್ರಾಪುರ ಮಠದ ಪ್ರಕರಣವನ್ನು ನೀವು ಬರೆದದ್ದು ತಪ್ಪು."

"ಪ್ರಕರಣ ಅಂತ ನೀವೇ ಒಪ್ಪಿಕೊಂಡರಲ್ಲ ಭಕ್ತರೆ?"

"ಒಪ್ಪಿಕೊಂಡದ್ದಲ್ಲ. ನಾವು ಏನನ್ನೂ ಒಪ್ಪಿಕೊಳ್ಳುವುದಿಲ್ಲ. ಯಾಕೆಂದರೆ



ನೀವು, ನಿಮ್ಮ ಆಲೋಚನೆ ಸರಿಯಿಲ್ಲ ಅದಕ್ಕೆ."

"ನಮ್ಮ ಆಲೋಚನೆ ಸರಿಯಿಲ್ಲದ ಕಾರಣ, ಅಂದರೆ ಸ್ವಸ್ಥವಿಲ್ಲದ ಕಾರಣ, ನಾವು ಅಂತಹ ಪ್ರಕರಣವ ಹುಡುಕಿ ಬರೀತಿವಿ."

"ಬರೆಯುವ ಮುನ್ನ ನೀವು ಮಠಕ್ಕೆ ಹೋಗಬೇಕಿತ್ತು. ಅಲ್ಲಿ ರಾಘವರ ಜೊತೆ ಇದ್ದು ಇವುರು ನಾವು ಅನುಮಾನಿಸುವಂತಹ ಯತಿಗಳೆ ಅಂತ ಪರೀಕ್ಷೆ ಮಾಡಬೇಕಿತ್ತು."

"ಅವರ ಜೊತೆ ಮಲಗಿ?"

"ಅದರ ಅಗತ್ಯವಿಲ್ಲ. ವಾಚ್ ಮಾಡಿ ಬರೆಯಬಹುದಿತ್ತು."

"ಯಾವ ತರ ವಾಚ್ ಮಾಡಬೇಕಿತ್ತು?"

"ಮಠದ ಭಕ್ತರನ್ನು ಕೇಳಬೇಕಿತ್ತು. ಸ್ವತಃ ಗುರುಗಳನ್ನು ಕೇಳಬೇಕಿತ್ತು. ಅವರು ನಿತ್ಯಾನಂದನಂತೆ ನಾನು ಗಂಡಸೇ ಅಲ್ಲ ಅಂತ ಹೇಳಿಲ್ಲ. ಬದಲಿಗೆ ನಾನು ಪರಿಪೂರ್ಣ ಗಂಡಸು ಅಂತ ಹೇಳಿದ್ದಾರೆ ಗೊತ್ತ?"

"ನಿಜ ಭಕ್ತರೆ, ಪರಿಪೂರ್ಣ ಗಂಡಸು ತನ್ನ ಪ್ರಾಯವನ್ನು ಹತ್ತಿಕ್ಕಲಾರರು. ಬದಲಿಗೆ ಅವರಿಂದ ಅತ್ಯಾಚಾರಕ್ಕೆ ಒಳಗಾದವರೆ ಸತ್ಯಸಂಗತಿ ಹತ್ತಿಕ್ಕಿಕೊಂಡು ಕಾಲ ಹಾಕುತ್ತಿದ್ದಾರೆ. ಈಗಾಗಲೇ ಎರಡನೇ ಕೇಸು ಹೊರಬಿದ್ದಿದೆ. ಸಾಗರಕ್ಕೆ ಹೋಗಿ ಹೆಣ್ಣುಮಕ್ಕಳನ್ನು ವಿಶ್ವಾಸದಿಂದ ಮಾತನಾಡಿಸಿದರೆ, ಗುರುಗಳ ವೀರ್ಯಪಾತದ ಕತೆಗಳು ಹೊರಬೀಳಬಹುದು."

"ಮತ್ತೆ ನೀವು ಸುಳ್ಳು ಸಂಗತಿ ಜೋಡಿಸುವುದು ಬೇಡ."

"ಸುಳ್ಳಲ್ಲ ಭಕ್ತರೆ. ನೂರಾರು ಪುಟದ ತನಿಖಾ ವರದಿ. ಅತ್ಯಾಚಾರಕ್ಕೊಳಗಾದವರ ಹೇಳಿಕೆ, ಸ್ಥಳ, ನೂರಾರು ಸಾಕ್ಷಿಗಳ ಸಮೇತ ರೂಪುಗೊಂಡ ತನಿಖಾ ವರದಿ ನ್ಯಾಯಾಲಯದ ಮುಂದಿದೆ."

"ಅದಷ್ಟೂ ಸುಳ್ಳು ಅಂತ ನಾನು ಹೇಳ್ತೇನೆ."

"ಭಕ್ತರೆ, ನೀವು ಆರೆಸೆಸ್ಸಿಗರು ಅಂತ ಕಾಣ್ತದೆ. ನಮ್ಮ ದೇಶದ ಇತಿಹಾಸದಲ್ಲಿ ಅವರು ಉದ್ಭವವಾದಾಗಿನಿಂದ ಇಲ್ಲಿಯವರೆಗೆ ಯಾವ ಸತ್ಯ ಸಂಗತಿಗಳನ್ನೂ ಒಪ್ಪಿಕೊಂಡಿಲ್ಲ, ಸಾಯುವವರೆಗೂ ಒಪ್ಪುವುದಿಲ್ಲ, ಹಾಗೇ ಸತ್ತು ಹೋಗುತ್ತಾರೆ. ಅಂತಹ ಪ್ರಕೃತಿಯಾದ ನೀವು ಇನ್ನು ಒಂದು ಗಂಟೆ ಚರ್ಚಿಸಿದರೂ ರಾಘವೇಶ್ವರ ವಿವೇಕಾನಂದ ಒಂದೇ ಜಾತಿಯವರು ಅಂತ ಹೇಳ್ತೀರಿ. ನಿಮ್ಮೆದುರು ಈಗ ನ್ಯಾಯಾಲಯ ಇದೆ. ಫೋನಿಡ್ತೀರಾ!"


"ನೀವೇ ಇಡಬಹುದಲ್ಲ?"

"ಥೂತ್ತೇರಿ!!!" ■

ಮಳವಳ್ಳಿ: ಜೆಡಿಎಸ್ ಮಾನ ತೆಗೆದ ಅನ್ನದಾ

ಕೆ. ಅನ್ನದಾನಿಯೆಂಬ ರಾಜಕೀಯ ನಿರುದ್ಯೋಗಿಯಿಂದಾಗಿ ಮಳವಳ್ಳಿಯಲ್ಲಿ ಮೊನ್ನೆ ಜೆಡಿಎಸ್ ಪಕ್ಷ ತನ್ನ ಮಾನವನ್ನು ತಾನೇ ಹರಾಜು ಹಾಕಿಕೊಂಡಿದೆ. ಕಾಂಗ್ರೆಸ್‌ನ ಪಿ. ನರೇಂದ್ರಸ್ವಾಮಿ ಎದುರು ಎರಡೆರಡು ಬಾರಿ ಹೀನಾಯವಾಗಿ ಸೋತು 'ಮಾಜಿ ಶಾಸಕ'ನ ಸ್ಲೋಗನ್ನಿಗೆ ಗಂಟುಬಿದ್ದಿರುವ ಕೆ.ಅನ್ನದಾನಿಯ ಹತಾಶೆ ಹುಚ್ಚಾಟಗಳು ಒಂದೆರಡಲ್ಲ. ತನ್ನ ಸ್ವಂತ ಊರು ಹುಸ್ಕೂರಿನ ದಲಿತರ ಮೇಲೆ ದೌರ್ಜನ್ಯ ನಡೆಸಿ ಇತ್ತೀಚೆಗಷ್ಟೆ ಕುಖ್ಯಾತಿಗೆ ಈಡಾಗಿದ್ದ ಅನ್ನದಾನಿ ಈಗ ಮತ್ತೊಂದು ಅಂತಹುದೇ ಘನಕಾರ್ಯ ಮಾಡಲು ಹೋಗಿ ಇಡೀ ಜೆಡಿಎಸ್ ಪಕ್ಷದ ಮಾನವನ್ನೇ ಹರಾಜಾಕಿದ್ದಾನೆ. ಅನ್ನದಾನಿ ಹೇಳಿದ್ದನ್ನೇ ಸತ್ಯವೆಂದು ನಂಬಿ ಪೊಲೀಸ್ ಠಾಣೆಯ ಮುಂದೆ ಧರಣಿ ಮಾಡಿದ ಮಂಡ್ಯ ಸಂಸದ ಸಿ.ಎಸ್. ಪುಟ್ಟರಾಜು, ಎಂಎಲ್‌ಸಿ ಬಿ. ರಾಮಕೃಷ್ಣ ಪಕ್ಷದ ಜಿಲ್ಲಾಧ್ಯಕ್ಷ ಡಿ.ರಮೇಶ್ ವಗೈರೆಗಳು ಭರ್ಜರಿ ಬಕರಾ ಆದದ್ದು ದೊಡ್ಡ ವಿಪರ್ಯಾಸ!

ಸೆಪ್ಟೆಂಬರ್ 9ರಂದು ಅನ್ನದಾನಿಯ ನೇತೃತ್ವದಲ್ಲಿ ಮಳವಳ್ಳಿ ಗ್ರಾಮಾಂತರ ಪೊಲೀಸ್ ಠಾಣೆಯ ಮುಂದೆ ಜಮಾಯಿಸಿದ್ದ ಜೆಡಿಎಸ್ ನಾಯಕರ ಒಕ್ಕೊರಲಿನ ಕೂಗು ಒಂದೇ ಆಗಿತ್ತು. 'ಸರ್ಕಲ್ ಇನ್ಸ್‌ಪೆಕ್ಟರ್ ರಮೇಶ್, ಕಾಂಗ್ರೆಸ್ ಪಕ್ಷದ ಏಜೆಂಟರಂತೆ ವರ್ತಿಸಿ ಜೆಡಿಎಸ್ ಕಾರ್ಯಕರ್ತರಿಗೆ ಸುಖಾಸುಮ್ಮನೆ ಕಿರುಕುಳ ನೀಡುತ್ತಿದ್ದಾರೆ. ಜೆಡಿಎಸ್‌ನ ತಾಲ್ಲೂಕು ಪಂಚಾಯ್ತಿ ಸದಸ್ಯೆ ರಾಜಮ್ಮನ ಮೇಲೆ ಸುಳ್ಳು ದೂರು ದಾಖಲಿಸಿಕೊಂಡು ಕಿರುಕುಳ ನೀಡುತ್ತಿದ್ದಾರೆ. ಅವರನ್ನು ಈ ಕೂಡಲೇ ಎತ್ತಂಗಡಿ ಮಾಡಬೇಕು' ಅನ್ನೋದೆ ಅವರೆಲ್ಲರ ಅಜೆಂಡವಾಗಿತ್ತು. ಸಿ.ಎಸ್.ಪುಟ್ಟರಾಜು ಆದಿಯಾಗಿ ಎಲ್ಲಾ ನಾಯಕರ ತಲೆಯಲ್ಲಿ ಇಂತಹದ್ದೊಂದು ಬಾಯಿಪಾಠವನ್ನು ತುಂಬಿಸಿದ್ದು ಸ್ವತಃ ಕೆ. ಅನ್ನದಾನಿ. ಅಸಲೀ ವಿಷಯವೇನೆಂದರೆ, ಇನ್ಸ್‌ಪೆಕ್ಟರ್ ರಮೇಶ್ ತಮ್ಮ ಕರ್ತವ್ಯಪಾಲನೆ ಮಾಡಿದ್ದರಷ್ಟೆ. ರಾಜಮ್ಮ ಮತ್ತು ಆಕೆಯ ರೌಡಿ ಸಂತಾನಗಳ ಉಪಟಳ ತಾಳಲಾರದೆ, ಅವರಿಂದ ಒದೆ ತಿಂದ ಒಂದಷ್ಟು ಅಮಾಯಕ ಜನ ಕೊಟ್ಟಿದ್ದ ದೂರನ್ನು ದಾಖಲಿಸಿಕೊಂಡಿದ್ದಷ್ಟೇ ಇನ್ಸ್‌ಪೆಕ್ಟರ್ ಆಗಿ ರಮೇಶ್ ಮಾಡಿದ್ದ ಅಪರಾಧ!



ಕೇಸಿಂಗ್ ಕಳ್ಳತನದಿಂದ ಶುರು

ಜೆಡಿಎಸ್ ತಾಲ್ಲೂಕು ಪಂಚಾಯ್ತಿ ಸದಸ್ಯೆ ರಾಜಮ್ಮನನ್ನು ಕೇಂದ್ರವಾಗಿಸಿಕೊಂಡ ಇಡೀ ವೃತ್ತಾಂತ ಶುರುವಾಗುವುದೇ ಒಂದು ಕೇಸಿಂಗ್ ಪೈಪ್ ಕಳ್ಳತನದಿಂದ. ಅದನ್ನು ಕದ್ದದ್ದು ಬೇರಾರು ಅಲ್ಲ, ಇದೇ ರಾಜಮ್ಮನ ಮಗ ಮಹೇಶ್ ಕುಮಾರ್ ಎಂಬಾತ! ಮಳವಳ್ಳಿಯಿಂದ 6 ಕಿ.ಮೀ ದೂರವಿರುವ ಕಸಬಾ ಹೋಬಳಿಗೆ ಸೇರಿದ ಗಾಜನೂರು ಗ್ರಾಮದಲ್ಲಿ ಒಕ್ಕಲಿಗ ಜಾತಿಯದ್ದೇ ಮೆಜಾರಿಟಿ. ನಿಡಘಟ್ಟ ಕ್ಷೇತ್ರ ಪ್ರತಿನಿಧಿಸುವ ತಾ.ಪಂ ಸದಸ್ಯೆ ರಾಜಮ್ಮ ಇದೇ ಊರಿನವಳು. ಆಕೆ ಮತ್ತು ಆಕೆಯ ಮಕ್ಕಳಾದ ಮಹೇಶ್‌ಕುಮಾರ, ವಿಷಕಂಠೇಗೌಡ, ಮಂಜುನಾಥ್‌ರ ಆರ್ಭಟದಿಂದ ಗಾಜನೂರು ನಲುಗಿಹೋಗಿದೆ. ರಾಜಮ್ಮ ತನ್ನ ಅನುದಾನದಡಿ ಗಾಜನೂರಿನಲ್ಲಿ ಬೋರ್‌ವೆಲ್ ಕೊರೆಸಿದ್ದಳು. ಆದರೆ ನಿರೀಕ್ಷಿತ ಪ್ರಮಾಣದಲ್ಲಿ ನೀರು ಬಂದಿರಲಿಲ್ಲ. ಹಾಗಾಗಿ ಅದನ್ನು ಬಂದ್ ಮಾಡಲಾಗಿತ್ತು. ಆದರೆ ರಾಜಮ್ಮನ ಮಗ ಮಹೇಶ್‌ಕುಮಾರ್ ಈ ಬೋರ್‌ವೆಲ್‌ನಲ್ಲಿದ್ದ 30 ಸಾವಿರ ರೂ ಮೌಲ್ಯದ ಕೇಸಿಂಗ್ ಪೈಪನ್ನು ತೆಗೆಸಿ ಅನಧಿಕೃತವಾಗಿ ತನ್ನ ಜಮೀನಿಗೆ ಹಾಕಿಸಿಕೊಂಡಿದ್ದ. ಕೇಸಿಂಗ್ ಪೈಪ್ ಕಳುವಾಗಿರುವ ಬಗ್ಗೆ ಜಿಲ್ಲಾ ಪಂಚಾಯತ್ ಅಧಿಕಾರಿಗಳು ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಈ ಬಗ್ಗೆ ರಾಜ್ಯಮಟ್ಟದ ಪತ್ರಿಕೆಯೊಂದರಲ್ಲಿ ವರದಿಯೂ ಬಂದಿತ್ತು.


ಬೆಂಗಳೂರಿನಲ್ಲಿ ಡ್ರೈವರ್ ವೃತ್ತಿ ಮಾಡಿಕೊಂಡಿರುವ ಇದೇ ಗಾಜನೂರಿನ ಚಿಲುವರಾಜು ಎಂಬಾತ ಪತ್ರಿಕೆಯಲ್ಲಿ ಬಂದಿದ್ದ ಸದರಿ ವರದಿಯನ್ನು ವಾಟ್ಸಪ್‌ನಲ್ಲಿ ಶೇರ್ ಮಾಡಿ 'ಕಳ್ಳತನ ನಾಚಿಕೆಗೇಡು' ಎಂದು ಕಮೆಂಟ್ ಹಾಕಿದ್ದ. ಫೇಸ್‌ಬುಕ್‌ನಲ್ಲೂ ಅದು ಒಂದಷ್ಟು ಚರ್ಚೆಗೆ ಬಂದಿತ್ತು. ಈ ಸಂಗತಿ ರಾಜಮ್ಮನ ಮಗ ಹುಂಬ ಮಹೇಶ್‌ನ ಕಿವಿಗೆ ಬೀಳುತ್ತಿದ್ದಂತೆಯೇ ಕೆಂಡಮಂಡಲವಾದ ಆತ ಚಿಲುವರಾಜನಿಗೆ ಫೋನ್ ಮಾಡಿ ಧಮಕಿ ಹಾಕಿದ್ದ.

ಮೊಬೈಲ್‌ನಲ್ಲಿ ರೆಕಾರ್ಡ್ ಆಗಿರುವ ಅವನ ಧಮಕಿಯ ಸ್ಯಾಂಪಲ್‌ಗಳ ಧಾಟಿ ಹೇಗಿತ್ತು ಅಂತ ನೀವೇ ನೋಡಿ, 'ಯಾಕೋ ನನ್ಮಕ್ಳಾ ಪೇಪರ್‌ನಲ್ಲಿ, ಫೇಸ್‌ಬುಕ್‌ನಲ್ಲಿ ವಾಟ್ಸ್‌ಅಪ್‌ನಲ್ಲಿ ಹಾಕಿದ್ದೀರಾ. ನಾನು ಯಾರು ಅಂತಾ ಗೊತ್ತು ತಾನೇ. ನನ್ನ ಬಗ್ಗೆಯೇ ಬರೀತಿರಾ? ತಾಕತ್ತಿದ್ರೆ ಊರಿಗೆ ಬನ್ರೋ. ಬೋ...ಮಕ್ಳಾ, ನಿಮ್ಮಪ್ಪಂಗೆ ಹುಟ್ಟಿದ್ರೆ ಮೊದ್ಲು ಫೇಸ್‌ಬುಕ್‌ನಿಂದ ತೆಗಿರೋ... ಅದೇನೇ ಇದ್ರು ಊರಲ್ಲಿ ಬಂದು ಪಂಚಾಯಿತಿ ಮುಂದೆ ಇಡಬೇಕಿತ್ತು. ಅದನ್ನು ಬಿಟ್ಟು ಪೇಪರ್‌ನಲ್ಲಿ ಹಾಕಿಸ್ತಿರಾ ಸೂ...ಮಕ್ಳಾ, ಕೇಸಿಂಗ್ ಪೈಪ್ ವಿಚಾರವನ್ನು ಕೇಳೋಕೆ ನಿನ್ಯಾರೋ? ನಾನು ತಾಲ್ಲೂಕು ಪಂಚಾಯಿತಿ ಸದಸ್ಯ, ನಾನು ಏನು ಬೇಕಾದ್ರೂ ಮಾಡುತ್ತೇನೆ. ನೀನು ನೋಡಿಕೊಂಡು ಸುಮ್ಮನಿರಬೇಕು' ಹೀಗೆ ಅವನ ಹಲ್ಕಾ ಭಾಷೆ ಸಾಗುತ್ತಲೇ ಹೋಗುತ್ತದೆ.

ಸಾಲದೆಂಬಂತೆ ಊರಿನ ಮುಖಂಡರಿಂದ ಚಿಲುವರಾಜುಗೆ ಫೋನ್ ಮಾಡಿಸಿದ ಮಹೇಶ ಪಂಚಾಯ್ತಿ ಸೇರಿ ನ್ಯಾಯ ಮಾಡೋಣ ಬನ್ನಿ ಎಂಬ ಬುಲಾವನ್ನೂ ಅವರಿಗೆ ತಲುಪಿಸಿದ್ದ.

ರಾಜಮ್ಮನ ಮಕ್ಕಳ ಆರ್ಭಟ


ಇದಾಗಿ ಕೆಲದಿನಗಳಾಗಿತ್ತಷ್ಟೆ. ಗುರುಸೇವೆ ಹಬ್ಬದ ವಿಚಾರವಾಗಿ ಮಾತುಕತೆ ನಡೆಯುತ್ತಿದ್ದ ಸಂದರ್ಭದಲ್ಲಿ ರಾಜಮ್ಮನ ಮಗ ಮಹೇಶ ಮತ್ತೆ ಕೇಸಿಂಗ್ ಪೈಪ್ ವಿಚಾರ ತೆಗೆದು ಮೊದಲು ಅದು ಇತ್ಯರ್ಥವಾಗಲಿ ಅಂತ ಗಲಾಟೆ ಎಬ್ಬಿಸಿದ್ದ. ಈ ಸಂಗತಿ ಪತ್ರಿಕೆ ಮತ್ತು ವ್ಯಾಟ್ಸಪ್ ತಲುಪಲು ಒಂದಷ್ಟು ಜನರ ಕಾರಣ ಅಂತ ಗುರುತು ಮಾಡಿಟ್ಟುಕೊಂಡಿದ್ದ ಮಹೇಶ ಅವರನ್ನು ಹೊಡೆಯ ಬೇಕೆಂದು ತನ್ನ ತಮ್ಮಂದಿರಾದ ವಿಷಕಂಠೇಗೌಡ, ಮಂಜುನಾಥ್ ಹಾಗೂ ಪೋಲಿ ಬಳಗ ವಿಜಿ, ನಾಗೇಶ, ಲೋಕೇಶ, ಗೋಪಾಲ, ಬಸವರಾಜುಗಳನ್ನು ಗುಡ್ಡೆ ಹಾಕಿಕೊಂಡೆ ಅವತ್ತು ಹಬ್ಬದ ಮಾತುಕತೆ ನಡುವೆ ಅಂತಹದ್ದೊಂದು ವರಾತ ತೆಗೆದದ್ದು. ಮಹೇಶ್ ಜೋರುದ್ವನಿಯಲ್ಲಿ ಮಾತನಾಡಿದ್ದೇ ತಡ ಪಂಚಾಯ್ತಿ ಜನರೆದುರೇ ಶಿವಣ್ಣ, ಮಾದೇವು, ಮಹೇಶ್‌ಕುಮಾರ್, ದೊಡ್ಡೇಗೌಡ, ಸತೀಶ, ಚಿಕ್ಕಸ್ವಾಮಿ ಎಂಬುವವರನ್ನು ದೊಣ್ಣೆಗಳಿಂದ ಹಿಗ್ಗಾಮುಗ್ಗಾ ಹೊಡೆದು ಹಲ್ಲೆ ಮಾಡಿದ್ದರು. ಸ್ವತಃ ರಾಜಮ್ಮನೇ ಮುಂದೆ ನಿಂತು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಲ್ಲದೇ ಮಕ್ಕಳನ್ನು ಮುಂದೆಬಿಟ್ಟು ಹಲವರ ಮೇಲೆ ಹಲ್ಲೆ ಮಾಡಿಸಿದ್ದಳು. ರಾಜಮ್ಮ ಮತ್ತು ಆಕೆಯ ಮಕ್ಕಳ ಆರ್ಭಟಕ್ಕೆ ಸಿಲುಕಿ ಒದೆ ತಿಂದ ಜಿ.ಬಿ.ಶಿವಣ್ಣ ಮಳವಳ್ಳಿ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಿಸಿದ್ದರು. ರಾಜಮ್ಮ,



ಆಕೆಯ ಮಕ್ಕಳು ಸೇರಿದಂತೆ ಬಂಭತ್ತು ಮಂದಿಯ ಮೇಲೆ ಎಫ್‌ಐಆರ್ ಕೂಡಾ ದಾಖಲಾಗಿತ್ತು.

ತಮ್ಮಿಂದ ಒದೆ ತಿಂದವರು ದೂರು ನೀಡುವುದು ಖಾತ್ರಿಯಾಗುತ್ತಿದ್ದಂತೆಯೇ ಇತ್ತ ರಾಜಮ್ಮನ ಮಕ್ಕಳು ಕೂಡಾ ತಮ್ಮ ಗುಂಪಿನ ಎಸ್.ಲೋಕೇಶ್ ಅಲಿಯಾಸ್ ತೀಟೆ ಲೋಕೇಶ ಎಂಬಾತನ ಮೂಲಕ 'ಜಿ.ಬಿ.ಶಿವಣ್ಣ ನಾಗರಾಜು, ಮಹದೇವು, ಬಸವರಾಜು, ವೆಂಕಟೇಶ, ರಾಜು, ತಮ್ಮಡಿ ಶ್ರೀನಿವಾಸಮೂರ್ತಿ, ರವಿ ಇವರೆಲ್ಲಾ ನನ್ನ ಮೇಲೆ ಸೈಕಲ್‌ಚೈನ್, ಚಾಕುವಿನಿಂದ ಹಲ್ಲೆ ಮಾಡಿದ್ದಾರೆ. 10 ದಿನದ ಹಿಂದೆ ನನಗೆ ಕಣ್ಣಿನ ಆಪರೇಷನ್ ನಡೆದು ಲೆನ್ಸ್ ಹಾನಿಯಾಗಿರುತ್ತದೆ. ನನ್ನ 40 ಗ್ರಾಂ ಚಿನ್ನದ ಚೈನು ಹಾಗೂ ವಿಷಕಂಠೇಗೌಡರ 30 ಗ್ರಾಂ ಚೈನು ಕಳ್ಳತನ ಮಾಡಿದ್ದಾರೆ' ಎಂಬ ಸುಳ್ಳು ಪ್ರತಿದೂರನ್ನು ದಾಖಲಿಸಿದ್ದ. ಒದೆ ತಿಂದವರು ಕೊಟ್ಟಿದ್ದ ದೂರನ್ನು ದಾಖಲಿಸಿಕೊಂಡಂತೆಯೇ ಪೊಲೀಸರು ಲೋಕೇಶ್ ಕೊಟ್ಟ ಸುಳ್ಳು ದೂರನ್ನೂ ವಿಚಾರಣೆ ಮಾಡದೆ ದಾಖಲಿಸಿಕೊಂಡಿದ್ದರು. ಈ ಲೋಕೇಶ ಕೆಎಸ್‌ಆರ್‌ಟಿಸಿ ನೌಕರನಾಗಿದ್ದರೂ, ಅಲ್ಲಿ ಕೆಲಸ ಮಾಡುವುದನ್ನು ಬಿಟ್ಟು ಊರಿನಲ್ಲಿ ತೀಟೆ ಕೆಲಸ ಮಾಡುವುದರಲ್ಲಿ ನಿಸ್ಸೀಮ. ಊರಿನ ಜನ ಅವನನ್ನು ಕರೆಯೋದೆ ತೀಟೆ ಲೋಕೇಶ ಎಂಬ ಅಡ್ಡಹೆಸರಿನಿಂದ.

ರಾಜಮ್ಮನ ಮಕ್ಕಳ ಗೂಂಡಾಗಿರಿ ಇಷ್ಟಕ್ಕೆ ಮುಗಿಯುವಂತದ್ದಲ್ಲ. ಇದೆಲ್ಲಾ ರಾದ್ಧಾಂತ ಮುಗಿದು 4 ದಿನವಾಗಿತ್ತಷ್ಟೆ. 5-9-2015ರ ರಾತ್ರಿ 8ರ ಸುಮಾರಿಗೆ ರಾಜಮ್ಮನ ಮತ್ತೊಬ್ಬ ಕುಲಪುತ್ರ ವಿಷಕಂಠೇಗೌಡ ತನ್ನ ಸಹಚರರಾದ ತೀಟೆ ಲೋಕೇಶ, ಮಂಜುನಾಥ, ಧರ್ಮರಾಜ್‌ರ ಜೊತೆ ಸೇರಿಕೊಂಡು ಗಾಜನೂರಿನ ನಂಜುಂಡೇಗೌಡ ಎಂಬಾತ ಮನೆಗೆ ಬರುವಾಗ ದಾರಿಯಲ್ಲಿ ಅಡ್ಡಗಟ್ಟಿ ಹಲ್ಲೆ ಮಾಡಿದ್ದರು. ಗಲಾಟೆ ಬಿಡಿಸಲು ಬಂದ ತಮ್ಮಡಿ ಶ್ರೀನಿವಾಸಮೂರ್ತಿಗೂ ಗೂಸ ಕೊಟ್ಟಿದ್ದರು. ನಂಜುಂಡೇಗೌಡ ಮಳವಳ್ಳಿ ಗ್ರಾಮಾಂತರ ಠಾಣೆಯಲ್ಲಿ ಅವರೆಲ್ಲರ ವಿರುದ್ಧ ದೂರು ದಾಖಲಿಸಿದ್ದ. ಈ ದೂರಿಗೆ ಪ್ರತಿಯಾಗಿ 6-9-2015ರ ಬೆಳಿಗ್ಗೆ 8.45ರ ಸಮಯದಲ್ಲಿ ಶ್ರೀನಿವಾಸಮೂರ್ತಿ, ನಂಜುಂಡೇಗೌಡ, ಮಹದೇವು, ಪುಟ್ಟಸ್ವಾಮಿ, ಸತೀಶ ಸೇರಿದಂತೆ 9 ಮಂದಿ ತನ್ನ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ವಿಷಕಂಠೇಗೌಡನ ಚೇಲಾ ಧರ್ಮರಾಜು ದೂರು ದಾಖಲಿಸಿದ್ದ.



ಅಂದಾನಿ ಆಟ ಶುರು

ಪ್ರಬಲ ಒಕ್ಕಲಿಗ ಜನಾಂಗಕ್ಕೆ ಸೇರಿದವರೆಂಬ ... ರಾಜಮ್ಮನ ಮಕ್ಕಳ ಆರ್ಭಟ ಸಾಕಷ್ಟು ಜೋ... ಕೇಸಿಂಗ್ ಪೈಪ್ ಕದ್ದ ಪ್ರಕರಣ ಮಾತ್ರವಲ್ಲ ... ದೊಡ್ಡಬಸವೇಶ್ವರ ಮಠದ ಜಾಗವನ್ನು ಒ... ಮಾಡಿಕೊಂಡ ಆರೋಪವೂ ಇವರ ಮೇಲಿದೆ. ಓಗೀಗೌಡ ಎಂಬುವವರು ಹಲವು ದಶಕಗಳ ಹಿ... ಸರ್ವೆ ನಂ.4/2ರಲ್ಲಿ 4 ಗುಂಟೆ ಜಮೀನನ್ನು ... ಮಾಡಿದ್ದರು. ಆ ಜಮೀನು ನಮ್ಮದೇ ಎಂದು ರಾ... ಆಕೆಯ ಮಕ್ಕಳು ಅದನ್ನು ಕಬ್ಜಾ ಮಾಡಿಕೊಂ... ಈ ಬಗ್ಗೆ ತಹಸೀಲ್ದಾರ್ ಕೋರ್ಟ್‌ನಲ್ಲಿ ದೂರು ದಾ... ನಿಮ್ಮ ಬಳಿ ದಾಖಲೆ ಇದ್ದರೆ ತೋರಿಸಿ, ... ವರ್ಷದೊಳಗೆ ತಮ್ಮ ಹೆಸರಿಗೆ ಮಾಡಿಸಿಕೊಳ್... ಇಲ್ಲದಿದ್ದರೆ ಮಠಕ್ಕೆ ಬಿಟ್ಟು ಕೊಡಬೇಕು ... ತೀರ್ಮಾನವೂ ಆಗಿತ್ತು. ಅದಾಗಿ ಹಲವು ವ... ಉರುಳಿದರೂ ಇನ್ನೂ ಮಠಕ್ಕೆ ಬಿಟ್ಟು ಕೊಟ್ಟಿಲ್ಲ ... ಹೆಸರಿಗೆ ಮಾಡಿಸಿಕೊಳ್ಳಲು ಅವರ ಬಳಿ ... ದಾಖಲೆಯೂ ಇಲ್ಲ.

ಇಂತಹ ಹಿನ್ನೆಲೆಯ ರಾಜಮ್ಮನ ಹೆಸರು ... ಈ ಗಲಾಟೆ ಪ್ರಕರಣದ ಕೇಸಿನಲ್ಲೂ ದಾಖಲಾ... ಆಗಲೇ ಮಾಜಿ ಶಾಸಕ ಅನ್ನದಾನಿಯ ಜಂಘಾಬಲ ... ವಾದದ್ದು. ರಾಜಕೀಯ ನಿರುದ್ಯೋಗದಿಂದ ಬ... ಹೋಗಿರುವ ಅನ್ನದಾನಿ ಪ್ರಚಾರದ ಭರಾಟೆಗಾಗಿ 'ಕ... ಮುಖಂಡರ ಮಾತು ಕೇಳಿಕೊಂಡು ಸರ್ಕಲ್ ಇನ್ಸ್... ಎಲ್.ಕೆ.ರಮೇಶ್ ಉದ್ದೇಶಪೂರ್ವಕವಾಗಿ ರಾಜ... ಹೆಸರನ್ನು ದೂರಿನಲ್ಲಿ ಸೇರಿಸಿದ್ದಾರೆ. ಜೆಡಿಎಸ್ ಮುಖ... ಕಾರ್ಯಕರ್ತರ ಮೇಲೆ ಸುಳ್ಳು ಮೊಕದ್ದಮೆ ಹಾಕು... ಎಂದು ಬೊಬ್ಬೆ ಹೊಡೆದಿದ್ದ. ರಾಜಮ್ಮನ ... ದೌರ್ಜನ್ಯದ ಸತ್ಯವನ್ನು ಮುಚ್ಚಿಟ್ಟು ಎಂಪಿ ಪುಟ್ಟ... ಎಂಎಲ್‌ಸಿ ಬಿ.ರಾಮಕೃಷ್ಣರ ಮುಂದೆಯು ... ಪೊಲಿಟಿಕಲ್ ಕಥೆ ಹೆಣೆದಿದ್ದ. ಅದನ್ನು ನಿಜವೆಂದೇ ... ಜೆಡಿಎಸ್ ನಾಯಕರು ಪೊಲೀಸಿನವರ ಮೇ... ಪ್ರತಿಭಟನೆ ನಡೆಸಿ ಈಗ ಜನರ ಮೂದಲಿಕೆಗೆ ತುತ್ತಾ...


ಸರ್ಕಲ್ ಇನ್‌ಪೆಕ್ಟರ್ ರಮೇಶರಿಗೆ ಮ... ಹೊಸದೇನೂ ಅಲ್ಲ. ಈ ಹಿಂದೆ 2008 ... 2011ರವರೆಗೆ 3 ವರ್ಷ ಮಳವಳ್ಳಿ ಠಾಣೆಯಲ್ಲಿ ... ಮಾಡಿದ್ದರು. ಇದ್ದಷ್ಟು ದಿನ ಯಾವುದೇ ತಾರತಮ್ಯ ... ಕೆಲಸ ಮಾಡಿ ಜನರ ವಿಶ್ವಾಸ ಗಳಿಸಿದ್ದ ... ಮಳವಳ್ಳಿಯಲ್ಲಿದ್ದ ರೌ... ಮಟ್ಟಹಾಕಿದ್ದಲ್ಲದೆ 15ಕ್ಕೂ ಹೆಚ್ಚು ... ಬಾಗಿಲು ಹಾಕಿಸಿದ್ದಾರೆ. ಕ... ಇದನ್ನಾದರು ತಿಳಿದುಕೊಂಡ ... ಜೆಡಿಎಸ್ ನಾಯಕರು ಪ್ರತಿಭ... ಇಳಿಯಬೇಕಿತ್ತು. ಅನ್ನದಾನಿಯ ಹ... ಅವರೆಲ್ಲ ಬಲಿಯಾದಂತಾಗಿದೆ. ಮ... ಬೇರೇನೂ ಕೆಲಸವಿಲ್ಲದ ಅನ್ನದಾನಿ ... ನರೇಂದ್ರಸ್ವಾಮಿಯ ಹೆಸರಿಗೆ ಡ್ಯಾ... ತಂದು ಜನರ ನಡುವೆ ಅವರನ್ನು ವಿಲನ್ ಮ... ಹವಣಿಸುತ್ತಿದ್ದಾನೆ. ಆದರೆ 'ಈತನೇ ನಮ್ಮ ಪಾಲಿನ ... ಎಂಬುದನ್ನು ಮಳವಳ್ಳಿ ಜನ ನಿರ್ಧರಿಸಿ ಎಂಟು ವ... ಕಳೆದಿರುವ ಸತ್ಯ ಅನ್ನದಾನಿಗೆ ಗೊತ್ತಿಲ್ಲ ಅನ್ನಿಸುತ್ತೆ.

■ ವರದಿ...

ಕನ್ನಡ ಸಾಹಿತ್ಯ ಕ್ಷೇತ್ರವನ್ನು ಹುಲುಸಾಗಿಸಿ; ಹೊಲಸಾಗಿಸಬೇ...

ಕೆ.ಎಸ್. ಭಗವಾನ್ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಗೌರವ ಪ್ರಶಸ್ತಿ ಘೋಷಿಸಿದಾಗ ನನಗೆ ಆಶ್ಚರ್ಯವಾಯಿತು. ಭಗವಾನ್‌ಗಿಂತ ಹೆಚ್ಚು ಅರ್ಹರು ಇರುವಾಗ ಅಂಥವರಿಗಿಂತ ಮೊದಲೇ ಭಗವಾನ್ ಅವರಿಗೆ ಪ್ರಶಸ್ತಿ ಘೋಷಣೆಯಾದದ್ದು ನನ್ನ ಆಶ್ಚರ್ಯಕ್ಕೆ ಕಾರಣವಾಗಿತ್ತು. ಎಂ.ಎಂ. ಕಲ್ಬುರ್ಗಿಯವರ ಕೊಲೆ ಮತ್ತು ಭಗವಾನ್ ಅವರ ನಿಷ್ಠೂರ ಹೇಳಿಕೆಗಳು ಈ ಹಿನ್ನೆಲೆಗಳಲ್ಲಿ, ಸಾಹಿತ್ಯ ವಲಯದ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಬೆಂಬಲ ರೂಪವಾಗಿ ಅಕಾಡೆಮಿಯು ಭಗವಾನ್ ಅವರಿಗೆ ಇತರ ಅರ್ಹರಿಗಿಂತ ಮೊದಲೇ ಈ ಪ್ರಶಸ್ತಿಯನ್ನು ಘೋಷಿಸಿರಬೇಕೆಂದುಕೊಂಡು ಸಮಾಧಾನಪಟ್ಟುಕೊಂಡೆ. ಈ ರೀತಿಯ ನಡೆಯು ಸಾಹಿತ್ಯ ಕ್ಷೇತ್ರವೂ ಸೇರಿದಂತೆ ಸಾಮಾಜಿಕ ವಲಯದಲ್ಲಿ ಅಸಹಜವೇನಲ್ಲ.

ಆದರೆ, ಭಗವಾನ್‌ರಿಗೆ ಘೋಷಿತವಾಗಿರುವ ಪ್ರಶಸ್ತಿಯ ಬಗ್ಗೆ ಅಕಾಡೆಮಿಯು ಪುನರಾಲೋಚನೆ ಕೈಗೊಳ್ಳಲಿದೆಯೆಂದು ದಿನಪತ್ರಿಕೆಯೊಂದರಲ್ಲಿ ಓದಿ ನನಗೆ ಆಶ್ಚರ್ಯದ ಜೊತೆಗೆ ಆಘಾತವೂ ಉಂಟಾಯಿತು! ಪ್ರಶಸ್ತಿ ಘೋಷಿಸಿದ್ದು ಯಾರೋ ಒಬ್ಬ ಸಾಮಾನ್ಯ ವ್ಯಕ್ತಿಯಲ್ಲ, ಸಾಹಿತ್ಯ ಅಕಾಡೆಮಿ



ಘೋಷಣೆಯು ಏಕವ್ಯಕ್ತಿ ನಿರ್ಧಾರವಲ್ಲ, ಸಮಿತಿಯ ಆಯ್ಕೆ. ಹೀಗಿರುವಾಗ ಪುನರಾಲೋಚನೆ ಏಕೆ? ಘೋಷಿಸುವಾಗ, ಸಮಿತಿಗಾಗಲೀ ಅಕಾಡೆಮಿಗಾಗಲೀ ಸಾಮಾಜಿಕ ಪ್ರತಿಕ್ರಿಯೆ ಮತ್ತು ಪರಿಣಾಮಗಳ ಅರಿವಿರಲೇಬೇಕಲ್ಲವೆ? ಅರಿವಿದ್ದೂ ಸಾಹಿತ್ಯ ಕ್ಷೇತ್ರದ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಪುಷ್ಟಿ ನೀಡಲೆಂದೋ, ಪರಿಗಣಿತ ಸಾಹಿತಿಯು (ಈ ಬಾರಿಗೇ) ಅರ್ಹನೆಂದೋ ಪ್ರಶಸ್ತಿಯನ್ನು ಘೋಷಿಸಿದಮೇಲೆ, ಕೆಲವು ಒತ್ತಡ, ಬೆದರಿಕೆಗಳಿಗೆ ಮಣಿದು ಪುನರಾಲೋಚನೆಯ ನಿರ್ಧಾರ ಕೈಗೊಂಡರೆ ಅದು ಸಾಹಿತ್ಯ ಅಕಾಡೆಮಿಯಂತಹ ಸಂಸ್ಥೆಯ ದೌರ್ಬಲ್ಯವನ್ನು ಪ್ರಚುರಪಡಿಸಿದಂತಾಗಲಿಲ್ಲವೆ? ಸಾಹಿತ್ಯ ವಲಯದ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಇದೊಂದು ಪ್ರಹಾರವಲ್ಲವೆ? ಸಾಹಿತಿಗಳೆಲ್ಲರಿಗೆ ಎಸಗಿದ ಪರೋಕ್ಷ ಅವಮಾನವಲ್ಲವೆ? ಪೆನ್ನಿಗಿಂತ ಗನ್ನು ಬಲಶಾಲಿಯೆಂದು ಸಾಹಿತ್ಯ ಅಕಾಡೆಮಿಯೇ ಒಪ್ಪಿದಂತಾಗಲಿಲ್ಲವೆ?


ಪುನರಾಲೋಚನೆಯ ನಿರ್ಧಾರ ಅಕಾಡೆಮಿಯದ್ದಾಗಿರಬಹುದು ಅಥವಾ ಸರ್ಕಾರದ ಒತ್ತಡದ ಫಲವಾಗಿರಬಹುದು, ಜವಾಬ್ದಾರಿಯುತ ಪ್ರತಿಷ್ಠಿತ ಸಂಸ್ಥೆಯೊಂದರ ಈ ನಡೆ (ಹಿನ್ನಡೆ) ಆ ಸಂಸ್ಥೆಯ ಘನತೆಯನ್ನು ಕುಂದಿಸುತ್ತದೆ ಮಾತ್ರವಲ್ಲ, ಸಮಾಜಕ್ಕೆ ತಪ್ಪು ಸಂದೇಶವನ್ನು ನೀಡುತ್ತದೆ. ಅಭಿವ್ಯಕ್ತಿ ಸ್ವಾತಂತ್ರ್ಯದ ಹೆಸರಿನಲ್ಲಿ ನಾವು ಏನು ಬೇಕಾದರೂ ಹೇಳಬಹುದು ಎಂದು ಭಾವಿಸುವವರಿಗಿಂತ ಹೆಚ್ಚಾಗಿ, ಗಲಾಟೆ ಮಾಡಿದರೆ ಮತ್ತು ಧಮಕಿ ಹಾಕಿದರೆ ನಾವು ಏನು ಬೇಕಾದರೂ ಸಾಧಿಸಬಹುದು ... ಮುನ್ನುಗ್ಗುವವರನ್ನು ಪ್ರೋತ್ಸಾಹಿಸಿದಂತಾ... ಅಕಾಡೆಮಿಯ ಇಂಥ ಹಿನ್ನಡೆ. ಭಗವಾನ್‌ರಿಗೆ ... ಪ್ರಶಸ್ತಿಯನ್ನು ಘೋಷಿಸುವ ಮೊದಲೇ ಅಕಾಡೆ... ಇದನ್ನೆಲ್ಲ ಯೋಚಿಸಬೇಕಿತ್ತು. ಘೋಷಿಸಿಯಾದ... ಪುನರಾಲೋಚಿಸುವುದು ಯಾವ ವಿಧದಲ್ಲೂ ತ...


(ನಮ್ಮ) ವ್ಯವಸ್ಥೆಯು ಸಾಹಿತ್ಯ-ಸಂಸ್ಕೃತಿ ವಲಯ... ಇಂತಹ ಎಡವಟ್ಟುಗಳನ್ನು ಎಸಗುತ್ತಿರುವುದು ... ಮೊದಲ ಸಲವೇನಲ್ಲ. ಕಳೆದ ವರ್ಷವಷ್ಟೇ, ರಾ... ಗೌರವದ ವಿಷಯದಲ್ಲಿಯೂ ನಮ್ಮ ಸರ್ಕಾರವು ... ರೀತಿಯ ಎಡವಟ್ಟು ಮಾಡಿ(ಕೊಂಡಿ)ತ್ತು. 'ರಾ... ಗೌರವವನ್ನು ನೀಡುವ ಮನಸ್ಸು ಮಾಡಿ, ಅದಕ್ಕೆ... ಸಮಿತಿ ರಚಿಸಿ, ಸಮಿತಿಯ ಮೂಲಕ ಜನಾಭಿ... ಬಯಸಿತು. ಈರುಳ್ಳಿಯ ಬೆಲೆಯೇರಿಕೆ ಬಗ್ಗೆ ಜನಾಭಿ... ಸಂಗ್ರಹಿಸುವ ಹಾಗೇನು 'ರಾಷ್ಟ್ರಕವಿ' ಗೌರವ ... ಜನಾಭಿಪ್ರಾಯ ಸಂಗ್ರಹಣೆ? 'ಮೂರು, ಮತ್ತೊಂದು' ... ಅಭಿಪ್ರಾಯ ತಿಳಿಸಿದರು. ಸಮಿತಿಯು ಆಯ್ಕೆ... ಕೈಬಿಟ್ಟಿತು! ಈ ಘಟನಾವಳಿಯಿಂದ ಆದ ಲಾಭ...

ವಮೊಗ್ಗ: ಎಂಎಲ್ಸಿ ಹೊಸ್ತಿಲಲ್ಲಿ ಯಡ್ಡಿಯ ಹೊಸ ಗೇಮ್


ಡ್ಡಿಯ ಕಥೆ ಮುಗಿದೇಹೋಯ್ತು ಅಂತ ಳಿಗೆ ಸಂಭ್ರಮಿಸುತ್ತಿದ್ದ ಈಶು, ಅನಂತ್ಕುಮಾರ್, ಮದೂನಂತವರಿಗೆ ಯಡಿಯೂರಪ್ಪ ಶಾಕ್ವೊಂದು ದಿದ್ದಾರೆ. ಯಡಿಯೂರಪ್ಪನಿಗೆ ಬೇರೆ ಪಕ್ಷದಲ್ಲಿರುವ ಗಳಿಗಿಂತ ಮುಪ್ಪಟ್ಟು ಹಿತಶತ್ರುಗಳು ಕಮಲ ಪಕ್ಷದಲ್ಲೇ ಇರೋದು ಹೊಸ ಸಂಗತಿಯೇನೂ ಅಲ್ಲ. ಮುಖ್ಯಮಂತ್ರಿ ಗಾದಿಯಿಂದ ಇಳಿಯುವಲ್ಲಿಂದ ಬಂದು ಬಿಜೆಪಿ ತೊರೆದು ಕೆಜೆಪಿ ಕಟ್ಟಿದ್ದು, ಸುಣ್ಣವಾಗಿ ಬಿಜೆಪಿಗೆ ಮರಳಿದ್ದು ಆಟಕ್ಕುಂಟು ಬಂತೆ ಕಮಲ ನಾಯಕರಿಂದ ನಿರ್ಲಕ್ಷಿಸಲ್ಪಟ್ಟಿದ್ದು ಈ ಮಾತನ್ನು ಮತ್ತೆಮತ್ತೆ ಸಾಬೀತುಪಡಿಸುತ್ತಲೇ ತ್ತೀಚೆಗೆ ನಡೆದ ಬಿಬಿಎಂಪಿ ಚುನಾವಣೆಯಲ್ಲೂ ನ್ನು ಬಿಜೆಪಿಯವರು ಕ್ಯಾರೇ ಎನ್ನಲಿಲ್ಲ. ಅತ್ತ ಚಾರಣಾದಲ್ಲೂ ರಾಷ್ಟ್ರೀಯ ಉಪಾಧ್ಯಕ್ಷ ಎನ್ನುವ ಕುದುರೆಕೊಟ್ಟ ಭ್ರಷ್ಟಾರೋಪದ ಯಡ್ಡಿಯನ್ನು ಮೋದಿ ನಯವಾಗಿ ಸಾಗಹಾಕಿದ್ದೂ ಆಗಿದೆ. ಬಿಜೆಪಿಗರೂ ಯಡ್ಡಿಯ ಹೊರೆಯನ್ನು ಹೊರಲು ದೂರ ಇಡುತ್ತಲೇ ಬಂದಿರುವುದರಿಂದ ಯಡ್ಡಿಯ ಣ ಇಲ್ಲಿಗೆ ಇತಿಶ್ರೀ ಹಾಡಿಸಿಕೊಂಡಿತು ಎಂಬ ಯಡ್ಡಿ ಶಿಕಾರಿಪುರದಿಂದಲೇ ತನ್ನ ಪಾರಮ್ಯದ ಾರ್ನಿಂಗ್ಸ್ ಸೂಚನೆ ರವಾನಿಸಿರೋದು ಬಿಜೆಪಿಗರಲ್ಲಿ ಚಕ್ಕಾಚಾರಗಳನ್ನು ಶುರು ಮಾಡಿದೆ.

ಎರಡು ವಿಧಾನಸಭಾ ಚುನಾವಣೆಗಳಲ್ಲಿ ಯಡ್ಡಿ ಗ ರಾಘವೇಂದ್ರನ ಗೆಲುವಿಗೆ ಪ್ರಬಲ ಅಡ್ಡಗಾಲಾಗಿ ಂತವೀರಪ್ಪ ಗೌಡನನ್ನು ಕಾಂಗ್ರೆಸ್ ಪಡಸಾಲೆಯಿಂದ ನ್ನ ಮನೆಯ ಕಾಂಪೌಂಡಿನೊಳಕ್ಕೆ ಕೊಂಡುಕೊಂಡಿ ತೀರಾ ನಿರ್ಲಕ್ಷಿಸುವ ಸಂಗತಿಯೇನೂ ಅಲ್ಲ. ಎಮ್ಮೆಲ್ಸಿ ಚುನಾವಣೆ ಎದುರಾಗಲಿರುವ ದಲ್ಲಿ ಯಡ್ಡಿಯ ಈ ನಡೆ ಸಾಕಷ್ಟು ಕುತೂಹಲ ಏಕೆಂದರೆ ಶಾಂತವೀರಪ್ಪ ಗೌಡ, ಯಡ್ಡಿ ಸಾಂಗತ್ಯಕ್ಕೆ ವುದರಿಂದ ಶಿಕಾರಿಪುರದಲ್ಲಿ ತನಗೆ ವಿರೋಧಿಗಳೇ ಮಾಡಿಕೊಂಡಿರುವುದಲ್ಲದೆ ಪ್ರಬಲ ಸಾಧು ರುತರ 'ಒಲವ'ನ್ನು ಸಾಲಿಡ್ಡಾಗಿ ಬುಟ್ಟಿಗೆ ಕೊಂತಾಗಿದೆ. ಇವರಿಬ್ಬರದೂ ಅಂದಕಾಲತ್ತಿಲ್ ಯಡ್ಡಿ ಶಿಕಾರಿಪುರದಿಂದ ಗೆದ್ದು ಶಾಸಕನಾಗಿದ್ದರೂ ಾಯಕನಾಗುವ ಇರಾದೆಯಲ್ಲಿ ಓಡಾಡುತ್ತಿದ್ದಾಗ ಪರವಾಗಿ ಶಿಕಾರಿಪುರದಲ್ಲಿ ಎಮ್ಮೆಲ್ಲೆಗಿರಿ ದ್ದುದೇ ಈ ಶಾಂತವೀರಪ್ಪ ಗೌಡ. ಒಂದರ್ಥದಲ್ಲಿ ಬಲಗೈ ಬಂಟನಂತಿದ್ದ ಶಾಂತವೀರಪ್ಪ ಂದ ಹೊರನಡೆಯಲು ಕಾರಣವಾದದ್ದು ಯಡ್ಡಿಯ ರಾಜಕಾರಣ.






ಈಶ್ವರಪ್ಪ



ರಾಘವೇಂದ್ರ




ತಾನು ಮುಖ್ಯಮಂತ್ರಿಯಾಗಿದ್ದಾಗಲೇ ಮಗನನ್ನು ಹಲವರ ವಿರೋಧದ ನಡುವೆ ಶಿವಮೊಗ್ಗದ ಸಂಸದನನ್ನಾಗಿ ಸಿದ್ದ ಯಡ್ಡಿ ವಿರುದ್ಧ ಶಾಂತವೀರಪ್ಪನಿಗೂ ಮುನಿಸಿತ್ತು. ಕೊನೆಗೆ ಯಡ್ಡಿಯ ಸಂಗ ತೊರೆದ ಶಾಂತವೀರಪ್ಪ ಕಾಂಗ್ರೆಸ್‌ಗೆ ಸೇರಿಕೊಂಡಿದ್ದರು. 2013ರ ಚುನಾವಣೆ ವೇಳೆಗೆ ಯಡ್ಡಿ ಬಿಜೆಪಿಯಿಂದಲೇ ಹೊರಬಂದು ಕೆಜೆಪಿ ಕಟ್ಟಿ ಸ್ಪರ್ಧೆಗಿಳಿದಾಗ ಕಾಂಗ್ರೆಸ್ ಅಭ್ಯರ್ಥಿಯಾಗಿ ಸೆಡ್ಡು ಹೊಡೆದದ್ದು ಇದೇ ಶಾಂತವೀರಪ್ಪ. ಯಡ್ಡಿಯನ್ನು ಶತಗತಾಯ ಸೋಲಿಸಲೇ ಬೇಕೆಂಬ ಹಠಕ್ಕೆ ಬಿದ್ದ ಜೆಡಿಎಸ್ ಕೂಡಾ ಆ ಚುನಾವಣೆಯಲ್ಲಿ ಸ್ಪರ್ಧಿಯನ್ನು ಹಾಕದೆ ಪರೋಕ್ಷವಾಗಿ ಕಾಂಗ್ರೆಸ್‌ಗೆ ಸಾಥ್ ನೀಡಿತ್ತು. ಆದರೆ ಯಡ್ಡಿ ಚೆಲ್ಲಾಡಿದ ಹಣದಿಂದಾಗಿ ಗೆಲುವು ಶಾಂತವೀರಪ್ಪನಿಗೆ ದಕ್ಕಲಿಲ್ಲ.


ನಂತರ ನಡೆದ ಬೆಳವಣಿಗೆಯಲ್ಲಿ ಕೆಜೆಪಿ ಕಟ್ಟಿದ್ದ ಯಡ್ಡಿ, ಕೇಂದ್ರ ಮಂತ್ರಿಗಿರಿಯ ಮೇಲೆ ಕಣ್ಣಿಟ್ಟು ಮೋದಿ ಪೌರೋಹಿತ್ಯದಲ್ಲಿ ಬಿಜೆಪಿಗೆ ವಾಪಾಸ್ ಬಂದದ್ದು, ಶಿಕಾರಿಪುರದ ತನ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಶಿವಮೊಗ್ಗ ಎಂಪಿ ಎಲೆಕ್ಷನ್‌ಗೆ ಸ್ಪರ್ಧಿಸಿದ್ದು, ಅಲ್ಲಿ ಗೆದ್ದರೂ ಕೇಂದ್ರದಲ್ಲಿ ಮಂತ್ರಿಗಿರಿ ದಕ್ಕದೆ ಅತಂತ್ರವಾದದ್ದು ಎಲ್ಲವೂ ಒಂದೊಂದಾಗಿ ಘಟಿಸಿದವು. ಕೇಂದ್ರಮಂತ್ರಿಯಾಗಿ ಮತ್ತೆ ತನ್ನ ಗತವನ್ನು ಮರಳಿ ಪಡೆಯುವ ಆಶೆಗಳೆಲ್ಲ ಅನಂತ್ಕುಮಾರ್, ಸದಾ, ಈಶುನಂತವರಿಂದಾಗಿ ಗಾಳಿಗೋಪುರದಂತೆ ಕುಸಿದುಬಿದ್ದ ಮೇಲೆ ಯಡ್ಡಿ ನಿಜಕ್ಕೂ ಮಂಕಾಗಿ ಹೋದರು. ಆತ್ಕೂರೆದು ಪಕ್ಷಕ್ಕೆ ತಾನೇ ತಾನಾಗಿ ವಾಪಾಸ್ ಬಂದದ್ದನ್ನು ನೆನೆಸಿಕೊಂಡು ಯಡ್ಡಿ ಕೊರಗುವ ವೇಳೆಗೆ ಸರಿಯಾಗಿ ತನ್ನಿಂದಲೇ ತೆರವಾಗಿದ್ದ ಶಿಕಾರಿಪುರ ಎಂಎಲ್‌ಎ ಸ್ಥಾನಕ್ಕೆ ಉಪಚುನಾವಣೆಯೂ ಘೋಷಣೆಯಾಗಿತ್ತು.

ಯಡ್ಡಿಯ ಅಧಃಪತನಕ್ಕೆ ಶಾಂತವೀರಪ್ಪನಿಂದ ಭರ್ಜರಿ ಏಟು ಬಿದ್ದಿದ್ದೇ ಆ ಚುನಾವಣೆಯಿಂದ. ಲೋಕಸಭೆ ಚುನಾವಣೆಯಲ್ಲಿ ಬರೋಬ್ಬರಿ ನಾಲ್ಕು ಲಕ್ಷ ಮತಗಳ ಅಂತರದಲ್ಲಿ ವಿಜಯಿಯಾಗಿದ್ದ ಯಡ್ಡಿ ಈ ಬಾರಿ ಶಿಕಾರಿಪುರದಿಂದ ತನ್ನ ಮಗ ರಾಘವೇಂದ್ರನನ್ನೇ ಕಣಕ್ಕಿಳಿಸಿ ಸುಲಭವಾಗಿ ಗೆದ್ದು ಬರುವ ಇರಾದೆಯಲ್ಲಿದ್ದರು. ಭ್ರಷ್ಟ ವರ್ಚಸ್ಸಿನ ನಂತರವೂ ಶಿವಮೊಗ್ಗದ ಜನ ಆ ಪರಿ ಮತಗಳ ಅಂತರದಲ್ಲಿ ಯಡ್ಡಿಯನ್ನು ಗೆಲ್ಲಿಸಿದ್ದು ಕಂಡ ವಿರೋಧಿಗಳು ಕೂಡಾ ರಾಘವೇಂದ್ರ ಸಲೀಸಾಗಿ ಗೆಲ್ಲುತ್ತಾನೆಂದೇ ಎಣಿಸಿದ್ದರು. ಆದರೆ ಕಾಂಗ್ರೆಸ್‌ನಿಂದ ಮತ್ತೊಮ್ಮೆ ಫೀಲ್ಡಿಗಿಳಿದಿದ್ದ ಶಾಂತವೀರಪ್ಪ ಅದನ್ನೆಲ್ಲಾ ಹುಸಿ ಮಾಡಿದ್ದರು. ರಾಘವೇಂದ್ರ ಗೆಲುವಿಗಾಗಿ ಏದುಸಿರು ಬಿಡುವಂತಾಗಿತ್ತು. ಕೊನೆಗೂ ಜುಜುಬಿ ಐದೂವರೆ ಸಾವಿರ ಚಿಲ್ಲರೆ ಮತಗಳ ಅಂತರದಲ್ಲಿ ಶಾಂತವೀರಪ್ಪ ರಾಘವೇಂದ್ರನಿಗೆ ಗೆಲುವು ಬಿಟ್ಟುಕೊಟ್ಟಿದ್ದರು. ಆ ಫಲಿತಾಂಶದ ನಂತರ ಯಡ್ಡಿ ತನ್ನ ಸ್ವಕ್ಷೇತ್ರದಲ್ಲೇ ವರ್ಚಸ್ಸು ಕಳೆದುಕೊಂಡಿರೋದು ಸಾಬೀತಾಗಿತ್ತು. ಅದನ್ನೇ ನೆಪ ಮಾಡಿಕೊಂಡು ಬಿಜೆಪಿಗರು ಯಡ್ಡಿಯನ್ನು ಮೂಲೆಗುಂಪು ಮಾಡುತ್ತಲೇ ಬಂದಿದ್ದರು.


ಹೀಗೆ ಯಡ್ಡಿಯ ರಾಜಕೀಯ ನಡುವಿಗೆ ಬುಡದಲ್ಲೇ ಏಟು ಹಾಕಿದ್ದ ಶಾಂತವೀರಪ್ಪ ಗೌಡನನ್ನೇ ಕೈ ಪಾರ್ಟಿಯಿಂದ ಬಿಜೆಪಿಗೆ ತಂದು ಕೂರಿಸಿಕೊಂಡಿರೋದು ಹೊಸ್ ಗೇಮ್‌ಪ್ಲ್ಯಾನ್ ಎಂದೇ ಅಂದಾಜಿಸಲಾಗುತ್ತಿದೆ. ಶಿಕಾರಿಪುರದಲ್ಲಿ ಯಡ್ಡಿಗೆ ಎದುರಾಗಿ ನಾಯಕರಿಲ್ಲದಂತೆ ನಿವಾರಿಸಿಕೊಂಡಿದ್ದಾರೆ. ಇತ್ತೀಚೆಗೆ ರಾಜ್ಯ ರಾಜಕಾರಣಕ್ಕೆ ಮರಳುವ ಮಾತನಾಡಿದ್ದ ಯಡ್ಡಿ ರೈತ ಚೈತನ್ಯ ಯಾತ್ರೆಯ ನೆಪದಲ್ಲಿ ರಾಜ್ಯವನ್ನು ಸುತ್ತುತ್ತಿರೋದಕ್ಕೂ, ಎಂಎಲ್‌ಸಿ ಚುನಾವಣೆಯ ಹೊಸ್ತಿಲಲ್ಲೇ ಶಿವಮೊಗ್ಗದ ತನ್ನ ಬುಡ ಗಟ್ಟಿ ಮಾಡಿಕೊಂಡಿರುವುದಕ್ಕೂ ಸಂಬಂಧ ಇಲ್ಲದಿಲ್ಲ.




ರುದ್ರೇಗೌಡ



ಸಿದ್ರಾಮಣ್ಣ



ಶಾಂತವೀರಪ್ಪ



ದತ್ತಾತ್ರಿ

ಡಿಸೆಂಬರ್ ಅಥವಾ ಜನವರಿಯಲ್ಲಿ ಸ್ಥಳೀಯ ಸಂಸ್ಥೆಗಳಿಂದ ವಿಧಾನ ಪರಿಷತ್‌ಗೆ ಚುನಾವಣೆ ನಡೆಯಲಿದೆ. ಈ ಬಾರಿ ಶಿವಮೊಗ್ಗ ವ್ಯಾಪ್ತಿಯ ಪೌರಸಂಸ್ಥೆ ಮತ್ತು ಗ್ರಾಮ ಪಂಚಾಯ್ತಿಗಳಲ್ಲಿ ಕಾಂಗ್ರೆಸ್ ಬೆಂಬಲಿಗರ ಸಂಖ್ಯೆಯೇ ದೊಡ್ಡದಿದೆ. ಪಕ್ಷದ ಮುಖ ನೋಡಿ ಮತಹಾಕಿದರೆ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಲು ಇಲ್ಲಿ ಯಾವ ಆತಂಕವೂ ಇಲ್ಲ. ಹಾಗಾಗಿಯೇ ಕಾಂಗ್ರೆಸ್ ಟಿಕೆಟ್‌ಗಾಗಿ ಭರ್ಜರಿ ಪೈಪೋಟಿಯೇ ನಡೆಯುತ್ತಿದೆ. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಆರ್.ಪ್ರಸನ್ನ ಕುಮಾರ್ ಹೆಸರು ಮುಂಚೂಣಿಯಲ್ಲಿದೆ ಯಾದರು ಸ್ಪೀಕರ್ ಕಾಗೋಡು ಮತ್ತು ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ್ ತಮ್ಮತಮ್ಮ ಬೆಂಬಲಿಗರನ್ನು ಕಣಕ್ಕಿಳಿಸುವ ತಯಾರಿಯಲ್ಲಿದ್ದಾರೆ.

ಬಿಜೆಪಿಯಲ್ಲೂ ಟಿಕೆಟ್‌ಗೆ ಇಂತಹುದೇ ಪೈಪೋಟಿ ಇದೆ. ಬಿಜೆಪಿಯಿಂದ ಹಾಲಿ ಎಮ್ಮೆಲ್ಸಿಯಾಗಿರುವ ಆರ್.ಕೆ. ಸಿದ್ರಾಮಪ್ಪ ಬಿಜೆಪಿ ಜಿಲ್ಲಾಧ್ಯಕ್ಷ ಎಸ್. ದತ್ತಾತ್ರಿ, ಆಯನೂರು ಮಂಜುನಾಥ್, ಎಸ್.ರುದ್ರೇಗೌಡರ ಹೆಸರುಗಳು ಕೇಳಿಬರುತ್ತಿದ್ದವು. ಆದರೆ ಯಡ್ಡಿ-ಶಾಂತವೀರಪ್ಪ ಹೊಸ ದೋಸ್ತಿಯಿಂದ ಪೈಪೋಟಿಗೆ ಶಾಂತವೀರಪ್ಪನ ಹೆಸರೂ ಹರಿದುಬರಲಿದೆ. ಸ್ಥಳೀಯ ಸಂಸ್ಥೆಗಳಲ್ಲಿ ಬಿಜೆಪಿ ಬೆಂಬಲಿಗರ ಸಂಖ್ಯೆ ಕಡಿಮೆ ಇರುವುದರಿಂದ ಯಾರೇ ಸ್ಪರ್ಧಿಸಿದರೂ ಅವರು ಗೆಲ್ಲಬೇಕೆಂದರೆ ಹಿಂದೆ ನಿಂತು ಹಣದ ಹೊಳೆ ಹರಿಸುವ ಕೈ ಇರಲೇಬೇಕೆನ್ನುವುದು ಸತ್ಯ. ಕಳೆದ ಚುನಾವಣೆಯಲ್ಲೂ ಯಡ್ಡಿ ಹರಿಸಿದ ಹಣದ ಹೊಳೆಯಲ್ಲಿ ಕೊಚ್ಚಿಹೋದ ಕಾಂಗ್ರೆಸ್, ಜೆಡಿಎಸ್ ಸ್ಥಳೀಯ ಸಂಸ್ಥೆ ಜನಪ್ರತಿನಿಧಿಗಳಿಂದಾಗಿ ಬಿಜೆಪಿಯ ಆರ್.ಕೆ. ಸಿದ್ರಾಮಣ್ಣ ಗೆಲ್ಲುವಂತಾಗಿತ್ತು. ಈ ಬಾರಿಯೂ ಅಂತಹ ಸಾಹಸಕ್ಕೆ ಮುಂದಾಗದ ಹೊರತು ಗೆಲುವು ದಕ್ಕುವುದಿಲ್ಲ ಎಂಬುದು ಬಿಜೆಪಿಗರಿಗೂ ಮನದಟ್ಟಾಗಿದೆ. ಸದ್ಯಕ್ಕೆ ಶಿವಮೊಗ್ಗ ಬಿಜೆಪಿಯಲ್ಲಿ ಆ ತಾಕತ್ತು ಇರೋದು ಯಡ್ಡಿಗೆ ಮಾತ್ರ.

ಕಳೆದ ಚುನಾವಣೆಯಲ್ಲಿ ಸೋತುಸುಣ್ಣವಾಗಿರುವ ಈಶು ಬೆಂಬಲಿಗರ ಗೆಲುವಿಗೋಸ್ಕರ ದುಡ್ಡು ಸುರಿಯುವಂತಹ ರಿಸ್ಕು ತೆಗೆದುಕೊಳ್ಳೋದು ಡೌಟು. ಹಾಗಾಗಿ ಯಡ್ಡಿ ಹೇಳಿದವರಿಗೇ ಟಿಕೆಟ್ ದಕ್ಕುವುದು ಗ್ಯಾರಂಟಿ. ಈ ಲೇಟೆಸ್ಟ್ ಹೈಡ್ರಾಮಾದಿಂದ ಯಡ್ಡಿ ಕೃಪೆ ಶಾಂತವೀರಪ್ಪನ ಕಡೆ ವಾಲಿದೆ ಎಂಬ ಮಾತುಗಳು ಕೇಳಿಬರುತ್ತಿವೆ. ಇದರಿಂದ ಯಡ್ಡಿ ಒಂದೇ ಕಲ್ಲಿಗೆ ಎರಡು ಹಕ್ಕಿ ಉರುಳಿಸಲಿದ್ದಾರೆ. ಒಂದೆಡೆ ಶಾಂತವೀರಪ್ಪನನ್ನು ನಿವಾರಿಸಿಕೊಳ್ಳುವ ಮೂಲಕ ಶಿಕಾರಿಪುರದಲ್ಲಿ ತನ್ನ ಪಾರಮ್ಯವನ್ನು ಗಟ್ಟಿಮಾಡಿಕೊಳ್ಳುವ ಹುನ್ನಾರ ಇದ್ದರೆ, ಮತ್ತೊಂದೆಡೆ ಎಂಎಲ್ಸಿ ಎಲೆಕ್ಷನ್‌ನಲ್ಲಿ ಕಾಂಗ್ರೆಸ್ ಪ್ರಾಬಲ್ಯದ ನಡುವೆಯೂ ಬಿಜೆಪಿ ಕ್ಯಾಂಡಿಡೇಟನ್ನು ಗೆಲ್ಲಿಸಿಕೊಂಡು ರಾಜ್ಯ ನಾಯಕನಾಗಿ ತನ್ನ ವರ್ಚಸ್ಸನ್ನು ಮರುಸ್ಥಾಪಿಸುವ ಇರಾದೆ ಇದೆ.

■ ಟಿ.ಎನ್. ಷಣ್ಮುಖ

ನಿಷ್ಠವೆಂದರೆ, ಇಬ್ಬರು ಹಿರಿಯ, ಶ್ರೇಷ್ಠ ಕವಿಗಳ ಸು ಚರ್ಚೆಗಳಿಗೆ ಗ್ರಾಸವಾಗಿದ್ದು, ಇಷ್ಟೇ ಆಗಿದ್ದಿದ್ದರೆ ಪಡಬೇಕಿಲ್ಲ. ಆದರೆ ರಾಷ್ಟ್ರಕವಿ ಗೌರವಕ್ಕಾಗಿ ಲಾಬಿ ದ್ದಾರೆಂದು ಸುದ್ದಿ ಹಬ್ಬಿಸುವ ಮೂಲಕ ಕೆಲವು ಸಂಸ್ಥೆಗಳು ಮತ್ತು ಜಾಲತಾಣಗಳು, ಈ ಇಬ್ಬರು ಧೀಮಂತ ಕವಿಗಳೆಡೆಗೂ ಕೆಲವು ಮೂರ್ಖರು ದ ದೃಷ್ಟಿ ಹಾಯಿಸಲು ಕಾರಣವಾದವು. ಕೆ.ಎಸ್. ಅಹಮದ್ ಮತ್ತು ಚೆನ್ನವೀರ ಕಣವಿ ಇಬ್ಬರೂ ಧೀಮಂತರು. ಸಾಹಿತ್ಯ ಕ್ಷೇತ್ರದಲ್ಲಿನ ಅವರ ನ 'ರಾಷ್ಟ್ರಕವಿ' ಗೌರವವೂ ಸೇರಿದಂತೆ ಯಾವುದೇ ರಸ್ಕಾರಕ್ಕೆ ಅರ್ಹರಾಗಿದ್ದು, ಈರ್ವರೂ ಲಾಬಿ ಯಿಂದ ದೂರ. ನಿಸಾರ್ ಅಹಮದ್ ಅವರು ಸಾಹಿತಿಯಿತ್ತರು. ಸಾಹಿತ್ಯ ಕೃಷಿ ಮತ್ತು ಗಳಿಗೆ ತಮ್ಮನ್ನು ಸಮರ್ಪಿಸಿಕೊಂಡಿರುವ ಈ ಕವಿಯು, ಅವರಿಗೆ ಪ್ರಶಸ್ತಿಗಳು ಲಭಿಸಿದಾಗ ಅಭಿನಂದನೆ ತಿಳಿಸುವ ಸದ್ಗುಣಿ. ಚೆನ್ನವೀರ ವರೂ ಇದೇ ರೀತಿಯ ಧೀಮಂತಿಕೆ ಗುಣವರು. ಇಂಥ ಕವಿಶ್ರೇಷ್ಠರುಗಳ ಬಗ್ಗೆ ಮಾನದ ಬಗ್ಗೆ ಯಾರು ಯಾರಿಲ್ಲ ತೀರ್ಪುಗಾರರೋಪಾದಿ ಸಂತಹ ಅವಕಾಶವನ್ನು ಸರ್ಕಾರವು ಸಾಕ್ಷ್ಯ, ಸಾಮಾಜಿಕ ಸಂಕುಲದ ಗೇರ ಅಭಿಪ್ರಾಯ ಅರ್ಹರಿಬ್ಬರಿಗೆ ತಾನಾಗಿಯೇ 'ರಾಷ್ಟ್ರಕವಿ' ಗೌರವವನ್ನು ಸರ್ಕಾರವು ನೀಡಬಹುದಿತ್ತು.

ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನದ ಘೋಷಣೆಯಾದಾಗಲೂ ನಮ್ಮ ಸರ್ಕಾರದಿಂದ ಇಂತಹುದೇ ಎಡವಟ್ಟಾಗಿತ್ತು. ಕನ್ನಡಕ್ಕೆ ಸಂದ ಈ ಗೌರವಕ್ಕೆ ಕಾರಣರಾದವರನ್ನು ಗುರುತಿಸಿ ಸನ್ಮಾನಿಸುವ ನಿರ್ಧಾರವನ್ನು ಅಂದಿನ ಮುಖ್ಯಮಂತ್ರಿಗಳು ಪ್ರಕಟಿಸಿದರು. ಈ ನಡೆಯು ಕನ್ನಡದ ಸಾಹಿತ್ಯಕ-ಸಾಂಸ್ಕೃತಿಕ-ಭಾಷಾ ವಲಯಗಳಲ್ಲಿ ಅಶಾಂತಿ ಹುಟ್ಟಲು ಕಾರಣವಾಗುತ್ತದೆಂದೂ, ಶಾಸ್ತ್ರೀಯ ಭಾಷೆಯೆಂಬ ಗೌರವವು ಕೆಲವೇ ನಿರ್ದಿಷ್ಟ ವ್ಯಕ್ತಿಗಳ ಪ್ರಯತ್ನದ ಫಲವೆಂದು ತೀರ್ಮಾನಿಸುವುದೇ ಅನ್ಯಾಯವೆಂದೂ, ಪ್ರಭಾವಿಗಳ ಮತ್ತು ಲಾಬಿಕೋರರ ಅಯೋಗ್ಯ ಮರೆತಕ್ಕೆ ಈ ನಡೆಯು ನಿಮಿತ್ತವಾಗುತ್ತದೆಂದೂ ನಾನು ಕಟುವಾಗಿ ಪತ್ರಿಕೆಗಳಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದೆ. ಇದೇ ರೀತಿಯ ಅಭಿಪ್ರಾಯಗಳು ಹಲವೆಡೆಗಳಿಂದ ಹರಿದುಬರತೊಡಗಿದವು. ಸರ್ಕಾರವು ಸನ್ಮಾನದ ಆಲೋಚನೆಯನ್ನು ಕೈಬಿಟ್ಟಿತು. ಒಟ್ಟನಲ್ಲಿ ಇನ್ನ ಈ ತುಘಲಕ್ ದರ್ಬಾರ್‌ನಿಂದಾಗಿ ಜನರ ಗೇಲಿಗೆ ಪಾತ್ರವಾಯಿತು.

ಸರ್ಕಾರವಾಗಲೀ ಸಾಹಿತ್ಯ ಅಕಾಡೆಮಿಯಾಗಲೀ ಸಮಾಜಕ್ಕೆ ಉತ್ತರ ನೀಡಬೇಕಾಗಿರುವ ಮತ್ತು ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯಬೇಕಾಗಿರುವ ಜವಾಬ್ದಾರಿಯುತ ಸಂಸ್ಥೆಗಳು. ಇಂತಹ ಸಂಸ್ಥೆಗಳು, ಪೂರ್ವಾಪರ ಯೋಚಿಸದೆ ದಿಢೀರ್ ನಿರ್ಧಾರವೊಂದನ್ನು ಮಾಡುವುದು, ಅನಂತರ ಆ ನಿರ್ಧಾರದಿಂದ ಹಿಂದೆ ಸರಿಯುವುದು, ಇವು ಈ ಸಂಸ್ಥೆಗಳ ಉನ್ನತ ಮಟ್ಟಕ್ಕೆ ಘಾತಕ ಮಾತ್ರವಲ್ಲ, ಸಮಾಜದ ಸ್ವಾಸ್ಥ್ಯಕ್ಕೆ ಧಕ್ಕೆ ಮತ್ತು ಸಮಾಜಕ್ಕೆ ಒಂದು ಬಗೆಯ ಅವಹೇಳನ.

ಭಗವಾನ್ ಅವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯ 2013ನೇ ಸಾಲಿನ ಗೌರವ ಪ್ರಶಸ್ತಿಯು ಘೋಷಿತಗೊಂಡು ಇದೀಗ ಪುನರಾಲೋಚನೆಗೆ ಪಕ್ಕಾಗಿರುವ ಸಂದರ್ಭದಲ್ಲಿ ಒಂದು ಚೋದ್ಯದ ಬಗ್ಗೆ ಹೇಳಬೇಕಾಗುತ್ತದೆ. 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ'ಗಳಿಗೆ ಅರ್ಜಿಗಳ ಪರಿಶೀಲನೆ, ಸಾಹಿತ್ಯ ಅಕಾಡೆಮಿಯ ಮೇಲೆ ಸರ್ಕಾರದ ಪ್ರಭಾವ, ವಿವಿಧ ಪ್ರಶಸ್ತಿಗಳಿಗೆ ಅರ್ಜಿಗಳ ಆಹ್ವಾನ, ಮೂಗಿಗಿಂತ ಮೂಗುತಿಯೇ ಭಾರವೆಂಬಂತೆ, ಕನ್ನಡ ಸಾಹಿತ್ಯ ಪರಿಷತ್ತಿನಿಂದ ಸಾಹಿತ್ಯಿಕ ಕಾರ್ಯಚಟುವಟಿಕೆಗಳಿಗಿಂತ ಹೆಚ್ಚಾಗಿ ಇತರ ಚಟುವಟಿಕೆಗಳಿಗೇ ಪ್ರಾಧಾನ್ಯ ಇವೆಲ್ಲ ಚೋದ್ಯವಲ್ಲವೆ? ಅರ್ಜಿ ಸಮರ್ಪಿಸಿ ಪಡೆದದ್ದು ಪ್ರಶಸ್ತಿ ಹೇಗಾದೀತು? ಸರ್ಕಾರದ ಪ್ರಭಾವಕ್ಕೆ ಮಣಿದರೆ ಅಕಾಡೆಮಿಯು ಸ್ವಾಯತ್ತ ಸಂಸ್ಥೆ ಹೇಗಾದೀತು? ಸಾಹಿತ್ಯೇತರ ಚಟುವಟಿಕೆಗಳಿಗೇ ಹೆಚ್ಚು ಪ್ರಾಧಾನ್ಯ ನೀಡಿದರೆ ಅದು ಸಾಹಿತ್ಯ ಪರಿಷತ್ತು ಹೇಗಾದೀತು?

ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ವಾರ್ಷಿಕ ದತ್ತಿ ಪ್ರಶಸ್ತಿಗಳಿಗೆ ಅದೊಂದು ವರ್ಷ ಕೃತಿಗಳನ್ನು ಆಯ್ಕೆ ಮಾಡಲು ನಿಯುಕ್ತವಾಗಿದ್ದ ತೀರ್ಪುಗಾರರ ಮಂಡಳಿಯಲ್ಲಿ ನಾನೂ ಒಬ್ಬನಾಗಿ ಕಾರ್ಯ ನಿರ್ವಹಿಸಿದ್ದೆ. ಪ್ರಶಸ್ತಿ ಪ್ರದಾನದ ದಿನ ಸಭೆಯಲ್ಲಿ ತೀರ್ಪುಗಾರರ ಪರವಾಗಿ ಮಾತನಾಡಲು ನನ್ನನ್ನು ಆರಿಸಿದ್ದರಿಂದಾಗಿ ಆ ದಿನ ಎಂ.ಎಂ. ಕಲ್ಬುರ್ಗಿಯವರೊಡನೆ ವೇದಿಕೆ ಹಂಚಿಕೊಳ್ಳುವ ಅವಕಾಶ ನನಗೊದಗಿತು. ಪ್ರಶಸ್ತಿಗಳನ್ನು ವಿತರಿಸಿದ ಕಲ್ಬುರ್ಗಿಯವರು ಅನಂತರದ ತಮ್ಮ ಭಾಷಣದಲ್ಲಿ, ಕನ್ನಡ ಸಾಹಿತ್ಯ ಪರಿಷತ್ತಿನ ಸಾಹಿತ್ಯೇತರ ಚಟುವಟಿಕೆಗಳ ಭರಾಟೆಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರಲ್ಲದೆ, ಕನ್ನಡ ಸಾಹಿತ್ಯ ಪರಿಷತ್ತನ್ನು ಇನ್ನು ಮುಂದೆ ಕನ್ನಡ ಚಳವಳಿ ಪರಿಷತ್ತು ಎಂದು ಕರೆಯುವುದು ಸೂಕ್ತವೆಂದು ಕುಟುಕಿದರು! ಪಕ್ಕದಲ್ಲಿದ್ದ ನಾನು ಅನಂತರ ಅವರೊಡನೆ ಅಭಿಪ್ರಾಯ ಹಂಚಿಕೊಂಡಾಗ ಅವರು, 'ಹಾಂಗರೆ ಕನ್ನಡ ರಾಜಕೀಯ ಪರಿಷತ್ತು ಅಂಬೋಣ ಬಿಡಿ' ಎಂದು ನಗೆಯಾಡಿದರು. (ಅನ್ನಿಸಿದ್ದನ್ನು ನೇರವಾಗಿ ಮತ್ತು ಖಾರವಾಗಿ ಹೇಳುತ್ತಿದ್ದುದೇ ಅವರ ಜೀವಕ್ಕೆ ಕುತ್ತಾಯಿತು!)

ಭಗವಾನ್ ಅವರಿಗೆ ಪ್ರಶಸ್ತಿ ಘೋಷಣೆ, ಮರುಚಿಂತನೆ, ಈ ಹಿನ್ನೆಲೆಯಲ್ಲಿ ಮೇಲಿನೆಲ್ಲ ಸಾಹಿತ್ಯಿಕ ಸಾಂಸ್ಕೃತಿಕ ಘಟನೆಗಳನ್ನು ಗಮನಿಸಿ ನಾನು ಸಂಬಂಧಿಸಿದ ಧುರೀಣರಲ್ಲಿ, ಸಂಸ್ಥಾ ಪ್ರಮುಖರಲ್ಲಿ ಬಿನ್ನಹ ಮಾಡಿಕೊಳ್ಳುವುದಿಷ್ಟು: 'ಕನ್ನಡ ಸಾಹಿತ್ಯ ಕ್ಷೇತ್ರವನ್ನು ಕಲುಷಿತಗೊಳಿಸಬೇಡಿ.'


■ ಎಚ್. ಆನಂದರಾಮ ಶಾಸ್ತ್ರೀ


ಮುಳುಗುತ್ತಿರುವ ಹೌಸಿಂಗ್ ಬೋರ್ಡು

ಕರ್ನಾಟಕದ ಹೌಸಿಂಗ್ ಬೋರ್ಡು ಒಂದು ಕಾಲದಲ್ಲಿ ತನ್ನ ಕಾರ್ಯಕ್ಷಮತೆಯಿಂದ ಸುವರ್ಣಯುಗವನ್ನು ಕಂಡಿತ್ತು. ಆದರೆ ಇತ್ತೀಚೆಗೆ ಅವನತಿಯ ಹಾದಿ ಹಿಡಿದುಬಿಟ್ಟಿದೆ.

ಅದರ ಸುವರ್ಣ ಯುಗಕ್ಕೆ ಕಾರಣರಾದ ಮಹನೀಯರೆಂದರೆ ಹುಣಸೂರಿನ ಶಾಸಕರಾಗಿದ್ದ ಡಾ. ಹೆಚ್.ಎಲ್. ತಿಮ್ಮೇಗೌಡ, ಬಾಪೂಗೌಡ ದರ್ಶನಾಪೂರ, ವೈ.ಕೆ. ರಾಮಯ್ಯ, ಕಾಗೋಡು ತಿಮ್ಮಪ್ಪ ಹಾಗು ಬಸವರಾಯ ರಾಯರೆಡ್ಡಿ. ಇಂತಹ ದಕ್ಷರೆಲ್ಲಾ ನಿಭಾಯಿಸಿದ ಬೋರ್ಡು ಹಗಲುಗಳ್ಳರ ದೆಸೆಯಿಂದ ಈಗ ಹಳ್ಳ ಹಿಡಿದಿದೆ.

ಮನುಷ್ಯ ತನ್ನ ಬದುಕಿನಲ್ಲಿ ಒಂದು ಮನೆ ಮಾಡಿಕೊಳ್ಳಲು ಹೆಣಗುತ್ತಾನೆ. ಆದರೆ ಅದು ಅಷ್ಟು ಸುಲಭವಲ್ಲ. ಗೃಹ ಫಲಾನುಭವಿಗಳನ್ನೆಲ್ಲಾ ವಿಭಾಗಿಸಿದ ಹೌಸಿಂಗ್ ಬೋರ್ಡು, ನಾಲ್ಕು ಕೆಟಗರಿಯವರನ್ನು ಗುರುತಿಸಿ ಅವರಿಗೆ ತಕ್ಕಂತೆ ಮನೆ ನಿರ್ಮಿಸಿ ವಿತರಿಸುತ್ತ ಬಂದಿದೆ. ಆ ಕೆಟಗರಿ ಆಸಾಮಿಗಳೆಂದರೆ ಹೆಚ್.ಐ.ಜಿ- ಅಂದರೆ ದುಡ್ಡಿದ್ದೂ ಮನೆ ಕಟ್ಟಿಕೊಳ್ಳಲಾಗದವರು, ಎಂ.ಐ.ಜಿ- ಅಂದರೆ ಮಧ್ಯಮ ಆದಾಯದ ಗುಂಪು, ಎಲ್.ಐ.ಜಿ- ಕಡಿಮೆ ಆದಾಯದ ಜನ, ಇ.ಡಬ್ಲ್ಯೂ.ಎಸ್- ಆರ್ಥಿಕವಾಗಿ ಬಡತನ ಅನುಭವಿಸುವ ಜನ. ಇಂತಹ ವರ್ಗವನ್ನ ಮಾಡಿಕೊಂಡು ಅವರು ಯಾವ ತರದ ಮನೆಗಳನ್ನು ಇಷ್ಟಪಡುತ್ತಾರೆ ಎಂದು ಗ್ರಹಿಸಿ, ಆರ್ಥಿಕ ಮಾನದಂಡದಿಂದಲೇ ವರ್ಗೀಕರಿಸಿ, ಅವರವರ ಬಡಾವಣೆಗಳನ್ನು ನಿರ್ಮಿಸಿ ಕೆಹೆಚ್‌ಬಿ ವಿತರಿಸುತ್ತ ಬಂದಿದೆ. ಇಲ್ಲಿ ಜಾತಿಮತಗಳನ್ನು ಮೀರಿ ಲಾಟರಿ ಮುಖಾಂತರ ಮನೆ ಹಂಚಿದ್ದೂ ಇದೆ. ಆದ್ದರಿಂದ ಸಕಲಿಸ್ಥೂ ಜಾತಿಗಳು ಒಂದೆಡೆ ಬದುಕುವ ಅಪರೂಪದ ಜಾತ್ಯತೀತ ತಾಣಗಳು





ಸೋಮಣ್ಣ

ಈ ಕೆಹೆಚ್‌ಬಿಯಿಂದ ನಿರ್ಮಾಣಗೊಂಡಿದೆ. ಇತ್ತೀಚೆಗೆ ಮೂರು ನಾಲ್ಕಂತಸ್ತಿನ ಅಪಾರ್ಟ್‌ಮೆಂಟು ನಿರ್ಮಿಸಿ ತಮ್ಮ ಜಾತಿಯವರಿಗೆ ಮಾತ್ರ ವಿತರಿಸುವ ಅನಿಷ್ಟ ಮತ್ತು ಅಪಾಯಕಾರಿ ಬೆಳವಣಿಗೆ ನಡುವೆ, ನಿಜವಾಗಿ ಜಾತ್ಯತೀತ ದೇಶ ನಿರ್ಮಿಸುತ್ತ ಬಂದ ಕೆಹೆಚ್‌ಬಿಯನ್ನು ಹಾಳು ಮಾಡುತ್ತಿರುವವರೂ ಕೂಡ ಬಿಲ್ಡರ್ಸ್‌ಗಳೇ ಎಂಬುದು ಬೆಳಕಿಗೆ ಬಂದಿದೆ.

ಕರ್ನಾಟಕದ ಹೌಸಿಂಗ್ ಬೋರ್ಡು ಕೇವಲ 12 ಸಾವಿರ ರೂ.ಗಳಿಗೆ ಇಡಬ್ಲ್ಯೂಎಸ್ ಮನೆ ವಿತರಿಸಿದ ದಾಖಲೆಗಳಿವೆ. ಹಾಗೆಯೇ 20 ಸಾವಿರಕ್ಕೆ ಎಲ್‌ಐಜಿ ಮನೆ, 40 ಸಾವಿರಕ್ಕೆ ಎಚ್‌ಐಜಿ ಮನೆಗಳನ್ನು ಕೊಟ್ಟಿದ್ದಾರೆ. ಕಾಗೋಡು ತಿಮ್ಮಪ್ಪನವರ ಕಾಲದಲ್ಲಿ ಪ್ರೆಸ್ಸಿನವರಿಗಾಗಿಯೇ ನಿರ್ಮಿಸಿ ವಿತರಿಸಿದ ಪ್ರೆಸ್ ಕಾಲೋನಿ ಮನೆಗಳ ಬೆಲೆ ಎರಡೂವರೆ ಲಕ್ಷ ಇವತ್ತು, ಈಗ ಆ ಮನೆಗಳು ನಲವತ್ತೈದು ಲಕ್ಷಕ್ಕೆ ಮಾರಾಟವಾಗುವಂತಹ ದುಬಾರಿ ಕಾಲ ಬಂದೊದಗಿದೆ. ಇನ್ನು ಎಲ್‌ಐಜಿ ಮನೆಗಳವರು ದುಡಿದು ತಮ್ಮ ಮನೆಗಳನ್ನ ಹೊಡೆದು ಪುನರ್ನಿರ್ಮಾಣ ಮಾಡಿಕೊಂಡು ಅವನ್ನು ಹೆಚ್‌ಐಜಿ ಮನೆ ಮಾಡಿಕೊಂಡು ಕೆಹೆಚ್‌ಬಿಯವರ ಕೆಟಗರಿಯನ್ನೇ ಅಳಿಸಿದ್ದಾರೆ. ಮತ್ತೆ ಕೆಲವರು, ಈ ಅಗ್ಗದ ರೇಟಿನ ಮನೆಗಳನ್ನೇ ನೆಲಸಮ ಮಾಡಿ ಹೊಸ ಮನೆ ಕಟ್ಟಿಕೊಳ್ಳುತ್ತಿದ್ದಾರೆ. ಈ ಪವಾಡಗಳೆಲ್ಲಾ ಇತ್ತೀಚೆಗೆ ನಡೆದ ಆರ್ಥಿಕ ಸುಧಾರಣೆ ಫಲಗಳು.


ರಾಜ್ಯದ ಎಲ್ಲಾ ಜಿಲ್ಲೆ, ತಾಲ್ಲೂಕಿನಲ್ಲೂ ಕೆಹೆಚ್‌ಬಿ ಶ್ರಮ ವಹಿಸಿ ನಿರ್ಮಿಸಿ ವಿತರಿಸುತ್ತಿದ್ದ ಕೆಲಸ ಕಾರ್ಯಗಳೇ ಇಂದು ನಿಂತುಹೋಗಿವೆ. ಕಳೆದ ಹತ್ತು ವರ್ಷಗಳಿಂದ ನಿರ್ಮಿಸಿದ ಮನೆಗಳನ್ನ ವಿತರಿಸಲಾಗುತ್ತಿಲ್ಲ. ಹೊಸ ಬಡಾವಣೆ ನಿರ್ಮಿಸಲೂ ಸಾಧ್ಯವಾಗುತ್ತಿಲ್ಲ. ಅಧಿಕಾರಿಗಳಾದ ಲಕ್ಷ್ಮೀನಾರಾಯಣ್ ಮತ್ತು ಭರತ್‌ಲಾಲ್ ಮೀನಾ ಕಾಲದಲ್ಲಿ ಚಟುವಟಿಕೆಯಾಗಿದ್ದ ಬೋರ್ಡು, ನಿನ್ನೆಯ ಎಣ್ಣೆ ಪಾರ್ಟಿಯ ಹ್ಯಾಂಗೋವರ್‌ನಿಂದ ಮರುದಿನ ತೂಕಡಿಸುವಂತಹ ಸ್ಥಿತಿಗೆ ತಲುಪಿದೆ.

ಹಾಲಿ ಕೆಹೆಚ್‌ಬಿ ಕಮೀಷನರ್ ಯಶವಂತ್ ಅವರಿಗೆ ಯಾವ ಖಾಸಗಿ ಸಮಸ್ಯೆಯೋ ಏನೋ, ಯಾವಾಗಲೂ ಚೋಭದ್ರಗೇಡಿಯಂತೆ ನಿರುತ್ಸಾಹದಲ್ಲಿರುತ್ತಾರೆ. ಈ ರಾಜ್ಯದ ಕೆಹೆಚ್‌ಬಿ ಕಮೀಷನರ್ ಆದ ಯಶವಂತ್ ಜಿಲ್ಲೆಗಳನ್ನು ಸುತ್ತಬೇಕು, ಇಲಾಖೆಯ ಕಾರ್ಯವೈಖರಿಯನ್ನು ಚುರುಕುಗೊಳಿಸಬೇಕು, ಕಮೀಷನರ್ ಎಂದರೆ ಅಧಿಕಾರಿಗಳಿಗೊಂದಿಷ್ಟು ಭಯ ಮೂಡಿಸಬೇಕು. ಆದರಿದು ಕಾಡೇನಳ್ಳಿ ಯಶವಂತರಿಂದ ಸಾಧ್ಯವಾಗುತ್ತಿಲ್ಲ.

ಇವರು ಚಿಕ್ಕಮಗಳೂರಿನ ಡಿಸಿಯಾಗಿದ್ದಾಗ ಎದ್ದು ಶೀತ ನಿರ್ಮೂಲನ ಮುಲಾಮು ಹಚ್ಚಿಕೊಂಡು ಪ್ಯಾಕಾಗಿ ಜಿಲ್ಲಾ ಕಚೇರಿಗೆ ಬರುವುದೇ ಕಷ್ಟವಾಗಿತ್ತು. ಎಂಪಿ ಫೋನ್ ಮಾಡಿದರೆ ಹುಷಾರಿಲ್ಲ ಎಂಬ ಸಬೂಬು ಬರುತ್ತಿತ್ತು. ಎಲ್ಲಕ್ಕಿಂತ ಮುಖ್ಯವಾಗಿ ಹೊಸ ಮುಖ್ಯಮಂತ್ರಿ ಸಿದ್ದರಾಮಯ್ಯ ಕರೆದಿದ್ದ ಜಿಲ್ಲಾಧಿಕಾರಿಗಳ ಸಭೆಯಲ್ಲಿ "ಕ್ಷೀರಭಾಗ್ಯ ಕಾರ್ಯ ಹೇಗೆ ನಡೆದಿದೆ" ಎಂದು ಪ್ರಶ್ನಿಸಿದಾಗ, "ನನಗೆ ಗೊತ್ತಿಲ್ಲ" ಎಂದಿದ್ದ ಆಸಾಮಿ ಈತ. ಇಂತವರನ್ನು ಸರಕಾರ ಏನೂ ಮಾಡಲಾಗುವುದಿಲ್ಲ. ವರ್ಗ ಮಾಡಬಹುದಷ್ಟೇ. ಯಶವಂತ ಕೆಹೆಚ್‌ಬಿ ಕಮೀಷನರ್ ಆಗಿದ್ದಾರೆ ಎಂದು ಗೊತ್ತಾದಾಗಲೇ ಮುಗಿಯಿತು ಇಲಾಖೆಯ ಕತೆ ಎನ್ನಿಸಿತ್ತು.

ಯಶವಂತನ ಅದೃಷ್ಟಕ್ಕೆ ಅಂಬರೀಷ್ ವಸತಿ ಸಚಿವ. ಈ ಸಚಿವರು ಹೃದಯವಂತರು. ಜನರಿಗೆ ಮನೆ ಕೊಡಬೇಕೆಂಬ ಕಾಳಜಿಯುಳ್ಳವರು. ಆದರೆ ಫೈಲು ನೋಡಲು ನಿರಾಸಕ್ತಿ ಬೆಳೆಸಿಕೊಂಡವರು. ಆದಕಾರಣ ಇವರು ಏನನ್ನೂ ಮಾಡಲಾಗದೆ ನಿರ್ಗಮಿಸಬಹುದು.

ಇವರ ಸುತ್ತ ಒಂದು ಒಳ್ಳೆ ಕಾರ್ಯ ಪಡೆಯೇ ಇಲ್ಲ. ರಾತ್ರಿ ಸೇರಿಕೊಂಡು ಪಾರ್ಟಿ ಮಾಡುವವರೆಲ್ಲಾ ಹಿಂದಿನ




ಕಾಗೋಡು ತಿಮ್ಮಪ್ಪ

ಸರಕಾರದಲ್ಲಿ ಇಲಾಖೆ ತಿಂದು ತೇಗಿದಂತಹ ಬಿಲ್ಡರುಗಳು. ಇವರಿಗೆ ವಸತಿಹೀನರ ಸಮಸ್ಯೆ ತಾಗುವುದು ಕಷ್ಟ.

ಈ ಇಲಾಖೆಯಲ್ಲಿ ಪ್ರಧಾನ ಹಗರಣಗಳೂ ನಡೆದುಹೋಗಿವೆ. ರೈತರಿಂದ ಭೂಮಿ ಖರೀದಿಸಿ, ನಿವೇಶನ ರಚಿಸಿ, ಮನೆ ನಿರ್ಮಾಣ ಮಾಡಿ ನಿಗದಿಯಾದ ಸಮಯಕ್ಕೆ ಹಂಚಿಕೆ ಮಾಡುತ್ತಿದ್ದರು. ಆದರೀಗ ಬಿಲ್ಡರ್‌ಗಳು ಮತ್ತು ಲೇಔಟ್ ಡೆವಲಪರ್ಸ್‌ಗಳ ಜೊತೆ ಇಲಾಖೆಯು ಕೈಜೋಡಿಸಿರುವುದರಿಂದ ಪರಸನ್‌ಟೇಜ್ ವ್ಯವಹಾರಗಳು ನಡೆದು ಯಾರಿಗೂ ಸುಲಭವಾದ ರೇಟಿಗೆ ಮನೆ ಸಿಗುವ ಭರವಸೆಯಿಲ್ಲ. ಈ ಬಿಲ್ಡರ್ಸ್ ಮತ್ತು ಬ್ರೋಕರ್‌ಗಳು ಸೇರಿಕೊಂಡು ಬಾಗೇಪಲ್ಲಿ, ಮಾಲೂರು, ಬೆಂಗಳೂರು, ಹೊಸೂರು ಈ ಕಡೆಯಲ್ಲೆಲ್ಲಾ ಇಲಾಖೆಯ ಗುಡ್‌ವಿಲ್ ಎಲ್ಲ ಹಾಳು ಮಾಡಿದ್ದಾರೆ. ಇಲಾಖೆ ಪಾರದರ್ಶಕತೆ ಕಳೆದುಕೊಂಡ ಫಲವಾಗಿ ಯಾರಿಗೆ ಬೇಕವರಿಗೆ ಕೆಲಸಕೊಟ್ಟು ಆರೇಳು ಪರ್ಸೆಂಟು ಕಮೀಷನ್ ಪಡೆದಿದ್ದಾರೆ. ಇದರ ಫಲವಾಗಿ 2010 ಮತ್ತು 2014ರ ಅವಧಿಯಲ್ಲಿನ ಕೆಲಸ ತನಿಖೆಗೆ ಯೋಗ್ಯವಾಗಿದೆ. ಹೀಗೆಂದು ಒತ್ತಾಯ ಮಾಡಿದ ಇಂಜಿನಿಯರ್‌ನನ್ನು ಬಿಲ್ಡರ್ಸ್‌ಗಳು ಅಂಬರೀಷ್‌ಗೆ ಚಾಡಿ ಹೇಳಿ ವರ್ಗ ಮಾಡಿಸಿದ್ದಾರೆ.

ವಾಸ್ತವವಾಗಿ ಅಂಬರೀಷ್ ಈ ಇಂಜಿನಿಯರ್ ಪರ ನಿಲ್ಲಬೇಕಿತ್ತು, ಹಾಗಾಗಿಲ್ಲ. ಇಷ್ಟಾದರೂ ರಮಣರೆಡ್ಡಿ ಮತ್ತು ಶಂಕರ್ ದಯಾಳ್ ಮೀನ ಇಲಾಖೆ ಉಳಿಸಿಕೊಳ್ಳುವ ಕಾಳಜಿಯಿಂದ ಕೆಲಸ ಮಾಡುತ್ತಿದ್ದಾರೆ. ಆದರೂ ಇವರ ಕಾಳಜಿಗೆ ಯಾವಾಗಲಾದರೂ ಗಂಡಾಂತರ ಬರಬಹುದು.



ಈ ಇಲಾಖೆಗೆ ಬಡಿದಿರುವ ಇನ್ನೊಂದು ... ಇಲ್ಲಿ ಒಂದೇ ಜಾತಿಯ ಜನ ತುಂಬಿಕೊ... ಆಫೀಸಿಗೆ ಹೋದರೆ ಕೈಕಾಲಿಗೆ ಸಿಕ್ಕಿ ಜೇಬ... ಜನಗಳೇ ಎಲ್ಲ ಅಂಬರೀಷ್ ತಮ್ಮ ಸ್ವಂತ ... ಎಂಬಂತೆ ಮಾತನಾಡುತ್ತವೆ. ಆದರೆ ಜಾತ್ಯತೀ... ಅಂಬರೀಷ್‌ಗೆ ಒಳ್ಳೆ ಹೆಸರು ತರಬೇಕಾದ... ಪ್ರಾಮಾಣಿಕವಾಗಿ ತಮ್ಮ ಕೆಲಸ ಮಾಡಬೇಕಿತ್... ಜಾತಿ ಅಹಂಕಾರದಲ್ಲಿ ಇಲಾಖೆಯ ಪಾಲಿಗೆ ... ಹೋಗಿದ್ದಾರೆ.

ಈ ಇಲಾಖೆಯಲ್ಲಿ ನಡೆದಿರುವ ... ಬೇಜವಾಬ್ದಾರಿ ಕೆಲಸವೆಂದರೆ ಸೂಕ್ತ ಕಾಲ... ತೀರ್ಮಾನ ತೆಗೆದುಕೊಳ್ಳದೆ, ಸಾವಿರಾರು ಕ... ಸಾರ್ವಜನಿಕರಿಗೆ ಹಂಚಿಕೆಯಾಗದೆ ಹಾಳು ... ಉದಾಹರಣೆಗೆ ಸೂರ್ಯನಗರದ 2ನೇ ಹಂ... ಮನೆಗಳ ಸಂಬಂಧವಾಗಿ ತಾತ್ಕಾಲಿಕ ಹಂಚಿಕೆ... ಮೂರು ವರ್ಷವಾದರೂ ಅಂತಿಮ ಹಂಚಿಕೆ ... ಅಲ್ಲದೆ, ಗದಗ, ಮೈಸೂರು, ರಾಮನಗ... ಧಾರವಾಡ, ಗುಲ್ಬರ್ಗ, ಕೆಂಗೇರಿ ಇಲ್ಲೆಲ್ಲಾ ಸ... ಕೋಟಿ ಬೆಲೆಯ ಮನೆಗಳು ಅಂತಿಮ ಹ... ಹಾಳು ಬಿದ್ದಿವೆ. ಅಂಬರೀಷ್‌ನಂತ ... ತರಿಸಿಕೊಂಡು ಅಧಿಕಾರಿಗಳಿಗೆ ಕಾರಣ ... ಹಾಕಿದರೆ ಅಥವಾ ನಂಜಯ್ಯನ ಮಠ ... ಬದಿಗಿಟ್ಟು ಜನರಿಗೆ ಏನಾದರೂ ಮ... ಕಾಳಜಿಯಿಂದ ಸಿಟ್ಟು ಮಾಡಿಕೊಂಡರೆ, ... ಅವಧಿಯಲ್ಲೇ ಜನಗಳಿಗೆ ಮನೆಗಳು ಸಿಗ...

ನಂಜಯ್ಯನ ಮಠ ನಿಷ್ಠಾವಂತ ಕಾ... ವ್ಯಕ್ತಿ. ಇವರು ಕಾಂಗ್ರೆಸ್‌ಗೆ ಸಲ್ಲಿಸಿರುವ ಸೇವೆ... ಹೌಸಿಂಗ್ ಬೋರ್ಡು ಚೇರ್ಮನ್ ಛೇರನ್ನು ... ಆದರೆ ಅಧಿಕಾರಶಾಹಿಗಳು ಮತ್ತವರ ... ಕಾರ್ಯ ವೈಖರಿಗೆ ಸುಸ್ತಾಗಿರುವ ನಂಜಯ್ಯ... ಮಾಡಲಾಗದೆ ಮನೆಗೆ ಮರಳಬಹುದು.

ಹಿಂದಿನ ಸರಕಾರದಲ್ಲಿನ ವಸತಿ ಸಚಿ... ಮತ್ತು ದ್ಯಾಬೇರಿ ಎಂಬ ಅಪರೂಪದ ಲೂ... ದೆಸೆಯಿಂದ, ಅವನತಿಯ ಹಾದಿ ಹಿಡಿ... ಬೋರ್ಡಿನ ಬಗ್ಗೆ ಜನಪ್ರತಿನಿಧಿಗಳು ಕಾಳಜಿ... ಅದರಿಂದ ಅಧಿಕಾರಿಗಳು ಮರೆತುಹೋಗಿ... ತುಂಬಿದ ಜನರಿಂದ ತುಂಬಿಹೋಗಿರು... ಎಂದಾದರೂ ಬಂದಾಗಬಹುದು. ಎಲ್ಲ... ಕೊಡುತ್ತೇವೆಂದು ಹೇಳಿದ್ದ ಸಿದ್ದರಾಮಯ್ಯ... ಮಂತ್ರಿಗಳ ಜೊತೆಗಿನ ಸಂಬಂಧ ಹಳಸಿ... ಹಾಳುಬಿದ್ದೋಗಲಿ ಎಂದು ಸುಮ್ಮನಾಗಿರ... ಬರಲಿರುವ ದುರ್ದಿನಗಳು ವಸತಿಹೀ... ಭೀಕರವಾಗಲಿವೆ. ಏಕೆಂದರೆ ಹಲವು ವ... ಇಪ್ಪತ್ತು, ಮೂವ್ವತ್ತು ಅಡಿ ಸೈಟಿನ ಬೆಲೆ ಬ... ಆದರೀಗ ಹದಿನೈದರಿಂದ ಇಪ್ಪತ್ತು ಲಕ್ಷವಾ... ಸಾಮಾನ್ಯರು ಮನೆ ಕಟ್ಟುವ ಕನಸನ್ನೇ ... ಅಂತವರಿಗೆಲ್ಲಾ ಆಶ್ರಯವಾಗಿದ್ದ ಹೌಸಿಂ... ಒಂದಲ್ಲ ಒಂದು ದಿನ ಮುಳುಗುವ ಸೂ...

ಈಗಲೂ ಕಾಲ ಮಿಂಚಿಲ್ಲ, ಈ ಸ... ಮಾಡಿದರೆ, ಕಾಗೋಡು ತಿಮ್ಮಪ್ಪನಂತ... ನೇಮಿಸಿ, ಹೆಚ್.ಕೆ. ಪಾಟೀಲರಂಥವರನ್ನು ... ಭರತ್‌ಲಾಲ್ ಮೀನಾ ಅಥವಾ ಲಕ್ಷ್ಮೀ... ಹವರನ್ನು ಕಮೀಷನರ್ ಮಾಡಿ ಸಾ... ಲೂಟಿ ಹೊಡೆದಿರುವ ಅಧಿಕಾರಿಗಳು ... ಜೈಲಿಗೆ ಕಳಿಸಿ, ಫೈಲುಗಳನ್ನ ಸುಟ್ಟು... ಸಿಬ್ಬಂದಿಗಳನ್ನು ಮನೆಗೆ ಕಳಿಸಿದರೆ ಮಾ... ಹೌಸಿಂಗ್ ಬೋರ್ಡನ್ನು ಉಳಿಸಿಕೊಂಡು ... ಮನೆ ಕಟ್ಟಿಕೊಡಬಹುದು. ಆಮೇಲೆ ... ಖಾತೆ ಸರಿಯಿಲ್ಲ. ಅವರಿಗೆ ಕ್ರೀಡಾ ... ಇಲಾಖೆ ಅಥವಾ ಅಬಕಾರಿ ಇಲಾಖೆ ...

ಲಂಕೇಶ್
ನಿಮ್ಮ ಈ ಪ್ರೀತಿಯ ಪತ್ರಿಕೆಯನ್ನು ನಿಮ್ಮ ಮನೆ ಬಾಗಿಲಿಗೇ ತರಿಸಿಕೊಳ್ಳಿ...

ವಾರ್ಷಿಕ ಚಂದಾ ವಿವರ

ಚಂದಾ ವಿವರಗಳು ಹೀಗಿವೆ:

ಒಂದು ವರ್ಷಕ್ಕೆ	: 700 ರೂ.
ಎರಡು ವರ್ಷಕ್ಕೆ	: 1400 ರೂ.
ಮೂರು ವರ್ಷಕ್ಕೆ	: 2000 ರೂ.

ಡಿಡಿ/ಚೆಕ್‌ಗಳನ್ನು 'ಲಂಕೇಶ್ ಮೀಡಿಯಾ' ಹೆಸರಿನಲ್ಲಿ ನಿಮ್ಮ ವಿಳಾಸದೊಂದಿಗೆ ನಮ್ಮ ಕಚೇರಿಗೆ ಕಳುಹಿಸಿ. ನಂ.9, ಇ.ಎ.ಟಿ. ರಸ್ತೆ, ಬಸವನಗುಡಿ, ಬೆಂಗಳೂರು-560 004.

ಹೆಚ್ಚಿನ ಮಾಹಿತಿಗಾಗಿ: 9880302817 /080-26676427

ಹಗರಿಬೊಮ್ಮನಹಳ್ಳಿ: ಹ್ಯೂಮನ್‌ರೈಟ್ಸ್ ಮಂಜನೆಂಬ ಗುಮ್ಮ!

ಈತನ ಹೆಸರು ಸಿ.ಎಂ.ಮಂಜುನಾಥ ಸ್ವಾಮಿ ...ಯಾನೆ ಹ್ಯೂಮನ್ ರೈಟ್ಸ್ ಮಂಜ. ಮಾನವ ...ಗಳ ಸಮಿತಿಯ ತಾಲೂಕಾಧ್ಯಕ್ಷ, ಜಿಲ್ಲಾಧ್ಯಕ್ಷ, ...ಧ್ಯಕ್ಷ ಸಮಿತಿಯ ಏಕೈಕ, ಪ್ರಪ್ರಥಮ ಮತ್ತು ...ಯ ಕಾರ್ಯಕರ್ತ! ಹಗರಿಬೊಮ್ಮನಹಳ್ಳಿ ...ಕಿನ ಹನಸಿ ಗ್ರಾಮದ ಈ ಮಂಜನ ಕಾಟಕ್ಕೆ ...ಬಳ್ಳಾರಿ ಜಿಲ್ಲೆಯ ಸರ್ಕಾರಿ ನೌಕರ ವಲಯವೇ ...ಬ್ಬಿ ಹೋಗುತ್ತಿದೆ. ರೇಣುಕಾ ವಿದ್ಯಾಸಂಸ್ಥೆಯಲ್ಲಿ ... ಮುಗಿಸಿದ ಈತ ಮುಂದುವರೆಸಿದ್ದು ಮಾತ್ರ ...ಬ್ಲಾಕ್‌ಮೇಲ್ 420 ದಂಧೆ. ಇವನ ಈ ... ಸಾಥ್ ಕೊಡೋ ಇನ್ನೊಂದು ಅಸ್ತ್ರವೆಂದರೆ ... ಕಾಲಿಲ್ಲದ ಇವನ ಅಂಗವೈಕಲ್ಯ. ಇದನ್ನೇ ...ಳ್ಳ ಮಾಡಿಕೊಂಡು ಈ ಮಂಜ ...ಳೀತಾನೆ. ತನ್ನ ಸ್ನೇಹಿತರ ಸಂಬಂಧಿಗಳ ...ದಲ್ಲಿ ಆಗಿನ್ನೂ ಪಿ.ಯು.ಸಿ, ಐ.ಟಿ.ಐ. ಮುಗಿಸಿ ...ಬಂದ ವಿದ್ಯಾರ್ಥಿಗಳನ್ನು ಹುಡುಕಿ ಅವರಿಗೆ ...ಕೊಡಿಸುವುದಾಗಿ ನಂಬಿಸಿ ತಲಾ 50,000 ...ನ್ನು ವಸೂಲಿ ಮಾಡಿ, ಬೆಂಗಳೂರಿನಲ್ಲಿ ಮಜಾ ...ದ ಮಹಾತ್ಮ ಈತ. ಹಗರಿಬೊಮ್ಮನಹಳ್ಳಿಯ ...ಯ ವೈದ್ಯಾಧಿಕಾರಿಗಳು, ಪಶು ಸಂಗೋಪನಾ ...ಗಗಳು, ಕೃಷಿ ಇಲಾಖೆ ಅಧಿಕಾರಿಗಳು, ...ಸ್ಟರ್ ಕಚೇರಿ, ತಹಸೀಲ್ದಾರ್, ಡಿ.ಹೆಚ್.ಓ ...ರೂರಿಗೂ ರಿಯಾಯಿತಿ ಕೊಡದೆ ...ಮೇಲ್ ಮಾಡಿ ವಸೂಲಿ ಮಾಡುವ ಮಂಜನ ...ಹದ್ದುಮೀರಿದೆ.


...ತನ ಬಾಹುಗಳು ಎಲ್ಲಾ ...ಮೆಂಟ್‌ಗಳಿಗೂ ಚಾಚಿವೆ. ಒಬ್ಬ ...ಪ್ಪನನ್ನು ಟ್ರಾನ್ಸ್‌ಫರ್ ಮಾಡಿಸುತ್ತೇನೆಂದು ...ಪಾಪದ ಫಲವನ್ನುಂಡು ತನ್ನ ಹೊಟ್ಟೆಯಲ್ಲಿ ...ಮಾಡಿಕೊಂಡ ಭಂಡ ಈತ. ಪಾಪ ಆ ...ಪ್ಪ ಇವತ್ತಿಗೂ ಅದೇ ಸ್ಟೇಷನ್‌ನಲ್ಲಿ ...ಥನ ದಾರಿ ಕಾಯ್ತಾ ಇದ್ದಾನೆ. ಇದು ಈತನ ...duction ಅಷ್ಟೆ. ಅಸಲಿ ಕತೆ ...ಗೋದೆ ಈಗ.

... ಈತ 'ಅಖಿಲ ಭಾರತೀಯ ಅಂಗವಿಕಲರ ...ಅಧ್ಯಕ್ಷ' ಹಾಗೂ 'ಸುವರ್ಣಕಾಯಕ ಪೂರ್ವ ...ಕ ಶಾಲೆ', 'ಸುವರ್ಣಕಾಯಕ ಕಂಪ್ಯೂಟರ್ ...ಷನ್ ಸೆಂಟರ್'ಗಳಿಗೆ ಕೇಂದ್ರೀಯ ನಿರ್ದೇಶಕ. ...ದ ಗೌರವ ಮಾರ್ಗದರ್ಶಕರ ಪಟ್ಟಿಯಲ್ಲಿ ...ಹೆಸರಾಂತ ಡಿಜಿಪಿ ಅಧಿಕಾರಿಗಳ ಹೆಸರು ...ಗಿರುವುದು ದುರ್ದೈವ. ಶಂಕರ್ ಬಿದರಿ ...ಂರ್ಜಿ ಸಾಹೇಬರು ಬಂದು ರಿಬ್ಬನ್ ಕಟ್ ...ಅಂತ ಈ ಕೇಂದ್ರಗಳು ಕಾಯ್ತಾ ಕೂತಿವೆ. ...ತನ ಪಾಲಿಗೆ ಅವು ಈಗಾಗ್ಲೆ ರನ್ನಿಂಗ್ ...ಶಾಲೆ ಮತ್ತು ಎಜುಕೇಷನ್ ಸೆಂಟರ್‌ಗಳು. ... ಈ ಮನುಷ್ಯನ ವಸೂಲಿ ದಂಧೆ ...ಗೋದೆ ಈ ಶಾಲೆಯ ಹೆಸರು ...ಡು.

...ಂಥಾ ಚಾಣಾಕ್ಷನೆಂದರೆ ಮೊದಲು ಟಾರ್ಗೆಟ್ ...ದು ಸರ್ಕಾರಿ ಅಧಿಕಾರಿಗಳನ್ನು, ಅದರಲ್ಲೂ ...ಮತ್ತು ನಕಲಿ ಡಾಕ್ಟರ್‌ಗಳನ್ನು. ಎಲ್ಲೇ ... ತನ್ನನ್ನು ತಾನು ಮಾನವ ಹಕ್ಕುಗಳ ...ಧ್ಯಕ್ಷ ಅಂತ Introduce ...ಡು, ಒಂದಿಷ್ಟು ಬಿಲ್ಡಪ್ ಸೃಷ್ಟಿಸಿಕೊಂಡ ... ನೇರ ವಿಷಯಕ್ಕೆ ಬರುತ್ತಾನೆ. ಅವರ ...ಸಾಮರ್ಥ್ಯಕ್ಕೆ ತಕ್ಕಂತೆ ಹಣದ ಬೇಡಿಕೆ ... ಅಧಿಕಾರಿಗಳು ಇವನ ಸಹವಾಸ ಯಾಕೆ ...ತ ಒಂದು ಸಾರಿ ಕೊಟ್ರೆ ಅಲ್ಲಿಗೆ ... Monthly ಮಾಮೂಲಿ ಮಂಜುನಾಥನ ...ಬಂದು ಬೀಳುತ್ತಿರಬೇಕು. ಅಧಿಕಾರಿಗಳು ...ದಿದ್ರಾ, ಅಲ್ಲಿ ಶುರು ಬ್ಲಾಕ್‌ಮೇಲ್ ತಂತ್ರ ...ತ್ತಿಲ್ಲ ನಂಗೆ. RTI ಹಾಕಿ Human Commission ಗೆ complaint ...ಅನ್ನೋ ಧಮ್ಕಿಗಳು. ಅಧಿಕಾರಿಗಳು ಕೊಂಚ ... ಮುಂದಾದರೆ 'ಅಂಗವಿಕಲನ ಮೇಲೆ ಕೈ ... ಪೊಲೀಸ್ ಕೇಸಲ್ಲಿ ...ಬೇಕಾಗುತ್ತೆ' ಅಂತ ಹೆದರಿಸುತ್ತಾನೆ. ಈತ ...ಅಂಗವಿಕಲರಿಗೆ ನ್ಯಾಯ ಕೊಡಿಸಿದ್ದಾನೋ, ...ನವ ಹಕ್ಕುಗಳಿಗಾಗಿ ...ಸಿದ್ದಾನೋ ಅಂತ ಟಾರ್ಚ್ ಹಾಕಿ ...ರೂ ಒಂದು ಸರಹಳ್ಳಿಯೂ ಸಿಗುವುದಿಲ್ಲ, ...ಹಕ್ಕು, ಮತ್ತು ಅಂಗವೈಕಲ್ಯದ ಹೆಸರಲ್ಲಿ ...ಲಿಗೆಯನ್ನು ಮಾತ್ರ ಸಿರಾತಂಕವಾಗಿ ಮುಂದುವರೆಸಿಕೊಂಡು ಬಂದಿದ್ದಾನೆ.

ಇದಕ್ಕೂ ಮುನ್ನ ಅದ್ಯಾವುದೋ ಮಾನವ ಹಕ್ಕುಗಳ ಸಂರಕ್ಷಣೆ ಸೇವಾ ಸಮಿತಿ (HRPT) ಅನ್ನೋ ಸಂಸ್ಥೆಯ ಅಧ್ಯಕ್ಷನಾಗಿದ್ದ ಚನ್ನವೀರಸ್ವಾಮಿ ಎಂಬ ಇನ್ನೊಬ್ಬ ಆಸಾಮಿಯೂ ಅದಕ್ಕೆ ಹೆಗಲು ನೀಡಿದ್ದ. ಅವನಿಗೆ ತಾಲೂಕಾಧ್ಯಕ್ಷ ಪಟ್ಟ ಕಟ್ಟಿದ್ದ ಮಂಜ ತನ್ನನ್ನು ಜಿಲ್ಲಾಧ್ಯಕ್ಷ ಅಂತ ಘೋಷಿಸಿಕೊಂಡಿದ್ದ. ಹೀಗೆ ಇವರಿಬ್ಬರೂ ಲೂಟಿಗಿಳಿದಿದ್ದರು. ಆಮದನಿ ಹೆಚ್ಚಾದಂತೆ ಇವರಿಬ್ಬರ ನಡುವೆಯೇ ವೈಮನಸ್ಸು ಶುರುವಾಗಿತ್ತು. ಅದೊಮ್ಮೆ ಅಧಿಕಾರಕ್ಕೋಸ್ಕರ ಯಾವ ಪರಿ ಕಚ್ಚಾಡಿದ್ದರೆಂದರೆ ನಡುಬೀದಿಯಲ್ಲೆ ಮಾರಾಮಾರಿ ನಡೆದಿತ್ತು.

ಅಲ್ಲಿಂದ ಹೊರಬಂದ ಹ್ಯೂಮನ್‌ರೈಟ್ಸ್ ಮಂಜ ಮಾನವ ಹಕ್ಕು ಸಮಿತಿ ಸ್ಥಾಪಿಸಿಕೊಂಡು ವಸೂಲಿಗಿಳಿದಿದ್ದಾನೆ. ನಿಜ ಹೇಳಬೇಕೆಂದರೆ ಮಂಜುನಾಥನಿಂದಾಗಿ ಸಂಘಸಂಸ್ಥೆಗಳ ಮೇಲೆಯೇ ಜನ ನಂಬಿಕೆ ಕಳೆದುಕೊಳ್ಳುವಂತಾಗಿದೆ. ಅವನ ಮಾನವಹಕ್ಕು ಸಂಘ ಎಂದರೆ ಸಾಕು ಜನ Toilet Room ನೆನಪಾದವರಂತೆ ಮೂಗು ಸಿಂಡರಿಸುತ್ತಾರೆ. ಮಾನವ ಹಕ್ಕು ಎಂಬ ಪದವೇ ತನ್ನ ಹಕ್ಕು



ಪೊಲೀಸರು ಹೇಗೆ ದಾಖಲಿಸಿಕೊಂಡರು? ತಕ್ಷಣವೇ ಟ್ರೇಡಿಂಗ್ ಅಂಗಡಿಯವರನ್ನು ಕರೆದು ವಿಚಾರಣೆ ಮಾಡುವಂತಹ ಜರೂರು ಪ್ರಕರಣವೇ ಇದು? ಎಂಬ ಪ್ರಶ್ನೆಗಳು ಜನರನ್ನು ಕಾಡುತ್ತಿವೆ.

ಮಂಜ ಹೇಳಿಕೊಳ್ಳುತ್ತಿರುವ ಪ್ರಕಾರ ಆತ ಡಿವೈಎಸ್ಪಿ ಪಾಟೀಲರ ಮೂಲಕ ಒತ್ತಡ ಹಾಕಿಸಿ ವಿಚಾರಣೆ ನಡೆಯುವಂತೆ ನೋಡಿಕೊಂಡಿದ್ದಾನಂತೆ. ಆ ಮೂಲಕ ತನಗೂ, ಡಿವೈಎಸ್ಪಿಗೂ ನಂಟಿರೋದನ್ನು ತೋರಿಸಿಕೊಳ್ಳುವುದು ಅವನ ಇರಾದೆ. ಆದರೆ ಒನ್ಸ್ ಎಗೇನ್, ತನ್ನ ಮಾನವಹಕ್ಕು ಬ್ಲಾಕ್‌ಮೇಲ್ ತಂತ್ರವನ್ನೇ ಮುಂದುಮಾಡಿಕೊಂಡು ಸ್ಥಳೀಯ ಪೊಲೀಸರ ಮೇಲೆ ಒತ್ತಡ ತಂದು, ಅವರು ಇವನ ಸಮಾಧಾನಕ್ಕೆ ಅಂಗಡಿಯವರನ್ನು ಕರೆಸಿ ಕಳಿಸಿರುವ ಸಾಧ್ಯತೆಯೇ ಹೆಚ್ಚು. ಇದನ್ನೇ ಡಿವೈಎಸ್ಪಿ ರೇಂಜಿಗೆ ಕೊಂಡೊಯ್ದು ಬಿಟ್ಟಿ ಪ್ರಭಾವ ಸೃಷ್ಟಿಸಿಕೊಳ್ಳುತ್ತಿದ್ದಾನೆ ಅಂತ ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಅದೇನೆ ಇರಲಿ, ಲಕ್ಷಾಂತರ ರೈತರು ನಕಲಿ ಔಷಧಿ, ಗೊಬ್ಬರಗಳನ್ನು ರಸ್ತೆಗೆ ಚೆಲ್ಲಿ ಕಂಪ್ಲೇಂಟ್ ತಗೊಳ್ಳೋ ಮಾರಾಯ್ರೆ ಅಂದ್ರೆ A.D ಮುಖಾಂತರನೇ ಕಂಪ್ಲೇಂಟ್ ತಗೋತೀನಿ ಕೊಂಕಣ ಸುತ್ತಿಸುವ

ಸುವರ್ಣ ಕಾಯಕ ಕಂಪ್ಯೂಟರ್ ಎಜುಕೇಷನ್ ಸೆಂಟರ್

ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ. KRSK S340/2007-08 (R)

ಮಾನ್ಯರೇ,

(ಉದ್ಯೋಗ ಪೂರ್ವಕ ಕಂಪ್ಯೂಟರ್ ಕೋರ್ಸ್‌ಗಳು)

COURSE OFFERED

* BASIC
* MS OFFICE
* DTP
* TALLY
* PGDCA
* DCA
* CAD
* HARDWARE & NETWORKING
* CTTC-Computer Teachers Training Course
* Grammar with Spoken English
* CET Coaching - SDA, FDA, B.Ed, D.Ed, PSI, Police Exam
* Corspondence Course (ದೂರ ಶಿಕ್ಷಣ)

(ಬೆಂಗಳೂರು, ಮೈಸೂರು, ಧಾರವಾಡ, ಗುಲ್ಬರ್ಗಾ, ಬೆಳಗಾಂ, ಹಂಪಿ ವಿಶ್ವವಿದ್ಯಾಲಯ)

* ಬ್ಯೂಟಿಷಿಯನ್ ತರಬೇತಿ 30 ಅಭ್ಯರ್ಥಿಗಳು
* ಟೈಲರಿಂಗ್ ತರಬೇತಿ 30 ಅಭ್ಯರ್ಥಿಗಳು

ಉಚಿತ ಕಂಪ್ಯೂಟರ್ ಶಿಕ್ಷಣ, ಬ್ಯೂಟಿಷಿಯನ್, ಟೈಲರಿಂಗ್ ತರಬೇತಿ

Computer Sales & Service

Excellent Lab with Excellent Faculty and Excellent Teaching, Excellent Facilities

ಕೇಂದ್ರನಿರ್ದೇಶಕರು
ಮಂಜುನಾಥ ಸ್ವಾಮಿ ಸಿ.ಎಂ.

ಜನಪ್ರಿಯ, ಜನನಾಯಕರಾದ ಶ್ರೀ ನೇಮಿರಾಜನಾಯ್ಕ ರವರ ಕೊಡುಗೆ

ಸುವರ್ಣ ಕಾಯಕ ಪೂರ್ವ ಪ್ರಾಥಮಿಕ ಶಾಲೆ

ಉಚಿತ ಶಿಕ್ಷಣ ಸೌಲಭ್ಯ

KRSK S340/2007-08 (R)

ಮಾನ್ಯರೇ,

ದಾಖಲಾತಿಗಳು
* ಜನ್ಮ ದೃಢೀಕರಣ
* ಆದಾಯ ಪ್ರಮಾಣ ಪತ್ರ
* 4 ಫೋಟೋಗಳು
* ಬಿ.ಪಿ.ಎಲ್. ಅಥವಾ ಪೋಷಕರ ಗುರುತಿನ ಚೀಟಿ

ಕೇಂದ್ರನಿರ್ದೇಶಕರು
ಮಂಜುನಾಥ ಸ್ವಾಮಿ ಸಿ.ಎಂ. ಮೊ: 9535432313

ಸುವರ್ಣ ಕಾಯಕ ಪೂರ್ವ ಪ್ರಾಥಮಿಕ ಶಾಲಾ ಮಂಡಳಿ

ಕಳೆದುಕೊಳ್ಳುವಂತಿದೆ ಮಂಜನ ದುರಾಚಾರದ ವರ್ತನೆ.

ಈತನದು ಅದ್ಯಾವ ಪರಿ ನೆಟ್‌ವರ್ಕ್ ಅಂದರೆ ಈತನ ಮೊಬೈಲ್‌ನಿಂದ ಕರೆ ಹೋದರೆ ಸ್ಥಳೀಯ ಪಿಸಿ, ಪಿಎಸ್‌ಐ, ಸಿಪಿಐಗಳಿಂದ ಮೊದಲ್ಗೊಂಡು ಶಾಸಕರು, ಮಾಜಿ ಶಾಸಕರು, ಮಂತ್ರಿಗಳ ಪಿ.ಎ.ಗಳು ಒಂದೇ ರಿಂಗ್‌ಗೆ ಫೋನ್ ರಿಸೀವ್ ಮಾಡ್ತಾರೆ. ಅಧಿಕಾರಿಗಳ ಮುಂದೆ ಈತ ಮಾಡುವ ಗಿಮಿಕ್ಕೇ ಇದು. ಅವು ನಿಜಕ್ಕೂ ಅಧಿಕಾರಿ, ರಾಜಕಾರಣಿಗಳ ನಂಬರ್‌ಗಳೊ ಅಥವಾ ಬೋಗಸ್ ನಂಬರ್‌ಗಳೊ ಅಂತ ಯಾರೂ ತಲೆಕೆಡಿಸಿಕೊಳ್ಳದಿರುವುದು ಮಂಜನಿಗೆ ಪ್ಲಸ್ ಪಾಯಿಂಟ್‌ನಂತಾಗಿದೆ.

ಇಂತಹ ಮಂಜನ ಮೇಲೆ ಹಗರಿಬೊಮ್ಮನಹಳ್ಳಿ ಡಿವೈಎಸ್‌ಪಿ ಸಾಹೇಬರಿಗೆ ಅದೆಂತದೊ ಮಮಕಾರ ಶುರುವಾದಂತಿದೆ. ಮಾತೆತ್ತಿದರೆ "ಡಿವೈಎಸ್‌ಪಿ ಪಾಟೀಲ ಸಾಹೇಬರು ನಮ್ಮವರು. ಏನಾದ್ರು ಕೆಲಸ ಇದ್ರೆ ಮಾಡಿಸಿಕೊಡ್ತೀನಿ" ಅಂತ ಬೊಗಳೆ ಬಿಡುವ ಮಂಜನ ಪರವಾಗಿ ಪೊಲೀಸರು ಮೊನ್ನೆ ನಡೆದ ಪ್ರಕರಣದಲ್ಲಿ ವರ್ತಿಸಿರೋದು ಜನರ ಅಸಹನೆಗೆ ಕಾರಣವಾಗಿದೆ.


ಮೊನ್ನೆ ಈತ ಭಾವಿಹಳ್ಳಿಯ ಆಗ್ರೋ ಸೆಂಟರ್‌ಗೆ ಲಗ್ಗೆಯಿಟ್ಟು "ನಿಮ್ಮತ್ರ ಮೆಕ್ಕೆಜೋಳದ ಬೀಜ ತೆಗೆದುಕೊಂಡಿದ್ದೆ, ಆದರೆ ಅವು ಹುಟ್ಟಲೇ ಇಲ್ಲ, ನನಗೆ ಲುಕ್ಸಾನಾಗಿದೆ. ಪೊಲೀಸರು, ಮಾಧ್ಯಮದವರ ಮುಂದೆ ಹೋದ್ರೆ ನಿಮಗೇ ಲಾಸು, ಸುಮ್ಮನೇ ಒಂದಿಷ್ಟು ದುಡ್ಡು ಕೊಟ್ಟುಬಿಡಿ" ಅಂತ ವರಾತ ತೆಗೆದಿದ್ದಾನೆ.

ಅಸಲಿಗೆ ಈತ ರೈತನೇ ಅಲ್ಲ, ಉಳುಮೆ ಮಾಡುವುದಕ್ಕೆ ತುಂಡು ಜಮೀನೂ ಇಲ್ಲ, ಇದೆಲ್ಲಕ್ಕಿಂತ ಮುಖ್ಯವಾಗಿ ಮಂಜ ಅಲ್ಲಿಂದ ಬೀಜಗಳನ್ನೇ ಖರೀದಿಸಿಲ್ಲ, ಅದಕ್ಕೆ ಸಂಬಂಧಿಸಿದ ಯಾವ ರಸೀದಿಯೂ ಅವನ ಬಳಿ ಇಲ್ಲ, ಇವನ ಬಗ್ಗೆ ಮೊದಲೇ ತಿಳಿದಿದ್ದ ಅಗ್ರೊ ಸೆಂಟರ್‌ನವರು ಸರಿಯಾಗಿ ತರಾಟೆಗೆ ತೆಗೆದುಕೊಂಡಿದ್ದರು. ಇನ್ನೇನು ತನಗೆ ಏಟು ಬಿಳ್ತವೆ ಅಂತ ಗೊತ್ತಾದದ್ದೇ ತಡ ಅಲ್ಲಿಂದ ಕಾಲುಕಿತ್ತಿದ್ದಾನೆ. ಸೀದಾ ಕೃಷಿ ಅಭಿವೃದ್ಧಿ ಅಧಿಕಾರಿ ಕಚೇರಿಗೆ ಬಂದವನೇ ಆಗ್ರೊ ಸೆಂಟರ್‌ನ ವಿರುದ್ಧ ದೂರು ನೀಡಲು ಮುಂದಾಗಿದ್ದಾನೆ. ಆಗ ಖರೀದಿಸಿದ್ದಕ್ಕೆ ಬಿಲ್ ತೋರಿಸುವಂತೆ ಅಲ್ಲಿ ಕೇಳಿದ್ದಾರೆ. ಬಿಲ್ಲೇ ಇಲ್ಲ ಅಂತ ಗೊತ್ತಾದ ಕೂಡಲೇ ದೂರು ಸ್ವೀಕರಿಸದೆ ವಾಪಾಸ್ ಕಳುಹಿಸಿದ್ದರು. ತನ್ನ ಆಟ ಅಲ್ಲಿಯೂ ನಡೆಯದಿದ್ದಾಗ ಆತ ಎಡತಾಕಿದ್ದು ಪೊಲೀಸರನ್ನು. ಬಾವಿಹಳ್ಳಿ ಟ್ರೇಡರ್ಸ್‌ನವರಿಗೆ ಫೋನ್ ಮಾಡಿದ ಸ್ಥಳೀಯ ಪೊಲೀಸರು ಅವರನ್ನು ಠಾಣೆಗೆ ಕರೆಸಿಕೊಂಡು ವಿಚಾರಣೆ ಮಾಡಿದ್ದಾರೆ. ಖರೀದಿ ಮಾಡಿದ್ದಕ್ಕೆ ಬಿಲ್ಲೇ ಇಲ್ಲದ ಇವನ ಕೇಸನ್ನು ಪೊಲೀಸರು ಹ್ಯೂಮನ್‌ರೈಟ್ಸ್ ಮಂಜನ ಕಂಪ್ಲೆಂಟಿಗೆ ಮಹತ್ವ ಕೊಟ್ಟದ್ದೇ ಜನರ ಅಸಹನೆಗೆ ಕಾರಣವಾಗಿರೋದು.

ಇವನಿಗೆ ಒಂದು ಗತಿ ಕಾಣಿಸಬೇಕಾದ ಪೊಲೀಸರು ಕೈಕಟ್ಟಿ ಕೂತಿದ್ದಾರೆ, ಯಾಕೆಂದರೆ ಮಂಜನ ವಿಚಾರದಲ್ಲಿ ಅವರೂ ಸಂತ್ರಸ್ತರೆ! ಡಿವೈಎಸ್ಪಿ ಪಾಟೀಲ್ ಸಾಹೇಬರ ಹೆಸರೇಳಿಕೊಂಡು ಸ್ಥಳೀಯ ಪೊಲೀಸರನ್ನೂ ತನ್ನ ಮುಷ್ಟಿಯಲ್ಲಿರಿಸಿಕೊಂಡಿದ್ದಾನೆ. ಆದಾಗ್ಯೂ ಯಾರಾದರು ಮುಂದೆ ಬಂದು ಈತನ ವಿರುದ್ಧ ದೂರು ನೀಡಿದರೆ ಕ್ರಮ ಕೈಗೊಳ್ಳಲು ಸಿದ್ಧ ಎಂಬ ರೆಡಿ ಸ್ಲೋಗನನ್ನು ಪೊಲೀಸರು ಹೇಳುತ್ತಾರಾದರು ಇವನ ಬ್ಲಾಕ್‌ಮೇಲ್ ತಂತ್ರಕ್ಕೆ ಹೆದರಿದ ಯಾರು ತಾನೆ ದೂರು ನೀಡಲು ಮುಂದೆ ಬಂದಾರು?

ಇದಕ್ಕೆಲ್ಲ ಡಿವೈಎಸ್ಪಿ ಪಾಟೀಲ್‌ರೇ ಒಂದು ಗತಿ ಕಾಣಿಸಬೇಕು. ಇಲ್ಲವಾದಲ್ಲಿ ಈ ಹ್ಯೂಮನ್‌ರೈಟ್ಸ್ ಮಂಜ ಅವರ ಹೆಸರಿಗೂ ಮಸಿ ಬಳಿಯುವುದಲ್ಲದೇ ಸರ್ಕಾರಿ ಯಂತ್ರವನ್ನು ಮತ್ತಷ್ಟು ಭ್ರಷ್ಟಗೊಳಿಸಿಬಿಡುತ್ತಾನೆ. ಅವನ ಬ್ಲಾಕ್‌ಮೇಲ್ ತಂತ್ರ ಮತ್ತು ವಂಚನೆ ಕುತಂತ್ರಗಳಿಗೆ ಪೊಲೀಸರೇ ಬ್ರೇಕ್ ಹಾಕಬೇಕಿದೆ. ಅದು ಆದಷ್ಟು ಬೇಗ ಘಟಿಸಬೇಕಿದೆ.

■ ವರದಿಗಾರ



ರಾಧಿಕಾ-ಕುಮಾರಸ್ವಾಮಿ ಮುಕ್ತಿಗೆ 25 ಕೋಟಿ!

ನಟ ಸುದೀಪ್ ಕೈಹಿಡಿದ ಮಡದಿಯಿಂದ ಬಿಡುಗಡೆ ಪಡೆಯಲೆಂದು ತೆತ್ತಿದ್ದು ಹತ್ತೊಂಬತ್ತು ಕೋಟಿಯಾದರೆ ಜೆಡಿಎಸ್ ಸೇನಾನಿ ಕುಮಾರಣ್ಣ ಕೈ ಹಿಡಿಯದೇ ಹೋದರೂ 25 ಕೋಟಿ ಕಳಕೊಂಡಿದ್ದೇಕೆ?

ಆಯ್ದ ಕೆಲ ಪತ್ರಿಕೆಗಳಲ್ಲಷ್ಟೇ ಗೋಚರಿಸಿದ ಸುದ್ದಿ ಒಂದೆರಡು ಟೀವಿಗಳು ಬಿತ್ತರಿಸಿದ ಬ್ರೇಕಿಂಗ್ ನ್ಯೂಸ್ ಮತ್ತು ಡಾಲರ್ಸ್ ಕಾಲನಿಯ ರಿಯಲ್ ಎಸ್ಟೇಟ್ ಅಡ್ಡೆಗಳಲ್ಲಿ ಹರಿದಾಡುವ ವಿಚಿತ್ರ ಸೊತ್ತೊಂದರ ವಿಲೇವಾರಿಯ ಚೌಕಾಶಿ: ಎಲ್ಲವನ್ನೂ ಲೆಕ್ಕ ಹಾಕಿ ಹೇಳುವುದಾದರೆ ಅದು ಒಂದಲ್ಲ ಎರಡಲ್ಲ ಬರೋಬ್ಬರಿ 25 ಕೋಟಿ ರೂಪಾಯಿ ಮೊತ್ತದ ಡೈವೋರ್ಸ್!

ಮದುವೆಯಾಗಿದ್ದರೆ ತಾನೇ ವಿಚ್ಛೇದನದ ಮಾತು. ಮದುವೆಯನ್ನೇ ಆಗದೆ ತಾಳಿಯನ್ನೂ ಕಟ್ಟದೆ ಗಟ್ಟಿಮೇಳ ಬಿಟ್ಟತಾಳ ಯಾವುದು ನಡೆಯದೆಯೂ ವಿವಾಹ ವಿಚ್ಛೇದನ ಅಥವಾ ಡೈವೋರ್ಸ್ ಸಾಧ್ಯ ಎನ್ನುವುದಾದರೆ ಅದು ನಟಿ ರಾಧಿಕಾ ಮತ್ತು ಮಾಜಿ ಮು.ಮಂ. ಕುಮಾರಣ್ಣನ ನಡುವೆ ಮಾತ್ರವೇ ಸಾಧ್ಯವೇನೊ!

ಸದ್ಯ ಕೆಲ ದಿನಪತ್ರಿಕೆಗಳಲ್ಲಿ ವರದಿಯಾದ ವಿಚಿತ್ರ ಸುದ್ದಿ ಪ್ರಕಾರ ಚಿತ್ರನಟಿ ರಾಧಿಕಾ ಏಕಾಏಕಿ ಬೆಂಗಳೂರು ತೊರೆದು ಮಂಗಳೂರಿಗೆ ವಲಸೆ ಹೋಗುತ್ತಿದ್ದಾರಂತೆ. ಮಗಳು ಶಮಿಕಾಳ ಪರೀಕ್ಷೆ ಮುಂಬರುವ ಮಾರ್ಚ್‌ಗಿದೆಯಾದ್ದರಿಂದ ಅಲ್ಲಿಯತನಕ ಬೆಂಗಳೂರಿನ ಡಾಲರ್ಸ್ ಕಾಲನಿಯಲ್ಲೇ ಇದ್ದು ಆ ನಂತರ ಮಂಗಳೂರಿಗೆ ಶಿಫ್ಟ್ ಆಗುತ್ತಾರಂತೆ. ಇನ್ನು ಮುಂದೆ ಸಿನಿಮಾ ನಟನೆಯೂ ಅಷ್ಟಕ್ಕಷ್ಟೇ ಅಂತೆ. ಮುಂದೆ ಯಾವುದೇ ಕಾರಣಕ್ಕೂ ಬೆಂಗಳೂರಿಗೆ ವಾಪಸ್ಸಾಗುವುದಿಲ್ಲವಂತೆ. ರಾಧಿಕಾರ ಮ್ಯಾನೇಜರ್ ಯಾದವ್ ಎಂಬಾತನೂ ಮೇಡಂ ಬೆಂಗಳೂರಿನಲ್ಲಿಲ್ಲ ಮಂಗಳೂರಿನಲ್ಲಿದ್ದಾರೆ ಎನ್ನುತ್ತಾನಂತೆ. ಈ ಮಧ್ಯೆ ವಿಜಯ್ ರಾಘವೇಂದ್ರನ ಜೊತೆ ರಾಧಿಕಾ ಹೀರೋಯಿನ್ನಾಗಿದ್ದ 'ನಮಗಾಗಿ' ಎಂಬ ಚಿತ್ರದ ಶೂಟಿಂಗ್ ಏಕಾಏಕಿ ರದ್ದಾಗಿದೆ. ಅದರ ಪ್ರೊಡ್ಯೂಸರ್ ಚಿತ್ರಕ್ಕೆಂದು ಹಾಕಿದ್ದ ಬಂಡವಾಳವನ್ನೂ ಲೆಕ್ಕಿಸದೆ ನಾಪತ್ತೆಯಾಗಿದ್ದಾನೆ. ಅರ್ಧಕ್ಕೆ ನಿಂತ ಈ ಚಿತ್ರವನ್ನು ಖುದ್ದು ರಾಧಿಕಾರೇ ದುಡ್ಡು ಹಾಕಿ ಮುಂದುವರಿಸುತ್ತಿದ್ದಾರೆ. ಆದರೆ ಇದ್ಯಾವುದಕ್ಕೂ ಆಸ್ಪದವಿಲ್ಲದಂತೆ ಏಕಾಏಕಿ ತಮ್ಮ ಡಾಲರ್ಸ್ ಕಾಲೋನಿಯ ಬಂಗಲೆಯನ್ನೇ ರಾಧಿಕಾ ಮಾರಲು ಯತ್ನಿಸುತ್ತಿದ್ದಾರೆ. ಅದಕ್ಕೆ 25 ಕೋಟಿಯ ಬೆಲೆಯಂತೆ. ಆ ಪಾಟಿ ದುಡ್ಡು ತೆತ್ತು ಖರೀದಿಸಲು ಗಿರಾಕಿಗಳಿಲ್ಲವಾದ್ದರಿಂದ ರಾಧಿಕಾ ಬಂಗಲೆ ಮಾರಾಟ ಅರ್ಧಕ್ಕೇ ಸ್ಥಗಿತಗೊಂಡಿದೆ. ಸದಾಶಿವನಗರ, ಡಾಲರ್ಸ್ ಕಾಲೋನಿಯ ರಿಯಲ್ ಎಸ್ಟೇಟ್ ಬ್ರೋಕರ್‌ಗಳ ಹಿಂದೇ ರಾಧಿಕಾ ಮನೆ ಮಾರಾಟಕ್ಕೆಂದು ನಿಂತಿದೆ. ನಂದಕಿಶೋರ್ ನಿರ್ದೇಶನದ ಮತ್ತೊಂದು ರಾಧಿಕಾ ಚಿತ್ರವೂ ಅರ್ಧಕ್ಕೆ ರದ್ದಾಗಿದೆ. ಖುದ್ದು ರಾಧಿಕಾರೇ ಘೋಷಿಸಿದ್ದ ಇನ್ನೂ ಎರಡು ಚಿತ್ರಗಳ ಪ್ರಾಜೆಕ್ಟೂ ನಿಗೂಢವಾಗಿ ರದ್ದಾಗಿದೆ. ರಾಧಿಕಾ ತಂದೆ ದೇವರಾಜ್ ಮತ್ತು ತಾಯಿ ಸರೋಜ ಈಗಾಗಲೇ ಬೆಂಗಳೂರು ಬಿಟ್ಟು ಮಂಗಳೂರು ಸೇರಿಕೊಂಡಾಗಿದೆ. ರಾಧಿಕಾ ತಮ್ಮ ರವಿರಾಜ್ ತನ್ನ

ಗಾಂಧಿನಗರದ ಲೇವಾದೇವಿಯನ್ನೆಲ್ಲ ರಾತ್ರೋ... ಮುಕ್ತಾಯಗೊಳಿಸಿ ಕಣ್ಮರೆಯಾಗಿದ್ದಾನೆ. "ಇ... ಪ್ರೊಡ್ಯೂಸರ್‌ಗೆ ರಾಧಿಕಾ ಮಾಡಿದ್ದ ಐದು ಕೋ... ಫೈನಾನ್ಸ್ ಅನ್ನೂ ವಸೂಲು ಮಾಡಿಕೊಂಡಾಯಿತು...

ನಿಖಿಲ್ ಬಾಯ್ಬಿಟ್ಟ ಸತ್ಯ

ಹೀಗೆ ರಾಧಿಕಾ ಕುಮಾರಸ್ವಾಮಿ ಕುರಿ... ಗಾಂಧಿನಗರದಲ್ಲಾಗಲಿ, ಡಾಲರ್ಸ್ ಕಾಲನಿಯಲ್ಲಾಗಲಿ ... ಮೀಡಿಯಾ ಸಂದಿಗೊಂದಿಗಳಲ್ಲಾಗಲಿ ಕೇಳಿ ಬರುತ್ತಿರು... ಊರು ಬಿಡುವ ಸುದ್ದಿ ಅಥವಾ ಮಾಜಿ ಸಿಎಂ ಕುಮಾ... ಜೊತೆಗಿನ ಬ್ರೇಕ್ ಅಪ್ ವದಂತಿಯೆ. ರಾಧಿಕಾ ... ಕುಮಾರಸ್ವಾಮಿ ಮಧ್ಯೆ ಬಿರುಕಾಗಿದೆ ಎಂದು ಮೊ... ಬಾರಿಗೆ ಗೊತ್ತಾಗಿದ್ದು ಇಲ್ಲಿಗೆ ನಾಲ್ಕು ತಿಂಗಳ ... ಕುಮಾರಣ್ಣನ ಕುಲಪುತ್ರ ನಿಖಿಲ್‌ಗೌಡನ ಸಿನಿಮಾ ಆರ... ಚಿತ್ರ 'ಜಾಗ್ವಾರ್'ನ ಪತ್ರಿಕಾಗೋಷ್ಠಿಯ ಹಿಂದಿನ ... ಟೈಮ್ಸ್ ಆಫ್ ಇಂಡಿಯಾದ ವರದಿಗಾರನಿಗೆ ನಿ... ನೀಡಿದ್ದ ವಿಶೇಷ ಸಂದರ್ಶನ ಪ್ರಕಟವಾಗಿತ್ತು.

ಯುಬಿ ಸಿಟಿಯ ಜೆಡಬ್ಲ್ಯೂ ಮ್ಯಾರಿಯ... ಹೊಟೇಲಿನಲ್ಲಿ ನಿಖಿಲ್ ಟೈಮ್ಸ್‌ಗೆ ನೀಡಿದ್ದ ಸಂದರ್ಶ... ಕೊನೆಯಲ್ಲಿ ವಿಚಿತ್ರ ಪ್ರಶ್ನೆಯೊಂದನ್ನು ಹಾಕಿದ್ದ ವರ... 'ನೀನು ಕುಮಾರಸ್ವಾಮಿ ಮಗನಾಗಿ ಸಿನಿಮಾ... ನಟಿಸೋದೇನೋ ಸರಿ. ಅದೇ ರೀತಿ ಈಗಾಗಲೇ ಸಿ... ರಂಗದಲ್ಲಿರೋ ರಾಧಿಕಾರ ಮಗಳು ಶಮೀಕಾ ... ಏನಾಗಬೇಕು? ನಿನ್ನ ತಂಗಿಯಾಗಿ ಶಮೀಕಾ ನಾಳೆ ... ಸಿನಿಮಾದಲ್ಲಿ ನಟಿಸುವುದು ಪಕ್ಕಾ ತಾನೇ...?'

ಏಕಾಏಕಿ ಅನಿರೀಕ್ಷಿತವಾಗಿ ತೂರಿಬಂದ ಈ ... ನಿಖಿಲ್ ಕಕ್ಕಾಬಿಕ್ಕಿಯಾದನಾದರೂ ನಿಧಾನಕ್ಕೆ ಸಾ... ಕೊಂಡವನೇ 'ನನ್ನ ತಂದೆಗೆ ನಾನೊಬ್ಬನೇ ಮಗ. ... ಹೇಳ್ತಾ ಇದ್ದೀರಲ್ಲ ಆ ಹೆಸರಿನ ಯಾರೂ ನನಗೆ ... ಅಂಥವರ್ಯಾರೂ ನನಗೆ ತಂಗಿಯಾಗೋಕೆ ಸಾಧ್ಯಾನೇ... ಅದು ನನ್ನ ಅಪ್ಪನ ಪರ್ಸನಲ್ ಅಫೇರ್. ಅದೀಗ ... ಚಾಪ್ಟರ್..!'

ಅನಿತಕ್ಕನ ತಾಳ್ಮೆ

ಅವತ್ತು ಟೈಮ್ಸ್ ಸಂದರ್ಶನದಲ್ಲಿ ನಿಖಿಲ್ ... ಅಚಾನಕ್ಕಾಗಿ ಬಾಯಿಬಿಟ್ಟಂತಿದ್ದ ಈ ಮಾತನ್ನು ಬ... ಯಾರೂ ಗಂಭೀರವಾಗಿ ಪರಿಗಣಿಸಿರಲಿಕ್ಕಿಲ್ಲ. 'ಜಾ... ಸಿನಿಮಾದ ಅರಂಗೇಟ್ರಂ ತಯಾರಿಯ ಇಂಥ ... ಡೈಲಾಗನ್ನು ತಾನೇ ಯಾರಾದರೂ ನಂಬಲು ... ಅವತ್ತು ಯಾರೂ ಗಮನಿಸದ ನಿಖಿಲ್‌ನ ... ಮಾತುಗಳಿಗಿದ್ದ ಉದ್ದೇಶ ಮತ್ತು ಅರ್ಥಕ್ಕೆ ಬೇರೆ ... ಕಾರಣವಿತ್ತು. ಅದು ಮಗ ನಿಖಿಲ್‌ಗೌಡನ ... ಕುಮಾರಣ್ಣನಿಗಿದ್ದ ಪುತ್ರ ವ್ಯಾಮೋಹ. ಅಧಿಕಾರದ ... ಬಿದ್ದು ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿ... ಕೌಟುಂಬಿಕ ಪರಿಸ್ಥಿತಿಗೂ ಮುಖ್ಯಮಂತ್ರಿ ಗಾದಿ... ಕುಮಾರಸ್ವಾಮಿ ಇಳಿದ ನಂತರದ ಸಾಂಸಾರಿಕ ಪರಿಸ್ಥಿತಿ... ಅಜಗಜಾಂತರ ವ್ಯತ್ಯಾಸವಿತ್ತು. ಮಗ ಬೆಳೆದು ... ದಿನಕಳೆದಂತೆ ಮಗನ ಪ್ರಬುದ್ಧತೆ, ವ್ಯಕ್ತಿತ್ವ, ಧವ...

ಅಣ್ಣ ರವಿರಾಜ್ ಕದ್ದೂ ಮುಚ್ಚಿ ಮದುವೆಯಾಗಿದ್ದು ಮತ್ತೆ ತಂಗಿಯಾಗಲು ಶಿವಣ್ಣಗೆ ಚಿನ್ನದ ರಾಖಿ ಕಟ್ಟಿದ್ದು

ಕುಮಾರಸ್ವಾಮಿ-ರಾಧಿಕಾ ಸಂಬಂಧ ಇನ್ನೇನು ಮುಗಿದ ಅಧ್ಯಾಯವೆಂದು ಹೊರಜಗತ್ತಿಗೆ ಗೊತ್ತಾಗುತ್ತೋ ಎಂಬ ಭೀತಿಗೆ ಬಿದ್ದ ರಾಧಿಕಾ ಕುಟುಂಬ ಹತಾಶ ಯತ್ನವೊಂದಕ್ಕೆ ಕೈಯಿಟ್ಟಿದ್ದು ಇಲ್ಲಿಗೆ ಆರು ತಿಂಗಳ ಹಿಂದೆ. ಅದು ರಾಧಿಕಾ ಅಣ್ಣ ರವಿರಾಜ್ ಆತುರಾತುರವಾಗಿ ಮಾಡಿಕೊಂಡ ಮದುವೆ.

ಇಲ್ಲಿಗೆ ಆರು ತಿಂಗಳ ಹಿಂದೆ ರಾಧಿಕಾ ಅಣ್ಣ ರವಿರಾಜ್ ಇದ್ದಕ್ಕಿದ್ದಂತೆ ಮದುವೆಯಾದ ಸುದ್ದಿ ಬಂತು. ಶಿವಣ್ಣನಿಗೆ ರಾಖಿ ಕಟ್ಟಿದ್ದನ್ನೇ ಮಹಾ ಬಂಪರ್ ಸುದ್ದಿಯನ್ನಾಗಿ ಪ್ರಚಾರ ಪಡೆದ ರಾಧಿಕಾ ತನ್ನ ಅಣ್ಣನ ಮದುವೆಯನ್ನು ಇನ್ನಿಲ್ಲದಂತೆ ಆಡಂಬರದಿಂದ ಮಾಡಬೇಕಿತ್ತಲ್ಲವೆ? ಕನಿಷ್ಠ ಒಂದಷ್ಟು ಸಿನಿಮಾ ಮಂದಿಯನ್ನಾದರೂ ಕರೆಸಿ ಪ್ರಚಾರ ಪಡೆಯಬೇಕಿತ್ತಲ್ಲವೆ?

ವಿಪರ್ಯಾಸವೆಂದರೆ ಅಣ್ಣ ರವಿರಾಜ್ ಮದುವೆಯಾಗಿದ್ದನ್ನು ಗಾಂಧಿನಗರದ ನರಪಿಳ್ಳೆಗೂ ಗೊತ್ತಾಗದ ಹಾಗೆ ರಾಧಿಕಾ ರಹಸ್ಯ ಕಾಪಾಡಿದ್ದಳು. ಹುಡುಗಿ ಯಾರು? ಯಾವ ಊರು ಏನೊಂದೂ ಸುದ್ದಿಯಾಗಲೇ ಇಲ್ಲ. ಬಂಟ್ವಾಳ ಸಮೀಪದ ಸಾಲತ್ತೂರು ರಾಧಿಕಾ ತಾಯಿಯ ಊರಂತೆ. ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಗೆ ರಾಧಿಕಾ ಧರ್ಮಪತ್ನಿಗಿಂತಲೂ ಹೆಚ್ಚು ಎಂದೇ ಹೆಣ್ಣಿನ ಕಡೆಯವರನ್ನು ನಂಬಿಸಲಾಗಿತ್ತಂತೆ. ಮದುವೆಗೆ ಕುಮಾರಸ್ವಾಮಿ ಬಂದೇ ಬರುತ್ತಾರೆಂದು ಹೆಣ್ಣಿನ ಮನೆಯವರನ್ನು ನಂಬಿಸಲಾಗಿತ್ತಂತೆ. ದುಬೈ ಮೂಲದ ಹೊಟೇಲಿಯರ್ ಮಗಳನ್ನು ಕುಮಾರಸ್ವಾಮಿ ಹೆಸರಲ್ಲೇ ರಾಧಿಕಾ ಕುಟುಂಬ ನಂಬಿಸಿತ್ತಂತೆ.

ಆದರೆ ಬಂಡವಾಳ ಬಯಲಾಗಬಾರದಲ್ಲ, ಮದುವೆಗೆ ಕುಮಾರಣ್ಣ ಬರದೇ ಹೋದರೆ ಅಪ್ಪೆಲ್ಲಿ ಪಜೀತಿಗೀಡಾಗುತ್ತೋ ಎಂದೇ ಅಣ್ಣನ ಮದುವೆಯನ್ನು ರಾಧಿಕಾ ಮುಚ್ಚಿಟ್ಟಳು. ಅದು ಕುಮಾರಸ್ವಾಮಿ ಹ... ಸಾಧ್ಯವಾದಷ್ಟು ಲಾಭ ಮಾಡಿಕೊಳ್ಳುವ ತಂತ್ರ... ಅಂದಹಾಗೆ ಶಿವರಾಜ್‌ಕುಮಾರ್ ಕೈಗೆ ಚಿನ್ನದ ... ಕಟ್ಟಿ 'ತವರಿಗೆ ಬಾ ತಂಗಿ ಭಾಗ-2' ಸಿನಿಮಾ ... ಇಷ್ಟರಲ್ಲೇ ಶೂಟಿಂಗ್ ಶುರು. ಇನ್ನೇನು ಶಿವಣ್ಣನಿಗೆ ...


ತಮ್ಮ ರವಿರಾಜ್ ಜೊತೆ ರಾಧಿಕಾ





ಶಿವಣ್ಣನಿಗೆ ಚಿನ್ನದ ರಾಖಿ

ಮತ್ತೆ ತಂಗಿಯಾಗೂ ಕಾಲ ಕೂಡಿ ಬಂತು ... ರಾಧಿಕಾ ಪ್ರಚಾರ ಪಡೆದಳಲ್ಲವೆ?

ಅದೂ ಕೂಡ ಕುಮಾರಸ್ವಾಮಿಯ ಹಂಗು ... ಹತಾಶೆಗೆ ಬಿದ್ದೇ ಮಾಡಿದ ಗಿಮ್ಮಿಕ್ಕೆಂಬುದು ... ಬಯಲಾಗಿದೆ.

ಪಾಪ ಶಿವಣ್ಣ ಮಾತ್ರ ಮತ್ತೊಬ್ಬಳು ತಂಗಿ... ಇವತ್ತಿಗೂ ಕಾಯುತ್ತಿದ್ದಾರಂತೆ!



ತಾಳೆ, ರಾಧಿಕಾ ಪ್ರಸಂಗ ದೇವೇಗೌಡರ
ಲ್ಲಿ ಹುಟ್ಟುಹಾಕಿದ ಕಲ್ಲೋಲ, ಕೇವಲ
ಷ್ಟೇ ಅಲ್ಲ ಅನಿತಕ್ಕನ ತಂದೆಯೇ ಕೊರಗಿಗೆ
ಗೆ ಹಿಡಿದದ್ದು, ಕೈತಪ್ಪಿದ ಮುಖ್ಯಮಂತ್ರಿ
ಅದ ದಾರಿದ್ರ್ಯ, ಸಾರ್ವಜನಿಕವಾಗಿ ಆವರಿಸಿದ್ದ
ಚಾರಿತ್ರ್ಯಹೀನತೆ, ಮುಖಭಂಗ, ಮುಜುಗರ
ಮಾರಣ್ಣನನ್ನು ಪಾತಾಳಕ್ಕೆ ತಳ್ಳಿಬಿಟ್ಟವು.

ತಕ್ಕಂತೆ ದೇವೇಗೌಡರ ಕುಟುಂಬ
ಒಬ್ಬರು ಕುಮಾರಣ್ಣನ ರಾಶಿಗೆ ರಾಧಿಕಾ
ಎಲ್ಲಾ ಕಂಟಕಗಳ ಮೂಲ ಎಂದುಬಿಟ್ಟರು.
ಬಿಟ್ಟದ್ದೇ ಕುಮಾರಣ್ಣನ ಮುಖ್ಯಮಂತ್ರಿ ಸ್ಥಾನಕ್ಕೆ
ತು. ಸಾರ್ವತ್ರಿಕವಾಗಿ ಜೆಡಿಎಸ್‌ಗೆ
ತು. ದೇವೇಗೌಡರ ಕುಟುಂಬದ ಪ್ರತಿಷ್ಠೆಗೆ
ಕುಮಾರಣ್ಣನ ವರ್ಚಸ್ಸೇ ನೆಲಕಚ್ಚಿದ ಮೇಲೆ
ಗಿರಿ ಮತ್ತೆ ದಕ್ಕುವುದುಂಟೆ? ಇತ್ಯಾದಿ
ನೆಪಗಳಿಗೂ ರಾಧಿಕಾಗೂ ನಂಟಿನ ಗಂಟು
ತಿಪಿಯ ಮಾತು ಕುಮಾರಣ್ಣನ ತಲೆ
.

ಜೊತ್ತಿಗೆ ಸರಿಯಾಗಿ ರಾಧಿಕಾರ ಮಗಳ ಜೊತೆ
ತು ತೆಗೆದುಕೊಂಡ ಫೋಟೋಗಳು ವಿವಿಧ
ಪ್ರಕಟವಾಗಿದ್ದು, ರಾಧಿಕಾ ಕೌಟುಂಬಿಕ
ಕುಮಾರಣ್ಣ ಕಾಣಿಸಿಕೊಂಡಿದ್ದು, ಅದರ
ವಿಗಳಿಗೆ ಲಭ್ಯವಾಗಿದ್ದು ಇತ್ಯಾದಿಗಳೆಲ್ಲಕ್ಕೂ
ಕಾರಣ ಎಂಬುದು ಕುಮಾರಣ್ಣನಿಗೆ
. ಯಾವುದೋ ದುರ್ಬಲ ಗಳಿಗೆಯಲ್ಲಿ
ಯಡವಟ್ಟು ತನ್ನ ಅಸ್ತಿತ್ವಕ್ಕೇ ಕಂಟಕವಾಗಿ
ಪಶ್ಚಾತ್ತಾಪವೂ ಕುಮಾರಣ್ಣನನ್ನು ಕಾಡಿದೆ.
ರಾಧಿಕಾ ಸಂಬಂಧವನ್ನೇ ಕಡಿಮೆಗೊಳಿಸಿ

ಮಗ ನಿಖಿಲ್ ಬಗ್ಗೆ ಹೆಚ್ಚೆಚ್ಚು ಆಸಕ್ತಿ ವಹಿಸಿದ್ದಾರೆ. 2014ರ ನವೆಂಬರ್ ಹೊತ್ತಿಗೆ ರಾಧಿಕಾ ಮತ್ತು ಕುಮಾರಸ್ವಾಮಿ ನಡುವೆ ದೊಡ್ಡ ರಾದ್ಧಾಂತವೇ ಸಂಭವಿಸಿದೆ.

ಅಗ್ರಿಮೆಂಟ್

ಅಂತಿಮವಾಗಿ ಕುಮಾರಣ್ಣ ಮತ್ತು ರಾಧಿಕಾ ಮಧ್ಯೆ **Non-discloser** ಒಪ್ಪಂದವೊಂದು ರೂಪುಗೊಂಡಿದ್ದು 2015ರ ಫೆಬ್ರವರಿಯಲ್ಲಿ. ಆ ಪ್ರಕಾರ ಕುಮಾರಣ್ಣನನ್ನು ಮುಕ್ತಿಗೊಳಿಸಲು ರಾಧಿಕಾ ಗಿಟ್ಟಿಸಲಿರುವ ಮೊತ್ತ 25 ಕೋಟಿ. ಇದರಲ್ಲಿ ಡಾಲರ್ಸ್ ಕಾಲನಿಯ ಬಂಗಲೆಯದ್ದೇ ಪ್ರತ್ಯೇಕ ಮೊತ್ತ. ಕಮ್ಮಿಯೆಂದರೂ ಅದು 25 ಕೋಟಿಯ ಸೊತ್ತು. ಮಂಗಳೂರು ಸಮೀಪದ ಕಲ್ಲಡ್ಕ ಹಂಪ್ರೂರು ಗ್ರಾಮದ ನಲವತ್ತು ಎಕರೆ ತೋಟದ ಸದ್ಯದ ಮಾರುಕಟ್ಟೆ ರೇಟೇ 180 ಕೋಟಿ. ಇದು ಕುಮಾರಣ್ಣ ಮುಖ್ಯಮಂತ್ರಿಯಾಗಿದ್ದಾಗ ರಾಧಿಕಾಗೆಂದು ಖರೀದಿಸಿಕೊಟ್ಟಿದ್ದು. ಇದಲ್ಲದೆ ಮಂಗಳೂರು ಎ.ಜೆ. ಆಸ್ಪತ್ರೆ ಹಿಂಭಾಗದ ಬಾಳೇಬೈಲು ಏರಿಯಾದಲ್ಲಿ ರಾಧಿಕಾ ಹೆಸರಿಗೆ ಮತ್ತೊಂದು ಬಂಗಲೆಯಿದೆ. ಇದು ಕೂಡ ಕುಮಾರಣ್ಣನ ಕೃಪೆಯೇ. ಸದ್ಯದ ಮಾರುಕಟ್ಟೆ ರೇಟಿನ ಪ್ರಕಾರ ಇದು ಮೂರು ಕೋಟಿಯ ಸೊತ್ತು.


ಈ ಯಾವ ಆಸ್ತಿ ಚರಾಸ್ತಿಗೂ ಕೈಹಾಕದೆ ಕುಮಾರಸ್ವಾಮಿ ಫುಲ್ ಅಂಡ್ ಫೈನಲ್ ಸೆಟಲ್‌ಮೆಂಟ್ ಎಂದು ರಾಧಿಕಾಗೆ 25 ಕೋಟಿಯ ಲೆಕ್ಕ ಚುಕ್ತಾ ಮಾಡಿದ್ದಾರಂತೆ. ದುಬೈ ರಿಟರ್ನ್ಡ್ ಅಂಡರ್‌ವರ್ಲ್ಡ್ ಡಾನ್ ಒಬ್ಬರ ಪೌರೋಹಿತ್ಯದಲ್ಲಿ ನಡೆದ ಲೆಕ್ಕ ಚುಕ್ತಾ ಕರಾರಿನ ಪ್ರಕಾರ ಇನ್ನು ಮುಂದೆ ರಾಧಿಕಾ ತನ್ನ ಹೆಸರಿನ ಮುಂದೆ ಕುಮಾರಸ್ವಾಮಿ ಎಂಬ ಹೆಸರನ್ನು ಸೇರಿಸುವಂತಿಲ್ಲ. ತನಗೂ ಕುಮಾರಸ್ವಾಮಿಗೂ ಸಂಬಂಧವಿರುವ ಬಗ್ಗೆ ಇನ್ನೆಲ್ಲೂ ಬಾಯಿಬಿಡುವಂತಿಲ್ಲ. ಮಗಳು ಶಮಿಕಾಳ ತಂದೆಯ ಹೆಸರಿನ ಜಾಗಕ್ಕೆ ಯಾವುದೇ ಕಾರಣಕ್ಕೂ ಕುಮಾರಸ್ವಾಮಿ ಎಂಬ ಪದ ಜೋಡಿಸುವಂತಿಲ್ಲ. ಕುಮಾರಸ್ವಾಮಿಯಿಂದ ಮುಂದ್ಯಾವತ್ತೂ ಯಾವುದೇ ಪರಿಹಾರದ ಹಕ್ಕು ಮಂಡಿಸುವಂತಿಲ್ಲ.

ಇಂಥದೊಂದು ಒಪ್ಪಂದಕ್ಕೆ ಬದ್ಧಳಾಗಿ ರಾಧಿಕಾ ಸಹಿ ಹಾಕಿ 25 ಕೋಟಿ ಪಡೆದುಕೊಂಡೇ ಬೆಂಗಳೂರನ್ನು ಬಿಡುವ ನಿರ್ಧಾರಕ್ಕೆ ಬಂದಿದ್ದಾಳೆ. ಹೀಗೆ ಸೆಟಲ್‌ಮೆಂಟ್ ಆದನಂತರವೇ ರಾಧಿಕಾ ಗಾಂಧಿನಗರಕ್ಕೆ ಗುಡ್‌ಬೈ ಹೇಳುವ ಕಾರ್ಯಾಚರಣೆಯೊಂದು ಸದ್ದಿಲ್ಲದೆ ಶುರುವಾಗಿದೆ. ಆ ಪ್ರಕಾರ ಆದಿತ್ಯನ ಜೊತೆ ರಾಧಿಕಾ ನಟಿಸಿದ್ದ 'ಸ್ವೀಟಿ' ಚಿತ್ರವೇ ಕೊನೆ. ಅನಂತರದ ವಿಜಯ ರಾಘವೇಂದ್ರನ ಜೊತೆ ನಟಿಸಿದ 'ನಮಗಾಗಿ' ಚಿತ್ರವನ್ನೂ ನಿಲ್ಲಿಸಬೇಕು. ನಂದಕಿಶೋರ್ ನಿರ್ದೇಶನದ ಮುಂದಿನ ಚಿತ್ರವನ್ನೂ ಕೈಬಿಡಬೇಕು. ಏಕೆಂದರೆ ರಾಧಿಕಾ ಸಾರ್ವಜನಿಕ ಬದುಕಿನಲ್ಲಿದ್ದಷ್ಟೂ ಕಾಲ ಆಕೆಯ ಹೆಸರಿನ ಕೊನೆಯಲ್ಲಿ ಕುಮಾರಸ್ವಾಮಿ ಎಂಬ ಹೆಸರು ಅಂಟಿಕೊಂಡೇ ಇರುತ್ತದೆ!

ಇಂಥಾದ್ದೊಂದು ಕಾರ್ಯಾಚರಣೆಯ ಹಿಂದೆ ಅತೀ ಹೆಚ್ಚು ಆಸಕ್ತಿಯಿದ್ದದ್ದು ಅನಿತಕ್ಕನದ್ದಾ? ಅದನ್ನು ಚಾಲ್ತಿಗೆ ತರುವಲ್ಲಿ ಮಗನನ್ನೇ ಮುಂದು ಬಿಟ್ಟರಾ? ಯಾರಿಗೂ ಜಗ್ಗದ ಕುಮಾರಸ್ವಾಮಿ ಅಂತಿಮವಾಗಿ ಪುತ್ರವಾತ್ಸಲ್ಯಕ್ಕೆ ಬಿದ್ದು 'ಚಿನ್ನದಂತಹ' ತೊರೆಯುವ ಗಟ್ಟಿ ನಿರ್ಧಾರಕ್ಕೆ ಬಂದರಾ? ಗೊತ್ತಿಲ್ಲ.

ನಾಲ್ಕು ತಿಂಗಳ ಹಿಂದೆ ನಿಖಿಲ್‌ಗೌಡ ತನ್ನ ಟೀಮ್





ಪಿತಾಮಹ ದೇವೇಗೌಡರೇ ತಲೆತಗ್ಗಿಸುವಂತಾಗಿದ್ದು!

ಕೆಲ ದಿನಗಳ ಹಿಂದೆ 'ಈ ಟೀವಿ ನ್ಯೂಸ್'ನಲ್ಲಿ ದೇವೇಗೌಡರ ವಿಶೇಷ ಸಂದರ್ಶನವೊಂದು ಪ್ರಸಾರವಾಗಿತ್ತು. ಸಂಪಾದಕ ಜಿ.ಎನ್. ಮೋಹನ್‌ರ 'ವಾಕ್ ದ ಟಾಕ್' ಸಂದರ್ಶನದ ಕೊನೆಯಲ್ಲಿ 'ನೀವು ತುಂಬಾ ಅವಮಾನಿತರಾಗಿದ್ದು ದುಃಖ ಪಟ್ಟದ್ದು ಯಾವಾಗ...?' ಎಂಬ ಪ್ರಶ್ನೆಯೊಂದು ತೇಲಿಬಂತು.

ಅದಕ್ಕೆ ದೇವೇಗೌಡರು ತನ್ನನ್ನು ಪ್ರಧಾನಿ ಪಟ್ಟದಿಂದ ಇಳಿಸಿದ ಅಥವಾ ಪತ್ನಿ ಚನ್ನಮ್ಮನವರ ಮುಖಕ್ಕೆ ಅವರದ್ದೇ ಸಂಬಂಧಿಯೊಬ್ಬ ಆ್ಯಸಿಡ್ ಎರಚಿದ ಪ್ರಸಂಗವನ್ನು ನೆನೆಸಿಕೊಳ್ಳುತ್ತಾರೆಂದೇ ಎಲ್ಲರ ನಿರೀಕ್ಷೆಯಾಗಿತ್ತು. ಆದರೆ ದೇವೇಗೌಡರು ತಲೆ ಚಚ್ಚಿಕೊಂಡಿದ್ದು ಕುಮಾರಸ್ವಾಮಿ ಮಾಡಿಕೊಂಡ ಯಡವಟ್ಟಿನ ಬಗ್ಗೆ. 'ನೋಡಿ ಈ ದೇವೇಗೌಡ ತನ್ನ ಜೀವಮಾನದಲ್ಲಿ ಯಾವತ್ತೂ ಯಾರಿಗೂ ತಲೆತಗ್ಗಿಸಿದವನಲ್ಲ. ಆದರೆ ಕುಮಾರಸ್ವಾಮಿ ತನ್ನ ಜೀವನದಲ್ಲಿ ತಪ್ಪು ಮಾಡಿದ ಎಂದು ಸುದ್ದಿ ಬಂತು ನೋಡಿ ಆವತ್ತೇ ಈ ದೇವೇಗೌಡ ಕುಸಿದುಹೋದ. ನನ್ನ ಇಷ್ಟು ವರ್ಷದ ರಾಜಕೀಯ ಜೀವನದಲ್ಲಿ ನಾನು ಮೊದಲ ಬಾರಿಗೆ ತಲೆತಗ್ಗಿಸುವಂತಾಗಿದ್ದು ಕುಮಾರಸ್ವಾಮಿಯಿಂದ...' ಎಂದು ದೇವೇಗೌಡರು ಹೇಳಿದ್ದು ರಾಧಿಕಾ-ಕುಮಾರಸ್ವಾಮಿ ಸಂಬಂಧದ ಬಗ್ಗೆ ದೇವೇಗೌಡರ ಕುಟುಂಬ ಎಷ್ಟೊಂದು ಸೀರಿಯಸ್ಸಾಗಿದೆ ಎಂಬುದಕ್ಕೆ ಸಾಕ್ಷಿಯಂತಿತ್ತು.

ಕೇವಲ ದೇವೇಗೌಡರಷ್ಟೇ ಅಲ್ಲ, ವಿಶೇಷವಾಗಿ ಮೈಸೂರು ಮಂಡ್ಯ ಪ್ರಾಂತದ ಜನಸಾಮಾನ್ಯರಲ್ಲೇ ವಿಕಟ ಅನೈತಿಕತೆಯೊಂದು ಕುಮಾರಣ್ಣನ ಕಾರಣಕ್ಕೆಂದು ತಲೆ ಎತ್ತಿತು. 'ಅಲ್ಲಾ ಕಣ್ಲಾ.... ಆ ಕುಮಾರಣ್ಣನೇ ಎರಡೆರಡು ಕಟ್ಟಿಕೊಂಡಿರುವಾಗ ನಂದೇನ್ ಬಿಡ್ಲಾ...' ಎಂಬ ಕುತರ್ಕವೊಂದಕ್ಕೆ ಬಿದ್ದ ಲಂಪಟ ಸಮೂಹವೂ ಸೃಷ್ಟಿಯಾಗಿತ್ತು. ದೇವೇಗೌಡರ ಕುಟುಂಬವೆಂದರೆ ಕೇವಲ ರಾಜಕಾರಣವಷ್ಟೇ ಆಗಿದ್ದರೆ ಆ ಮಾತು ಬೇರೆ. ಹಳೇ ಮೈಸೂರು ಪ್ರಾಂತದ ದೊಡ್ಡ ಸಮೂಹವೊಂದು ದೇವೇಗೌಡರನ್ನು ತಮ್ಮ ಸಾಂಸ್ಕೃತಿಕ ನಾಯಕನೆಂದು ಪರಿಗಣಿಸುತ್ತದೆ. ಅಂಥಾದ್ದರಲ್ಲಿ ಕುಮಾರಣ್ಣ ಮಾಡಿಕೊಂಡ ಪಜೀತಿ ಸಾಮಾಜಿಕವಾಗಿ ಸಮರ್ಥಿಸಲ್ಪಡಲಾರಂಭಿಸಿದರೆ ಗತಿಯೇನು? ಅಂಥಾದ್ದೊಂದು ಅಪಾಯಕ್ಕೀಗ ಉಪಶಮನವಾದಂತಾಗಿದೆ.

ಸಂದರ್ಶನದಲ್ಲಿ ಅಪ್ಪನ ಅಫೇರ್ ಈಗ ಮುಗಿದ ಚಾಪ್ಟರ್ ಎಂದಿದ್ದಕ್ಕೆ ಸಮರ್ಥನೆಯೆಂಬಂತೆ ನಡೆದದ್ದು ಪ್ರಜಾ ಟೀವಿಯಲ್ಲಿ ಪ್ರಸಾರಗೊಂಡ ಕುಮಾರಣ್ಣನ ಸಂದರ್ಶನ. ಯೋಗರಾಜ್ ಭಟ್ ಮತ್ತದೇ ಯುಬಿ ಸಿಟಿಯ ಜೆಡಬ್ಲ್ಯು ಮ್ಯಾರಿಯೆಂಟ್ ಹೋಟೇಲಿನಲ್ಲಿ ವಿಶೇಷವಾಗಿ ಕುಮಾರಸ್ವಾಮಿಯ ಸಂದರ್ಶನ ಮಾಡುತ್ತಾ ಅಪರೂಪಕ್ಕೆಂಬಂತೆ ಕೇಳಿದ್ದು 'ನಿಮಗೂ ಅನಿತಕ್ಕನಿಗೂ ಪರಿಚಯವಾಗಿದ್ದು ಹೇಗೆ? ಎಲ್ಲಿ?'

ಇಷ್ಟೆನ್ನುತ್ತಿದ್ದಂತೆ ಏಕಾಏಕಿ ಅನಿತಕ್ಕನ ಗುಣಗಾನಕ್ಕೆ ನಿಂತ ಕುಮಾರಣ್ಣನ ಬಾಯಿಂದ ಬಂದ ಮೊದಲ ಮಾತೇ 'ನಾನೊಂದು ತಪ್ಪು ಮಾಡಿಬಿಟ್ಟೆ...!'

ಮುಂದುವರೆದು 'ನೋಡಿ ನಾನು ಅಂಥಾದ್ದೊಂದು ತಪ್ಪು ಮಾಡಿದಾಗಲೂ ಆಯಮ್ಮ ಈ ಬಗ್ಗೆ ಯಾವತ್ತೂ ನನ್ನನ್ನ ಪಜೀತಿಗೆ ಈಡು ಮಾಡಲಿಲ್ಲ. ಬೇರೆ ಯಾರೇ ಇದ್ರೂ ಅದೇನು ಮಾಡ್ತಿದ್ರೋ? ಅನಿತಮ್ಮಂದು ದೊಡ್ಡ ಗುಣ. ಇಲ್ದೆ ಹೋಗಿದ್ರೆ ನಾನು ಈ ಮಟ್ಟಕ್ಕೆ ಬರೋದು ಸಾಧ್ಯವಿತ್ತಾ? ಅನಿತಮ್ಮನ ಮನೋವೈಶಾಲ್ಯದ ಬಗ್ಗೆ ಹೇಳೋಕೆ ನನ್ನಲ್ಲೇ ಪದಗಳಿಲ್ಲ....' ಎಂದರು ಕುಮಾರಣ್ಣ.

ಅಲ್ಲಿಗೆ ರಾಧಿಕಾ ಸಂಬಂಧದ ಬಗ್ಗೆ ಕುಮಾರಣ್ಣ ಸ್ಪಷ್ಟ ನಿರ್ಧಾರವೊಂದಕ್ಕೆ ಬಂದಿದ್ದಾರೆಂಬುದು ನಿಚ್ಚಳಗೊಂಡಿತ್ತು. ಇಲ್ಲದೆ ಹೋಗಿದ್ದರೆ ತಾನೊಂದು ತಪ್ಪು ಮಾಡಿಬಿಟ್ಟೆ ಎಂಬ ಮಾತು ಕುಮಾರಣ್ಣನ ಬಾಯಿಂದ ಬರುತ್ತಿತ್ತಾ? ಪ್ರಜಾ ಟೀವಿಯ ಯೋಗರಾಜ್ ಭಟ್ ಸಂದರ್ಶನ ಪ್ರಸಾರಗೊಂಡಾಗಲೇ ಕುಮಾರಸ್ವಾಮಿ-ರಾಧಿಕಾ ಸಂಬಂಧ ಹಳಸಿದ ಬಗ್ಗೆ ಮೀಡಿಯಾಗಳ ವಲಯದಲ್ಲಿ ಪುಕಾರೆದ್ದಿತ್ತು. ಯಾವುದೋ ಚಾನಲ್ಲೊಂದು ಈ ಬಗ್ಗೆ ವಿಶೇಷ ಕಾರ್ಯಕ್ರಮವನ್ನೂ ಬಿತ್ತರಿಸಿತ್ತು. ಇದಾಗಿ ಒಂದೆರಡು ತಿಂಗಳಲ್ಲಿ ಡಾಲರ್ಸ್ ಕಾಲೋನಿಯ ರಾಧಿಕಾ ಮನೆ 25 ಕೋಟಿಗೆ ಮಾರಾಟಕ್ಕಿದೆ ಎಂದು ವದಂತಿ ಹಬ್ಬಿತ್ತು. ಈಗ ಅಂತಿಮವೆಂಬಂತೆ ರಾಧಿಕಾ ಬೆಂಗಳೂರನ್ನೇ ತೊರೆಯುವ ಸುದ್ದಿ ಬಂದಿದೆ. ಇದೊಂಥರ ನಿಗೂಢ ಸುದ್ದಿ. ರಾಧಿಕಾ ಬೆಂಗಳೂರು ತೊರೆಯುತ್ತಾರೆಂದು ಯಾವುದೇ ಅಧಿಕೃತ ಮೂಲದಿಂದ ನಿಖರ ಮಾಹಿತಿಯಿಲ್ಲ. ಒಂದೋ ರಾಧಿಕಾ ಬಾಯಿ ಬಿಡಬೇಕು ಅಥವಾ ಕುಮಾರಸ್ವಾಮಿಯಾದರೂ ಹೇಳಬೇಕು. ಪ್ರಕಟವಾದ ಸುದ್ದಿಗೆ ಯಾವುದೇ ಆಧಾರವಿಲ್ಲ. ಇದೊಂಥರ ಸಿನಿಮಾ ಗಾಸಿಪ್ ಮಾದರಿಯ ಪುಕಾರಷ್ಟೆ. ಅದನ್ನೇ ಅಧಿಕೃತ ಸುದ್ದಿಯೆಂಬಂತೆ ಪತ್ರಿಕೆಯೊಂದು ಪ್ರಕಟಿಸುತ್ತದೆಯೆಂದರೆ ಮರ್ಮ ಇನ್ನೇನೋ ಇರಬೇಕು.


ಅಂದರೆ ಇದು ಕುಮಾರಣ್ಣನ ಮೂಲದಿಂದಲೇ ಬರೆಸಲ್ಪಟ್ಟ ಸುದ್ದಿ! ದೇವೇಗೌಡರ ಕುಟುಂಬ ತನಗಾದ ಡ್ಯಾಮೇಜ್ ಕಂಟ್ರೋಲ್ ಕಾರ್ಯಾಚರಣೆಗೆ ಕೈಯಿಟ್ಟಿದೆಯೆ? ಅಥವಾ ಕುಮಾರಸ್ವಾಮಿಯ ಹುಚ್ಚು ಬಿಟ್ಟಿರಬಹುದೆ? ಮಂಗಳೂರು ಸಮೀಪದ ಡಾನ್ ಸಾಧು ಶೆಟ್ಟಿಯ ಬಂಗಲೆ, ಕಲ್ಲಡ್ಕದ 40 ಎಕರೆ ತೋಟ, ಬಾಳೇಬೈಲಿನ ಬಂಗಲೆ ಜೊತೆಗೆ ಬೆಂಗಳೂರಿನ ಡಾಲರ್ಸ್ ಕಾಲನಿಯ ಬಂಗಲೆಯನ್ನೂ ಕುಮಾರಣ್ಣ ರಾಧಿಕಾ ಉಡಿಗೆ ಹಾಕಿ ಮೇಲು ಕಾಸೆಂದು 25 ಕೋಟಿಯ ಪರಿಹಾರ ಕೊಟ್ಟಿರಬಹುದೆ?

ಅಂತೂ ರಾಧಿಕಾ ಎಂಬ [illegible] ಕುಮಾರಸ್ವಾಮಿಗೆ ಮುಕ್ತಿ ಸಿಕ್ಕಿರಲೇಬೇಕು.

ಅದು ಜೆಡಿಎಸ್‌ಗೆ ಅಂಟಿದ [illegible] ಮುಕ್ತಿಯೋ, ಮಾಗ್ಗಿನ ದುಡ್ಡಿನ [illegible] ಗುಡಾ ಮುಕ್ತಿಯೋ?

■ ರಾ. ಸೋಮನಾಥ್

...ಕೀಯಕ್ಕೆ ಬರ್ತೀನಿ ಅಂತಾಳಂತೆ....!




ಈ ಮಧ್ಯೆ ರಾಧಿಕಾ ರಾಜಕೀಯಕ್ಕೆ ಬರುತ್ತಾರೆಂಬ ಮತ್ತೊಂದು ಸುದ್ದಿ ಹುಟ್ಟಿಕೊಂಡಿದ್ದೇಕೆ?

ಅದು ದೇವೇಗೌಡರ ಫ್ಯಾಮಿಲಿಯನ್ನು ಬ್ಲಾಕ್‌ಮೇಲ್ ಮಾಡುವ ರಾಧಿಕಾ ತಂತ್ರವೆ?

ಹಾಗೊಮ್ಮೆ ಕುಮಾರಣ್ಣ ಕೈಬಿಟ್ಟದ್ದೇ ಆದರೆ ತಾನು ಮಂಗಳೂರಿಗೆ ಹೋಗಿ ದಕ್ಷಿಣ ಕನ್ನಡ ಕರಾವಳಿಯ ಯಾವುದಾದರೂ ಕ್ಷೇತ್ರದಿಂದ ಚುನಾವಣೆಗೆ ನಿಲ್ಲುತ್ತೇನೆಂಬುದು ರಾಧಿಕಾ ರವಾನಿಸುತ್ತಿರುವ ಎಚ್ಚರಿಕೆಯೇ? ಜೆಡಿಎಸ್ ಅಥವಾ ದೇವೇಗೌಡರ ಕುಟುಂಬಕ್ಕೆ ಆಗದ ರಾಜಕೀಯ ಹಿತಾಸಕ್ತಿಗಳು ತನ್ನನ್ನು ಕರೆದು ಟಿಕೆಟ್ ಕೊಟ್ಟು ಮಣೆ ಹಾಕಬಹುದೆಂಬುದು ಆಕೆಯ ನಿರೀಕ್ಷೆಯೆ? ಮೂರ್ಖತನಕ್ಕಾದರೂ ಮಿತಿ ಬೇಡವೇ?

... ಹೊಂದಿಟ್ಟುಕೊಂಡು ದೇವೇಗೌಡರ ಕುಟುಂಬಕ್ಕೆ ಬತ್ತಿ ಇಡಬಲ್ಲ ಮೂರ್ಖತನ ಇಲ್ಲಿನ [illegible] ... [illegible] ಸೇರುವ ರಾಧಿಕಾಳ ಪತಾಕ ದುರಾಸೆಯ ಬೀಜ ಬಿತ್ತಿದವರ್ಯಾರೋ? ...?

ಸಿಂಧೂರದ ಕುಜ್ಞಾನ ಮತ್ತು ಪಾದರಸದ ವಿಜ್ಞಾ



■ ಗಿರೀಶ್ ತಾಳಿಕಟ್ಟೆ

ವ್ಯಾಟ್ಸಪ್ ಸಂದೇಶ: ಸಿಂಧೂರ ಹಚ್ಚಿಕೊಳ್ಳುವುದು ಹಿಂದೂ ವಿವಾಹಿತ ಮಹಿಳೆಯರ ಪವಿತ್ರ ಸಂಕೇತ. ಇದರಿಂದ ಮನೋವೈಜ್ಞಾನಿಕ ಲಾಭಗಳೂ ಇವೆ. ಸಿಂಧೂರವನ್ನು ಅರಿಶಿನ ಮತ್ತು ಪಾದರಸಗಳನ್ನು ಬೆರೆಸಿ ಮಾಡುತ್ತಾರೆ. ಅರಿಶಿನಕ್ಕೆ ಅದರದೇ ಆದ ಒಳ್ಳೆಯ ಗುಣಗಳಿವೆ. ಆದರೆ ಇಲ್ಲಿ ಮುಖ್ಯವಾದುದು ಪಾದರಸ. ಅದು ರಕ್ತದ ಒತ್ತಡವನ್ನು ನಿಯಂತ್ರಣದಲ್ಲಿಡುತ್ತದೆ ಮತ್ತು ಲೈಂಗಿಕ ಅಭಿಲಾಷೆಯನ್ನು ಹೆಚ್ಚಿಸುತ್ತದೆ. ಆದ್ದರಿಂದಲೇ ವಿಧವೆಯರಿಗೆ ಸಿಂಧೂರವಿಲ್ಲ. ಉತ್ತಮ ಪರಿಣಾಮಕ್ಕಾಗಿ ಸಿಂಧೂರವನ್ನು ಭಾವನೆಗಳ ಕೇಂದ್ರ ಎನಿಸಿಕೊಳ್ಳುವ ಪಿಟ್ಯುಟರಿ ಗ್ರಂಥಿಯವರೆಗೂ ಹಚ್ಚಿಕೊಳ್ಳಬೇಕು.

ಸತ್ಯಾಂಶ: ವಿಜ್ಞಾನದ ಕನಿಷ್ಠ ಕಾಮನ್‌ಸೆನ್ಸ್ ಇರುವ ಎಂತವರಿಗೇ ಆದರೂ ಲೆಡ್ (ಸೀಸ) ಮತ್ತು ಮರ್ಕ್ಯುರಿ (ಪಾದರಸ) ಎಂಬೆರಡು ವಿಷಕಾರಿ ಎಲಿಮೆಂಟುಗಳು ತಂದೊಡ್ಡುವ ಮಾರಣಾಂತಿಕ ರಿಸ್ಕುಗಳ ಬಗ್ಗೆ ಆತಂಕ ಇದ್ದೇ ಇರುತ್ತದೆ. ಇವೆರಡನ್ನೂ ಸಿಂಧೂರ ತಯಾರಿಕೆಯಲ್ಲಿ ಬಳಸುತ್ತಾರೆ! ಆದರೆ ಈ ವ್ಯಾಟ್ಸಪ್ ಮಹಾಶಯರು ಧರ್ಮದ ಅಮಲಿನಲ್ಲಿ 'ವಿಲನ್'ಗಳನ್ನೇ 'ಹೀರೊ'ಗಳನ್ನಾಗಿಸುವ ಕುಜ್ಞಾನ ಪ್ರದರ್ಶಿಸಿರೋದು ಆಘಾತಕಾರಿ. ಸಿಂಧೂರ (ಕುಂಕುಮ) ವನ್ನು ಸಿನ್ನಾಬಾರ್ ಎಂಬ ಕಲ್ಲುರೂಪದ ಅದಿರನ್ನು ಪುಡಿಮಾಡಿ, ರಾಸಾಯನಿಕ ಸಂಸ್ಕರಣೆಗೆ ಒಳಪಡಿಸಿ ತಯಾರಿಸಲಾಗುವುದು. ಈ ಸಿನ್ನಾಬಾರ್ ಅನ್ನೋದು ಬೇರೇನೂ ಅಲ್ಲ, ಮರ್ಕ್ಯುರಿ (ಪಾದರಸ) ಸಲ್ಫೈಡ್‌ನ ಘನರೂಪ. ಸಿಂಧೂರದ ಬಣ್ಣವನ್ನು ಗಾಢವಾಗಿಸುವುದಕ್ಕೋಸ್ಕರ ಇದರೊಂದಿಗೆ 'ಕೆಂಪು ಸೀಸ'ವನ್ನೂ (ರೆಡ್ ಲೆಡ್) ಬೆರೆಸುತ್ತಾರೆ. ಈ ರೆಡ್‌ಲೆಡ್ ಅನ್ನೋದು ಲೆಡ್ ಟೆಟ್ರಾಕ್ಸೈಡ್‌ನ ಒಂದು ರೂಪ. ಇಂತಹ ರಾಸಾಯನಿಕಗಳಿಂದ ಸಂಶ್ಲೇಷಿತಗೊಂಡ ಸಿಂಧೂರ ಕೆಂಪುಗುಡ್ಡೆಯ ರೂಪದಲ್ಲಿ ಮಾರುಕಟ್ಟೆಯಲ್ಲಿ ಬಿಕರಿಯಾಗುತ್ತದೆ, ಅದನ್ನು ಪವಿತ್ರ ಭಾವನೆಯಲ್ಲಿ ಹೆಂಗಸರು ಲೇಪಿಸಿಕೊಳ್ಳಬೇಕು. ಹೀಗೆ ಲೇಪಿಸಿಕೊಳ್ಳುವ ಮುನ್ನ ಸೀಸ ಮತ್ತು ಪಾದರಸಗಳು ಆರೋಗ್ಯಕ್ಕೆ ಅದೆಷ್ಟು ಅಪಾಯಕಾರಿ ಎಂಬುದನ್ನು ತಿಳಿದುಕೊಳ್ಳುವುದು ಒಳಿತು.

ನೀವು 'ಮಿನಮಾಟ' ಎಂಬ ನರಸಂಬಂಧಿ ರೋಗದ ಬಗ್ಗೆ ಬಹುಶಃ ಕೇಳಿರಬಹುದು. ಆ ರೋಗದ ಮೂಲ ಕಾರಕವೇ ಪಾದರಸ. ಅಸಲಿಗೆ ಮಿನಮಾಟ ಅನ್ನೋದು ಜಪಾನ್‌ನ ಕುಮಾಮೊಟೊ ಪ್ರಾಂತ್ಯದ ಒಂದು ನಗರದ ಹೆಸರು. 1956ರಲ್ಲಿ ಈ ನಗರದ ಜನ ಒಂದುಬಗೆಯ ವಿಚಿತ್ರ ರೋಗಕ್ಕೆ ತುತ್ತಾಗಲು ಶುರುವಾದರು. ಇದ್ದಕ್ಕಿದ್ದಂತೆ ಅಂಗೈ ಮತ್ತು ಪಾದಗಳು ಸಂವೇದನೆಯನ್ನೇ ಕಳೆದುಕೊಂಡು ಮರಗಟ್ಟಿದಂತಾದವು, ಸ್ನಾಯುಗಳು ನಿಶ್ಶಕ್ತಗೊಂಡು ದೇಹ ನಿತ್ರಾಣವಾಯಿತು, ದೃಷ್ಟಿ ಮಂದವಾಯಿತು, ಮಾತು ತೊದಲಲಾರಂಭಿಸಿತು, ಕೇಳುವಿಕೆಯು ಕ್ಷೀಣಿಸಿತು. ನೋಡನೋಡುತ್ತಿದ್ದಂತೆಯೇ ಸಹಸ್ರಾರು ಜನ ಬುದ್ಧಿಮಾಂದ್ಯ ವಿಕಲಚೇತನರಂತೆ ಹಾಸಿಗೆ ಹಿಡಿದರು. ಹುಟ್ಟುವ ನವಜಾತ ಶಿಶುಗಳು ಕೂಡಾ ಇಂತದ್ದೇ ಲಕ್ಷಣಗಳೊಂದಿಗೆ ಅವತರಿಸಿದವು. ಲಕ್ಷಣಗಳು ತೀವ್ರ ಉಲ್ಬಣಿಸಿದ ಕೆಲವರು ಸತ್ತೇ ಹೋದರು. ಜಪಾನ್ ದೇಶದ ವಿಜ್ಞಾನಿಗಳು, ವೈದ್ಯಲೋಕದ ಜನರು ಅಚ್ಚರಿಯಿಂದ ಮಿನಮಾಟದತ್ತ ಧಾವಿಸಿ ಬಂದು ಚಿಕಿತ್ಸೆಗೆ ನಿಂತರಲ್ಲದೆ ಇದಕ್ಕೆಲ್ಲ ಏನು ಕಾರಣ ಎಂಬ ಶೋಧನೆಯಲ್ಲೂ ತೊಡಗಿಕೊಂಡರು. ಆಗ ಬಯಲಾದ ಸತ್ಯ ಜನರನ್ನು ಬೆಚ್ಚಿಬೀಳಿಸಿತ್ತು. ಈ ನಗರದಲ್ಲಿ ಚಿಸ್ಸೊ ಕಾರ್ಪೋರೇಷನ್ ಎಂಬ ರಾಸಾಯನಿಕ ಕಾರ್ಖಾನೆ ಇತ್ತು, ಎಲ್‌ಇಡಿ ಡಿಸ್‌ಪ್ಲೇಗಳ ತಯಾರಿಕೆಯಲ್ಲಿ ಬಳಸಲಾಗುವ ಲಿಕ್ವಿಡ್ ಕ್ರಿಸ್ಟಲ್‌ಸ ಉತ್ಪಾದನೆಯೇ ಅದರ ಕಸುಬು. ಉತ್ಪಾದನೆಯ ನಂತರ ಮೀಥೈಲ್ ಮರ್ಕ್ಯುರಿ (ಪಾದರಸದ ಒಂದು ಬಗೆ) ತ್ಯಾಜ್ಯವನ್ನು ಸಂಸ್ಕರಣೆ ಮಾಡದೆ ಹರಿವ ನೀರಿಗೆ ಬಿಟ್ಟದ್ದೇ ಆ ರೋಗಕ್ಕೇ ಕಾರಣವಾಗಿತ್ತು, ನೀರನ್ನು ನೇರವಾಗಿ ಸೇವಿಸಿದ್ದು ಮತ್ತು ಅಂತಹ ನೀರಿನಲ್ಲಿ ಹಿಡಿದ ಮೀನುಗಳ ಸೇವನೆಯಿಂದ ಪಾದರಸ ಮನುಷ್ಯರ ದೇಹ ಸೇರಿಕೊಂಡಿತ್ತು, 1962ರಲ್ಲಿ ಆ ಕಂಪನಿಯನ್ನೇ ಬಂದ್ ಮಾಡಲಾಯಿತಾದರು ಅಷ್ಟೊತ್ತಿಗಾಗಲೆ ಪಾದರಸದಿಂದ ಸಹಸ್ರಾರು ಜೀವಗಳು ಬಲಿಯಾಗಿದ್ದವು. ಮರ್ಕ್ಯುರಿ ಪಾಯಿಸನಿಂಗ್‌ನಿಂದ ಉಂಟಾದ ಆ ರೋಗಕ್ಕೆ ಮಿನಮಾಟ ಅಂತಲೇ (ಆ ನಗರದ ಹೆಸರು) ನಾಮಕರಣ ಮಾಡಲಾಯಿತು.

ಮನುಷ್ಯನ ದೇಹಕ್ಕೆ ಪಾದರಸ ಎಷ್ಟು ಅಪಾಯಕಾರಿಯೆಂದರೆ ಕೇವಲ ಒಂದು ಗ್ರಾಂನಷ್ಟು ಪಾದರಸವೂ ಸಾವನ್ನು ತಂದೊಡ್ಡಬಲ್ಲದು. ನಮ್ಮ ರಕ್ತದ ಪ್ರತಿ ಲೀಟರ್‌ನಲ್ಲಿ 1 ರಿಂದ 3 ಮೈಕ್ರೊಗ್ರಾಂ ಪಾದರಸ ಇರುವವರೆಗೆ ನಾವದನ್ನು ನಿಭಾಯಿಸಬಹುದು. ಅದಕ್ಕಿಂತ ಹೆಚ್ಚಾದರೆ ಅಪಾಯ ಕಟ್ಟಿಟ್ಟ ಬುತ್ತಿ, ಪಾದರಸವು ಪ್ರಧಾನವಾಗಿ ಮೆದುಳಿನ ಕೋಶಗಳನ್ನು ಹಾನಿಗೊಳಿಸುತ್ತದೆ. ಜೊತೆಗೆ ಮೂತ್ರಕೋಶ ಮತ್ತು ಶ್ವಾಸಕೋಶಗಳಿಗೂ ಹಾನಿ ತಪ್ಪಿದ್ದಲ್ಲ, ಮರ್ಕ್ಯುರಿ ಪಾಯಿಸನಿಂಗ್‌ನಿಂದ ಬಳಲುತ್ತಿರುವವರಲ್ಲಿ ಅತಿಯಾದ ಬೆವರಿಕೆ, ಟೇಕಿಕಾರ್ಡಿಯಾ (ಸಹಜಕ್ಕಿಂತ ಹೆಚ್ಚಾಗಿ ಹೃದಯಬಡಿದುಕೊಳ್ಳುವುದು), ಅತಿಯಾದ ಜೊಲ್ಲುಸ್ರಾವ, ಅಧಿಕ ರಕ್ತದೊತ್ತಡ (ಸಂದೇಶದಲ್ಲಿ ಉಲ್ಲೇಖಿಸಿರುವಂತೆ ಅದು ರಕ್ತದೊತ್ತಡವನ್ನು ನಿಯಂತ್ರಿಸುವುದಿಲ್ಲ), ಕೂದಲು ಉದುರುವಿಕೆ, ಚರ್ಮದ ಬಣ್ಣಗೆಡುವಿಕೆಯಂತಹ ಲಕ್ಷಣಗಳು ಕಾಣಿಸಿಕೊಳ್ಳುತ್ತವೆ. ಗರ್ಭಾವಸ್ಥೆಯಲ್ಲಿರುವ ತಾಯಿಯು ಪಾದರಸದ ವಿಷಕಾರತೆಗೆ ತುತ್ತಾದರೆ ಭ್ರೂಣವು ಅಕ್ರೋಡೇನಿಯಾ ಎಂಬ ರೋಗಕ್ಕೆ ತುತ್ತಾಗುತ್ತದೆ. ಸಾಮಾನ್ಯವಾಗಿ ಇದನ್ನು ಪಿಂಕ್ ಡಿಸೀಸ್ ಎಂದು ಕರೆಯಲಾಗುತ್ತೆ. ಮಗುವಿನ ಕೈ ಮತ್ತು ಪಾದಗಳು ವಿಚಿತ್ರ ಗುಲಾಬಿ ಬಣ್ಣಕ್ಕೆ ತಿರುಗುವುದಲ್ಲದೆ ಮಗುವಿನ ನರಕೋಶ ಬೆಳವಣಿಗೆಯೇ ಕುಂಠಿತವಾಗುವ ಸಂಭವ ಇರುತ್ತದೆ.

ಪಾದರಸವು ನರಕೋಶಗಳಿಗೆ ಹಾನಿ ತಗುಲಿಸುವ ಸಾಹಸವೇ ರೋಚಕವಾದದ್ದು. ನಮ್ಮ ದೇಹದಲ್ಲಿ ಒಂದಷ್ಟು ಸೆಲೆನೊ ಎಂಜೈಮ್‌ಗಳಿವೆ (ಸೆಲೆನಿಯಮ್ ಅಣುವನ್ನು ಒಳಗೊಂಡ ಕಿಣ್ವಗಳು). ಅವುಗಳಲ್ಲಿ ಪ್ರಮುಖವಾದುದು ಥಯೋರೆಡಾಕ್ಸಿನ್ ರೆಡಕ್ಟೇಸ್ ಎಂಬ ಕಿಣ್ವ. ಇದರ ಪ್ರಮುಖ ಕೆಲಸವೆಂದರೆ ಆಕ್ಸಿಡೀಕರಣ ಕ್ರಿಯೆಯಿಂದ (ಆಮ್ಲಜನಕವನ್ನು ಪಡೆದುಕೊಳ್ಳುವಿಕೆ) ಮಿದುಳಿಗೆ ಉಂಟಾಗಬಹುದಾದ ಹಾನಿಯನ್ನು ರಿಡಕ್ಷನ್ ಕ್ರಿಯೆಯ - (ಆಮ್ಲಜನಕವನ್ನು ಕಳೆದುಕೊಳ್ಳುವಿಕೆ) ಮೂಲಕ ಸರಿದೂಗಿಸುವುದು. ಇದಕ್ಕೋಸ್ಕರ ಈ ಕಿಣ್ವವು ಸಿ, ಇ ಜೀವಸತ್ವಗಳ ಜೊತೆಗೆ ಇನ್ನ ಹಲವಾರು ಪ್ರತಿ-ಆಕ್ಸಿಡಿಕಾರಕ ಅಣುಗಳನ್ನು ಅವುಗಳ ಆಮ್ಲಜನಕೇತರ (ರೆಡ್ಯೂಸ್ಡ್) ರೂಪಗಳಲ್ಲಿ ದಾಸ್ತಾನಾಗಿಟ್ಟಿರುತ್ತದೆ. ದೇಹದ ಬೇರೆಲ್ಲ ಅಂಗಾಂಶಗಳಿಗಿಂತ ಮಿದುಳಿನ ಅಂಗಾಂಶಗಳು ಹೆಚ್ಚು ಆಮ್ಲಜನಕವನ್ನು ಬಳಸಿಕೊಳ್ಳುವುದರಿಂದ ಅವುಗಳು ಆಕ್ಸಿಡೀಕರಣಕ್ಕೆ ಮುಕ್ತವಾಗುವ ಸಂಭವ ಅಧಿಕ. ತತ್ಪರಿಣಾಮವಾಗಿ ಅವು ಆಕ್ಸಿಡೀಕರಣದ ಹಾನಿಗೆ ತುತ್ತಾಗುವ ಸಾಧ್ಯತೆಯೂ ಹೆಚ್ಚು, ಆದರೆ ಥಯೋರೆಡಾಕ್ಸಿನ್ ರೆಡಕ್ಟೇಸ್ ಕಿಣ್ವ ದಾಸ್ತಾನು ಮಾಡಿಟ್ಟ ಪ್ರತಿ-ಆಕ್ಸಿಡಿಕಾರಕಗಳು ಕಾರ್ಯಪ್ರವೃತ್ತವಾಗಿ ಆಕ್ಸಿಡೀಕರಣದ ಹಾನಿಯನ್ನು ತಟಸ್ಥಗೊಳಿಸುತ್ತವೆ.

ಪಾದರಸವು, ಥಯೋರೆಡಾಕ್ಸಿನ್ ರೆಡಕ್ಟೇಸ್ ಕಿಣ್ವದಂತಹ ಸೆಲೆನೊಎಂಜೈಮ್‌ಗಳನ್ನೇ ಪ್ರತಿಬಂಧಿಸುವ ಮೂಲಕ ಅವುಗಳ ಕಾರ್ಯ ಕುಂಠಿತವಾಗುವಂತೆ ಮಾಡುತ್ತದೆ. ಹಾಗಾಗಿ ಮೆದುಳಿನ ನರಕೋಶಗಳು ಸುಲಭವಾಗಿ ಆಕ್ಸಿಡೀಕರಣದ ಹಾನಿಗೆ ತುತ್ತಾಗುತ್ತವೆ. ಆಗ ನರಸಂಬಂಧಿ ವ್ಯತ್ಯಯಗಳು ಕಾಣಿಸಿಕೊಂಡು ಅಕ್ರೋಡೆನಿಯಾ, ಹಂಟರ್-ರಸ್ಸೆಲ್ ಸಿಂಡ್ರೋಮ್, ಮಿನಮಾಟದಂತಹ ಮಾರಣಾಂತಿಕ ರೋಗಗಳು ಕಾಣಿಸಿಕೊಳ್ಳುತ್ತವೆ. ದೇಹದಲ್ಲಿ ಪಾದರಸದ ಪ್ರಮಾಣ ಹೆಚ್ಚಾದಂತೆಲ್ಲ ಸೆಲೆನೊಎಂಜೈಮ್‌ಗಳ ಉತ್ಪಾದನೆಗೆ ಅಗತ್ಯವಾದ ಸೆಲೆನಿಯಂ ಲಭ್ಯತೆಯೇ ಜೀವಕೋಶಗಳಲ್ಲಿ ಕ್ಷೀಣಗೊಳ್ಳುತ್ತಾ ಸಾಗುತ್ತದೆ. ಆಗ ಆ ಕಿಣ್ವಗಳು ಉತ್ಪತ್ತಿಯೇ ಆಗುವುದಿಲ್ಲ, ಪರಿಣಾಮವಾಗಿ ಕೇವಲ ಮಿದುಳು ಕೋಶಗಳಲ್ಲದೆ ಇಡೀ ದೇಹದ ಎಲ್ಲಾ ಜೀವಾಧಾರಕ ಅಂಗದ ಕೋಶಗಳು ಆಕ್ಸಿಡೀಕರಣದ ಹಾನಿಯನ್ನು ಪ್ರತಿರೋಧಿಸಲಾರದೆ ಘಾಸಿಗೆ ಒಳಗಾಗುತ್ತವೆ. ಇದನ್ನು ಚಿಕಿತ್ಸೆ ಮೂಲಕ ನಿಯಂತ್ರಣಕ್ಕೆ ತರದಿದ್ದರೆ ಸಾವು ಕೂಡಾ ಸಂಭವಿಸಬಹುದು. ಮಿನಮಾಟದ ನತದೃಷ್ಟರಿಗೆ ಆದದ್ದು ಕೂಡಾ ಇದೇ ಗತಿ!


ನಿಮಗೆ ಅಚ್ಚರಿಯಾಗಬಹುದು, ಈ ಪಾದರಸವನ್ನು ಕೆಲವೊಮ್ಮೆ ಕೊಲೆ ಮಾಡುವುದಕ್ಕೆ ಬಳಸಿದ ನಿದರ್ಶನಗಳೂ ಉಂಟು. 2008ರಲ್ಲಿ ರಷ್ಯಾದ ಕರಿನ್ನಾ ಮೊಸ್ಕಲೆಂಕೊ ಎಂಬ ವಕೀಲೆಯೊಬ್ಬಳು ತನ್ನ ಕಾರಿನಲ್ಲಿ ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದಳು. ನಿಗೂಢವಾಗಿದ್ದ ಆ ಪ್ರಕರಣವನ್ನು ಬೇಧಿಸಿದ ಪೊಲೀಸರು ಆಕೆಗೆ ಪಾದರಸವನ್ನು ನೀಡಿ ಕೊಲೆ ಮಾಡಲಾಗಿದೆ ಎಂದು ಪತ್ತೆ ಹಚ್ಚಿದ್ದರು. ಕಾರಿನಲ್ಲಿ ಸಿಕ್ಕ ಮರ್ಕ್ಯುರಿಯ ಶೇಷವೇ ಆ ತನಿಖೆಯ ಪ್ರಧಾನ ಕ್ಲೂ ಆಗಿತ್ತು, ಅದೇರೀತಿ 2010ರಲ್ಲಿ ವಿಪರೀತ ತಲೆಕೂದಲು ಉದುರುವ ಸಮಸ್ಯೆಯಿಂದ ಜರ್ಮನಿಯ ಬರ್ಲಿನ್ ಆಸ್ಪತ್ರೆಯೊಂದಕ್ಕೆ ಭೇಟಿನೀಡಿದ್ದ ಮರೀನಾ ಕಲಾಶ್ನಿಕೋವಾ ಎಂಬಾಕೆಯ ರಕ್ತ ಪರೀಕ್ಷೆ ಮಾಡಿದ ವೈದ್ಯರಿಗೆ ಅಚ್ಚರಿಯೊಂದು ಕಾದಿತ್ತು, ಆಕೆಯ ಪ್ರತಿ ಲೀಟರ್ ರಕ್ತದಲ್ಲಿ 56 ಮೈಕ್ರೊಗ್ರಾಂ ಪಾದರಸ ಸೇರಿಕೊಂಡಿತ್ತು, ಅನುಮಾನ ಬಂದು ಆಕೆಯ ಗಂಡ ವಿಕ್ಟೊರ್ ಕಲಾಶ್ನಿಕೊವ್‌ರನ್ನು ಪರೀಕ್ಷಿಸಿದಾಗ ಆತನ ರಕ್ತದಲ್ಲೂ 53.7 ಮೈಕ್ರೊಗ್ರಾಂ ಪಾದರಸ ಪತ್ತೆಯಾಗಿತ್ತು, ಮೂಲತಃ ಅವರಿಬ್ಬರೂ ರಷ್ಯಾದವರಾಗಿದ್ದು ಮರೀನಾ ಪತ್ರಕರ್ತೆಯಾಗಿದ್ದಳು, ವಿಕ್ಟೊರ್ ರಷ್ಯಾದ ಗೂಢಚರ್ಯೆ ಮತ್ತು ರಕ್ಷಣಾ ಸಂಸ್ಥೆ ಕೆಜಿಬಿ (ನಂತರದಲ್ಲಿ ಎಫ್‌ಎಸ್‌ಬಿ ಎಂದು ಮರುನಾಮಕರಣಗೊಂಡಿತು) ಯ ರಹಸ್ಯ ಏಜೆಂಟ್ ಆಗಿದ್ದ. ಮರೀನಾ ಕಲಾಶ್ನಿಕೋವಾ, 1990ರ ಆಸುಪಾಸಿನಲ್ಲಿ ರಷ್ಯಾ ಸರ್ಕಾರದ ವಿರುದ್ಧ ನಿರಂತರ ಲೇಖನಗಳನ್ನು ಬರೆಯುತ್ತಿದ್ದರಿಂದ ಎಫ್‌ಎಸ್‌ಬಿಯು ತಮಗೆ ಪಾದರಸವನ್ನು ರಹಸ್ಯವಾಗಿ ನೀಡಿ ಕೊಲೆ ಮಾಡಲು ಹವಣಿಸಿದೆ ಎಂದು ಆ ದಂಪತಿಗಳು ದೂರಿದ್ದರು. ತನಿಖೆಯ ನಂತರ ಆರೋಪವನ್ನು ಸಾಬೀತುಮಾಡುವಂತಹ ಸಾಕ್ಷ್ಯಾಧಾರಗಳು ಲಭ್ಯವಾಗದೆ ಕೇಸು ಬಿದ್ದುಹೋಯಿತಾದರು ಪಾದರಸ ವಿಷಕಾರತೆ ಪರಿಣಾಮ ಮತ್ತು ಕ್ಯಾನ್ಸರ್‌ನಿಂದಾಗಿ ಆಕೆ 2013ರಲ್ಲಿ ಸಾವನ್ನಪ್ಪಿದ್ದಳು. ಒಟ್ಟಿನಲ್ಲಿ ಮಾನವ ದೇಹಕ್ಕೆ ಪಾದರಸ ಅಪಾಯಕಾರಿ ಎನ್ನುವುದ

ದಂತ ವೈದ್ಯಕೀಯ ಚಿಕಿತ್ಸೆಯಲ್ಲಿ ಈಗ ಅಮಾಲ್ಗಮ್ (ಪಾದರಸವನ್ನು ಬೆಳ್ಳಿಯೊಂ ತಯಾರಿಸಿದ ಸಂಯುಕ್ತ) ಅನ್ನು ದಂತಕುಳಿ ಬಳಸಲಾಗುತ್ತದೆ. ಆಡುಭಾಷೆಯಲ್ಲಿ ನಾವದನ್ನು ಬೆಳ್ಳಿ ತುಂಬಿಸೋದು ಎಂದು ಕರೆಯುತ್ತೇವೆ ಕಡಿಮೆ ಪ್ರಮಾಣದ ಪಾದರಸವನ್ನು ಬಳಸ ಮತ್ತು ದ್ರವರೂಪದ ಪಾದರಸ ಕಡಿಮೆ ಎಂಬ ಸಮರ್ಥನೆಗಳ ಹೊರತಾಗಿಯೂ ಚಿಕಿತ್ಸೆಯನ್ನು ಕೈಬಿಟ್ಟು ಬದಲೀ (ಅಕ್ರಿಲಿ ಪೋರ್ಸಲಿನ್) ಚಿಕಿತ್ಸೆಗಳನ್ನು ರೂಢಿಸಿಕೊ ಒತ್ತಾಯ ಕೇಳಿಬರುತ್ತಿರೋದು ಕೂಡಾ ಅದರ ಕಾರಣಕ್ಕೆ. ದಂತವೈದ್ಯರು ಕೂಡಾ ಬೇರೆಲ್ಲ ಚಿ ಅಮಾಲ್ಗಮ್ ರೆಸ್ಟೊರೇಷನ್‌ಗೆ ಬಹಳ ಗ ಕಾಳಜಿಯಿಂದ ಚಿಕಿತ್ಸೆ ನೀಡಿ,. ಅಷ್ಟೇ ಜಾಗರು ತ್ಯಾಜ್ಯವನ್ನು ವಿಲೇವಾರಿ ಮಾಡುವುದು ಕಾರಣಕ್ಕೆ, ಪಾದರಸದ ಆವಿಯನ್ನು ಶ್ವಾಸ ಒಳತೆಗೆದುಕೊಂಡರೂ ಅಪಾಯವನ್ನು ನಿರ್ಲ

ಇನ್ನು ಸಿಂಧೂರ ತಯಾರಿಕೆಯಲ್ಲಿ ಬ (ಲೆಡ್)ದ ಕರಾಳತೆ ಇದಕ್ಕಿಂತ ಭಿನ್ನವಾದ ಭಾರಲೋಹ ದೇಹದಲ್ಲಿ ಅತಿಯಾಗಿ ಶೇಖ ಹೃದಯ, ಮೂಳೆ, ಮೂತ್ರಪಿಂಡ, ಕರುಳು, ಜನ ಮತ್ತು ನರವ್ಯೂಹಗಳಿಗೆ ಹಾನಿಯನ್ನುಂಟು ಮಕ್ಕಳಲ್ಲಿ ನರವ್ಯೂಹದ ಮೇಲೆ ಉಂಟುಮಾಡುವುದರಿಂದ ಮಕ್ಕಳು ಕಲಿಕಾ ಮ ನ್ಯೂನತೆಗಳಿಂದ ಬಳಲುತ್ತಾರೆ. ವಯಸ್ಕರ ಡೆಸಿಲೀಟರ್ ರಕ್ತದಲ್ಲಿ ಗರಿಷ್ಠ 10 ಮೈಕ್ರೊ ಮಕ್ಕಳಲ್ಲಿ 5 ಮೈಕ್ರೊಗ್ರಾಂ ಸೀಸದ ಪ್ರಮಾಣಕ್ಕಿ ಅದು ಅಪಾಯದ ಗಂಟೆಯಂತಲೇ ಭಾವಿ ಕಿಡ್ನಿಯಲ್ಲಿ ಇದು ನೆಫ್ರೊಪಥಿ ಮತ್ತ ಸಿಂಡ್ರೋಮ್‌ನಂತಹ ರೋಗಗಳನ್ನು ಉಂಟ ಹೃದಯದಲ್ಲಿ ಅಧಿಕ ರಕ್ತದೊತ್ತಡ, ಕರೋನ ಡಿಸೀಸ್, ಹೃದಯ ಬಡಿತದ ಏರಿಳಿತಕ್ಕೆ ಕಾರ ಪುರುಷರಲ್ಲಿ ಇದರ ಪ್ರಮಾಣ ಪ್ರತಿ ಡೆಸಿಲೀ 40 ಮೈಕ್ರೊಗ್ರಾಂಕ್ಕಿಂತ ಹೆಚ್ಚಾದರೆ ವೀ ಸಂಖ್ಯೆಯು ಕ್ಷೀಣಿಸುತ್ತದಲ್ಲದೆ ಅವುಗಳ ಗುಣಾತ್ಮಕತೆಯಲ್ಲೂ ವ್ಯತ್ಯಯಗಳು ಕಾಣಿ ಪರಿಣಾಮವಾಗಿ ಪುರುಷ ಬಂಜೆತನ ಅ ಸಂತತಿಗೆ ಕಾರಣರಾಗಬೇಕಾಗುತ್ತದೆ. ಗರ್ಭಿಣಿ ಇದು ಗರ್ಭಾಪಾತ, ಅವಧಿಪೂರ್ವ ಪ್ರ ತೂಕದ ಶಿಶುಜನನಗಳಂತಹ ಸಂಕಟಗಳನ್ನು ತ ಸಂದೇಶದಲ್ಲಿ ಉಲ್ಲೇಖಿಸಿದಂತೆ ಸಿಂಧೂರ ನಿಯಂತ್ರಿಸುವುದಿರಲಿ ಸೀಸದ ವಿಷಕಾರತೆಯಿಂ ಖಿನ್ನತೆ, ಆತಂಕಗಳಂತಹ ಮನೋವ್ಯಾಧಿಗೆ ತು ಜ್ಞಾನಾತ್ಮಕ ಸಾಮರ್ಥ್ಯದಲ್ಲಿ (c performance) ಕುಂಠಿತತೆ ಮತ್ತು ಮನ ಲಕ್ಷಣಗಳಿಗೆ (psychiatric sy ಈಡಾಗುವ ಅಪಾಯವೇ ಹೆಚ್ಚು, ಮ ಪಾಯಿಸನಿಂಗ್ (ಸೀಸದ ವಿಷಕಾರತೆ) ನಿಂದ deficit hyperactivity disorder social behaviour ಗಳು ಕಾಣಿಸಿಕೊಳ ವೈದ್ಯ ಲೋಕವೇ ದೃಢಪಡಿಸಿದೆ.

ಸೀಸದ ಅಪಾಯತೆಯನ್ನು ಮನಗಂಡ ಆಹಾರ ಮತ್ತು ಔಷಧ ನಿಯಂತ್ರಣ ಮಂಡಳಿ and Drug Administration) 200 ತಯಾರಕರಿಂದ ಸಿಂಧೂರವನ್ನು ಹಿಂಪಡೆದಿದ್ದನ್ನು ನಾವಿಲ್ಲಿ ಸ್ಮರಿಸಿಕೊಳ್ಳಬಹುದು.





ಮೂಢನಂಬಿಕೆ ವಿರುದ್ಧ ಧ್ವನಿ ಎತ್ತಿದ ಚೆನ್ನಬಸವಣ್ಣನವರು

ತದಿಂದ ಸುಖದುಃಖಗಳು ಬರುತಿಹವೆಂದರಿಯದೆ
ಗಳಿಗೆ ರೋಗ ದಾರಿದ್ರ್ಯ ಅಪಜಯಂಗಳು ಬರುತ್ತಿರಲು
ಮುಗಿದು ಕಾಣಿಕೆಯನಿಕ್ಕಿ ತನ್ನ ಹೆಸರ ಹೇಳಿ
ಬಲ ಚಂದ್ರಬಲ ಬೃಹಸ್ಪತಿಬಲ ನವಗ್ರಹಬಲವ
ವನಿಗೆ ಎಲ್ಲಿಯದೋ ಭಕ್ತಿ?
ಜ್ಞಾನವುಳ್ಳವನಾದಡೆ
ಮುನೀಶ್ವರನ ಹೆಂಡತಿ ಅಹಲ್ಯಾದೇವಿಗೆ ಮೋಹಿಸಿ
ಮ ಶಾಪದಿಂದ ಕುಷ್ಠದೊಳಗಿಹನೆ?
ದಕ್ಷನ ಯಾಗದಲ್ಲಿ ಹೋಗಲಾಡಿಸಿಕೊಂಬನೆ?
ಜ್ಞಾನವುಳ್ಳವನಾದಡೆ ಗುರುವಿನ ಹೆಂಡತಿಗೆ ಅಳುಪಿ
ಯ್ದು
ವದಲ್ಲಿ ಅಳಲುತಿಹನೆ?
ಜ್ಞಾನವುಳ್ಳವನಾದಡೆ ಸಕಲ ಜ್ಯೋತಿಷ್ಯಗಳ ನೋಡಿ
ವಾದ ಹೆಂಡತಿ ರೋಹಿಣಿದೇವಿಯ
ತ್ತಿಕೊಂಡು ಹೋಹಾಗ ಸುಮ್ಮನಿದ್ದುದು ಏನು ಜ್ಞಾನ?
ಜ್ಞಾನವುಳ್ಳವನಾದಡೆ ಕುಂಟನಾಗಿ ಸಂಕೋಲೆ ಬೀಳ್ವನೆ?
ಕಾರಣ ತಮಗೆ ಮುಂಬಹ ಸುಖದುಃಖಂಗಳನರಿಯದವರು
ಸ್ಪತಿ ಸುಖದುಃಖಂಗಳ ಮೊದಲೇ ಅರಿಯರು.
ಯ ಮತದಿಂದೆ ದ್ವಾರಾವತ ನೀರಲ್ಲಿ ನೆರೆದು
ದಿನಾರು ಸಾವಿರ ಸ್ತ್ರೀಯರ ಹೊಲೆಬೇಡರು ಸೆರೆಯನೊಯ್ದರು.
ಮನ ಹೆಂಡತಿ ಸೀತಾಂಗನೆ ಸೆರೆಯಾದಳು.
ತಮತಮಗೆ ಮುಂದೆ ಬಹ ಅಪಜಯಂಗಳನರಿಯದ ಕಾರಣ
ಸ್ಪತಿ ಜ್ಞಾನಿಯ ಮತದಿಂದೆ, ಅಭಾಪ ಜೋಯಿಸರ ಮಾತ ಕೇಳಿ
ಅಮಾವಾಸೆಯಲ್ಲಿ ಉಪವಾಸವಿದ್ದು
ವುಳ್ಳ ಶುಭಮುಹೂರ್ತದಲ್ಲಿ ಅರಳಿಯ ಮರಕ್ಕೆ ನೀರ ಹೊಯ್ದು
ಸುತ್ತಿ ವಿಪ್ರಜೋಯಿಸರ್ಗೆ ಹೊನ್ನು ಹಣವ ಕೊಟ್ಟಡೆ
ತೆಂಬ ಅನಾಚಾರಿಯ ಮಾತ ಕೇಳಲಾಗದು.
ನ ಕೃತೇ ಲಗ್ನೇ ವನೇ ರಾಮೇಣ ವಾಸಿತೇ।
ಲ್ಯೆ ಪ್ರಧಾನೇ ತು ಕಿಂ ಕರೋತಿ ಶುಭಗ್ರಹಃ॥" ಇಂತೆಂದುದಾಗಿ
ಟಕವ ಹೊನ್ನು ಹೆಣ್ಣು ಶುಭಲಗ್ನದಿಂದೆ
ನೆಂದಡೆ ಹೋಗಲರಿಯದು.
ದ ಮದ್ದು ಕೊಟ್ಟೇನು, ಅಶನವ ನೀಡೆಂಬಂತೆ;
ಮದ್ದು ಕೊಟ್ಟೇನು ತೊರೆಯ ದಾಂಟಿಸೆಂಬಂತೆ;
ಕೈಯ ಕುರುಡ ಹಿಡಿದು ಹಾದಿಯ ತೋರುವಂತೆ:
ಚಿಕೆ ಇಲ್ಲದೆ ವಿಪ್ರರ ಕೈಯ ಲಗ್ನವ ಕೇಳಲಾಗದು.
ವರಿಗೆ ನಿಮ್ಮ ಬಲವೇ ಬಲವಯ್ಯಾ
ಚೆನ್ನಸಂಗಮದೇವಾ.


–ಚೆನ್ನಬಸವಣ್ಣ

ತ ದೇಶದಲ್ಲಿ ವಿಚಾರವಾದಕ್ಕೆ ರಾಮಾಯಣ ಮಹಾಭಾರತದಷ್ಟೇ ದೆ. ಮಹಾಭಾರತದಲ್ಲಿ ಚಾರ್ವಾಕ (ಸುಂದರವಾಗಿ ಮಾತನಾಡುವವರು) ಕರೆಸಿಕೊಂಡ ಲೋಕಾಯತು (ಲೋಕಪ್ರಿಯರು) ಮಹಾಭಾರತ ಉಂಟಾಗುವ ಜೀವಹಾನಿಯ ಕುರಿತು ಕೌರವ ಪಾಂಡವರಿಗೆ ದರೂ ಪ್ರಯೋಜನವಾಗಲಿಲ್ಲ, ಶಾಂತಿಗಾಗಿ ವಾದಿಸುತ್ತ ಯುದ್ಧವಿರೋಧಿ ತಾಳಿದ್ದ ಒಬ್ಬ ಚಾರ್ವಾಕನನ್ನು ಕೌರವ ಪಾಂಡವರು ಸೇರಿಯೇ ಮಾಡಿದ ಪ್ರಸಂಗ ಮಹಾಭಾರತದಲ್ಲಿದೆ.

ರ್ವಾಕರ ನಂತರ ಬಂದ ಅಜ್ಞೇಯವಾದಿ ಬುದ್ಧ, ಏಕೇಶ್ವರವಾದಿ ಶರಣರು, ದಾಸರು, ಸಂತರು, ಸೂಫಿ ಸಂತರು ಮತ್ತು ಅನುಭಾವಿ ಮೊದಲಾದವರು ಲೌಕಿಕ ಬದುಕಿನಲ್ಲಿ ವಿಚಾರವಾದವನ್ನೇ ಎತ್ತಿ ಆದರೂ ಮೂಢನಂಬಿಕೆಗಳು ಭಾರತದ ಎಲ್ಲ ಧರ್ಮಗಳ ಜನರ ಮನಸ್ಸಿನಲ್ಲಿ ಮನೆ ಮಾಡಿವೆ. ಬಹುಪಾಲು ರಾಜಕಾರಣಿಗಳು, ನಟನಟಿಯರು, ಅಧಿಕಾರಿಗಳು, ಶ್ರೀಮಂತರು ಮತ್ತು ಬಡವರು ಬಿಕೆಗಳನ್ನು ತಮ್ಮ ಬದುಕಿನಲ್ಲಿ ಹಾಸುಹೊಕ್ಕಾಗಿಸಿಕೊಂಡಿದ್ದಾರೆ. ಸರದ ಮಾಧ್ಯಮಗಳು ದಿನನಿತ್ಯ ಮೂಢನಂಬಿಕೆಗಳನ್ನು ತಮ್ಮ ಎತ್ತಿ ಹಿಡಿಯುತ್ತಲೇ ಇವೆ. ಮೂಢನಂಬಿಕೆಗಳನ್ನು ಜನಮನದಲ್ಲಿ ಹೋಗುವುದು ಉಗ್ರಗಾಮಿಗಳಿಗೆ, ಮೂಲಭೂತವಾದಿಗಳಿಗೆ, ವಾದಿಗಳಿಗೆ, ಜಾತಿವಾದಿಗಳಿಗೆ, ರತ್ನಪಡಿ ವ್ಯಾಪಾರಿಗಳಿಗೆ, ವಿವಿಧ ರಿಗೆ, ಸಿನಿಮಾ ಮಂದಿಗೆ ಮತ್ತು ಅಜ್ಞಾನದ ಮತ್ತು ದ್ವೇಷದ ರಾಜಕೀಯದಲ್ಲಿ ಬೇಳೆ ಬೇಯಿಸಿಕೊಳ್ಳಬೇಕೆಂಬ ಹಪಾಪಿ ಗಳಿಗೆ ಅಪಥ್ಯವಾಗಿದೆ.

ಮತ್ತು ಬೌದ್ಧರ ನಂತರ ಮೂಢನಂಬಿಕೆಗಳನ್ನು ಘೋರವಾಗಿ ಸಿದವರು 12ನೇ ಶತಮಾನದ ವಚನಕಾರರು. ಆ ವಚನಕಾರರಲ್ಲಿ ಸೋದರಳಿಯನಾದ ಚೆನ್ನಬಸವಣ್ಣನವರನ್ನು ಅವಿರಳಜ್ಞಾನಿ ಎಂದೂ ಚಕ್ರವರ್ತಿ ಎಂದೂ ಕರೆಯುತ್ತಾರೆ. ಲಿಂಗವಂತ ಧರ್ಮದ ಗಳನ್ನು ಸಿದ್ಧಪಡಿಸಿದವರೇ ಚೆನ್ನಬಸವಣ್ಣನವರು. ಅವರು ಬದುಕಿನ ದ ಮೂಢನಂಬಿಕೆಗಳನ್ನು ವಿರೋಧಿಸುತ್ತ ವೈದಿಕರ ಕುತ್ಸಿತತೆಗಳನ್ನು ಬಯಲಿಗೆಳೆದಿದ್ದಾರೆ. ಆ ಕಾಲದಲ್ಲಿ ಕೂಡ ಲಿಂಗವಂತ ಧರ್ಮದಲ್ಲಿ ನುಸುಳಿದಂಥ ಮೂಢನಂಬಿಕೆಗಳ ಬಗ್ಗೆಯೂ ಎಚ್ಚರಿಸಿದ್ದಾರೆ. ಸದ್ಭಕ್ತರಾದವರಿಗೆ, ಅವರ ಬಲವೇ ಬಲ ಹೊರತಾಗಿ ಹೊರಗಿಣ ಯಾವುದೇ ಅಗೋಚರ ಶಕ್ತಿ ಅವರಿಗೆ ಬಲವನ್ನು ಕೊಡಲು ಸಾಧ್ಯವಿಲ್ಲ ಎಂಬುದನ್ನು ಅವರು ಸ್ಪಷ್ಟಪಡಿಸಿದ್ದಾರೆ.

ಮೂಢನಂಬಿಕೆಗಳ ಬೆನ್ನುಹತ್ತುವವರನ್ನು ಚೆನ್ನಬಸವಣ್ಣನವರು ನರಗುರಿಗಳು ಎಂದು ಕರೆದಿದ್ದಾರೆ. ಸ್ವಂತ ವಿಚಾರ ಮಾಡುವುದನ್ನು ಬಿಟ್ಟು ತಮ್ಮ ಮೆದುಳನ್ನು ಸುಳ್ಳು ಭವಿಷ್ಯ ಹೇಳುವ ಧೂರ್ತರ ಕೈಯಲ್ಲಿ ಕೊಟ್ಟು ತಲೆಯಲ್ಲಿ ಸಗಣಿ ತುಂಬಿಕೊಂಡು ಮೂಢಮತಿಗಳಾಗಿ ಬದುಕುವ ಜನರು ಮಾನವರೂಪಿ ಕುರಿಗಳಾಗದೆ ಇನ್ನೇನು ಆಗಲು ಸಾಧ್ಯ? (ಕುರಿಗಳು ಎಂದೂ ಮೂಢನಂಬಿಕೆಯಿಂದ ಬದುಕುವುದಿಲ್ಲ. ಅವು ಆಹಾರ ಸಿಗುವ ಕಡೆಗೆ ಹೋಗುತ್ತವೆ. ಪ್ರಯತ್ನಪಟ್ಟು ಹೊಟ್ಟೆ ಹೊರೆದುಕೊಂಡು ಬದುಕುತ್ತವೆ. ಆದರೆ ನರಗುರಿಗಳು ಕುರಿಗಳಿಗಿಂತಲೂ ಆಖರಿಯಾಗಿವೆ.) ಇಂಥ ನರಗುರಿಗಳ ಕುರಿತು ಚೆನ್ನಬಸವಣ್ಣನವರು ವಿಚಾರಪ್ರಚೋದಕ ವಚನಗಳನ್ನು ಬರೆದಿದ್ದಾರೆ.



ನರಗುರಿಗಳು ಎಂಥ ಮೂಢರು ಎಂದರೆ 'ಹಸಿವು ಆಗದಾಲದಂಥ ಔಷಧಿಯನ್ನು ಕೊಡುತ್ತೇನೆ ಆಹಾರ ಕೊಡು' ಎಂದು ಮೋಸ ಮಾಡುವ ಭವಿಷ್ಯಕಾರರು ಹೇಳಿದರೆ, 'ಆ ಔಷಧಿಯಿಂದ ನೀನೇಕೆ ಹಸಿವನ್ನು ಹಿಂಗಿಸಿಕೊಳ್ಳುವುದಿಲ್ಲ' ಎಂದು ಪ್ರಶ್ನಿಸುವುದಿಲ್ಲ. 'ಈ ನದಿಯ ದಾಟಿಸು; ನಿನಗೆ ಆಕಾಶದಲ್ಲಿ ಹಾರುವಂಥ ಔಷಧಿ ಕೊಡುತ್ತೇನೆ' ಎಂದು ಧೂರ್ತ ಭವಿಷ್ಯಕಾರ ಹೇಳಿದಾಗ ಅವನನ್ನು ದಾಟಿಸಲು ದೋಣಿ ಸಿದ್ಧಪಡಿಸುವ ಬದಲಿಗೆ 'ನೀನೇ ಆ ಔಷಧಿ ಕುಡಿದು ಹಾರುತ್ತ ನದಿ ದಾಟು' ಎಂದು ಹೇಳವಷ್ಟಾದರೂ ಬುದ್ಧಿಯನ್ನು ನರಗುರಿಗಳು ಕಳೆದುಕೊಂಡಿದ್ದಾರೆ ಎಂದು ಚೆನ್ನಬಸವಣ್ಣನವರು ಈ ವಚನದಲ್ಲಿ ವಿಷಾದ ವ್ಯಕ್ತಪಡಿಸಿದ್ದಾರೆ.

ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಮನೋವೈಜ್ಞಾನಿಕ ದೃಷ್ಟಿಯಿಂದಲೂ ಈ ವಚನ ಮಹತ್ವಪೂರ್ಣವಾಗಿದೆ. ಮಾನವರು ವಿಚಾರವಾದ ಬುನಾದಿ ಮೇಲೆ ನಿಂತು ತಮ್ಮ ದೈಹಿಕ, ವೈಚಾರಿಕ, ಆತ್ಮಿಕ ಮತ್ತು ವ್ಯವಹಾರ ಜ್ಞಾನದ ಬಲದೊಂದಿಗೆ ದೈನಂದಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕೆ ಹೊರತು ಕಾಗೆಗುಬ್ಬಿ ಕಥೆಗಳಾದ ಪುರಾಣಗಳಲ್ಲಿನ ದಂತೆಕಥೆಗಳನ್ನು ನಂಬಿ ಬದುಕಲಿಕ್ಕಾಗದು ಎಂಬುದನ್ನು ಚೆನ್ನಬಸವಣ್ಣನವರು ಮನೋಜ್ಞವಾಗಿ ತಿಳಿಸಿದ್ದಾರೆ.

ಶರೀರವೆಂದಮೇಲೆ ರೋಗರುಜಿನಗಳು ಬಂದೇ ಬರುತ್ತವೆ. ಆಗ ಮೂಢರು ವೈದ್ಯರ ಬಳಿ ಹೋಗದೆ ವೈದಿಕರಿಗೆ ಕೈಮುಗಿಯುತ್ತ, ಕಾಣಿಕೆ ನೀಡುತ್ತ ಅವರ ಮುಂದೆ ಕೈಕಟ್ಟಿಕೊಂಡು ತಮಗೆ ಸೂರ್ಯಬಲ, ಚಂದ್ರಬಲ, ಬೃಹಸ್ಪತಿಬಲ ಮತ್ತು ನವಗ್ರಹಬಲಗಳು ಇವೆಯಾ ಎಂದು ಕೇಳುತ್ತಾರೆ. ಇಲ್ಲದಿದ್ದರೆ ಆ ಬಲಗಳ ವಶೀಕರಣಕ್ಕಾಗಿ ಏನೇನು ಮಾಡಬೇಕು ಎಂದು ಕೇಳುತ್ತ ಶೋಷಣೆಗೆ ಮತ್ತು ಅಜ್ಞಾನಕ್ಕೆ ಒಳಗಾಗುತ್ತಾರೆ. ಹೀಗೆ ಮೂಢತನದಲ್ಲಿ ಬದುಕುವವರು ಭಕ್ತರಾಗುವುದಿಲ್ಲ ಎಂದು ಚೆನ್ನಬಸವಣ್ಣನವರು 'ಭಕ್ತ' ಶಬ್ದಕ್ಕೆ ಹೊಸ ಭಾಷ್ಯ ಬರೆದಿದ್ದಾರೆ.

ಅಂಗಿರಸ ಮುನಿಯ ಮಗ ಬೃಹಸ್ಪತಿ ದೇವತೆಗಳ ಗುರುವಾಗಿದ್ದವನು. ಈತನ ಹೆಂಡತಿ ತಾರಾದೇವಿ. ಬೃಹಸ್ಪತಿಯ ಶಿಷ್ಯನಾಗಿದ್ದ ಚಂದ್ರನು ಗುರುವಿನ ಹೆಂಡತಿ ತಾರಾದೇವಿಯನ್ನೇ ಅಪಹರಿಸಿಕೊಂಡು ಹೋದ. ಇವರಿಬ್ಬರ ಸಂಸರ್ಗದಿಂದ ಬುಧ ಎಂಬ ಮಗನೂ ಜನಿಸಿದ. ದೇವತೆಗಳಿಗೆ ಜ್ಞಾನ ಕೊಡುವ ಬೃಹಸ್ಪತಿ ಪಂಚಾಂಗವನ್ನು ನೋಡಿಯೇ ತಾರಾದೇವಿಯನ್ನು ಮದುವೆಯಾಗಿದ್ದರೂ ಪರಿಸ್ಥಿತಿ ಹೀಗೇಕಾಯಿತು ಎಂಬುದು ಚೆನ್ನಬಸವಣ್ಣನವರು ಒಡ್ಡಿದ ಪ್ರಶ್ನೆಯಾಗಿದೆ. ಇಂಥ ಅನೇಕ ಪ್ರಸಂಗಗಳನ್ನು ಈ ವಚನದಲಿ ದಾಖಲಿಸಿ ಭ್ರಮೆಯ ಲೋಕವನ್ನು ಧ್ವಂಸ ಮಾಡುವ ಮಾರ್ಗವನ್ನು ಸೂಚಿಸಿದ್ದಾರೆ.

ಗೌತಮ ಮುನಿಯ ಹೆಂಡತಿ ಅಹಲ್ಯಾದೇವಿಯ ಪಾಡೇನಾಯಿತು? ಬೃಹಸ್ಪತಿಯ ಮಾರ್ಗದರ್ಶನದ ಮೇಲೆಯೆ ನಿರ್ಮಾಣವಾದ ದ್ವಾರಕಾನಗರ ಸಮುದ್ರದ ತಳ ಸೇರಿತೇಕೆ. ಕೃಷ್ಣನ 16 ಸಾವಿರ ಸ್ತ್ರೀಯರ ಪರಿಸ್ಥಿತಿ ಏನಾಯಿತು? ಸೀತೆ ಏಕೆ ಸೆರೆವಾಸ ಅನುಭವಿಸಬೇಕಾಯಿತು? ಈ ಎಲ್ಲ ಪಂಚಾಂಗ ನಂಬಿದವರ ಭವಿಷ್ಯ ಹೀಗೇಕಾಯಿತು? ಎಂದು ಪ್ರಶ್ನಿಸುವ ಚೆನ್ನಬಸವಣ್ಣನವರು, ಇವರೆಲ್ಲ ತಮಗೆ ಮುಂಬರುವ ಅಪಜಯಂಗಳನ್ನು ಅರಿಯದ ಕಾರಣ ಬೃಹಸ್ಪತಿಯ ಮಾರ್ಗದರ್ಶನದಿಂದಾಗಿ ಸುಳ್ಳು ಜ್ಯೋತಿಷಿಗಳ ಮಾತು ಕೇಳಿ ತೊಂದರೆಗೊಳಗಾದರು ಎಂದಿದ್ದಾರೆ.

ಹುಣ್ಣಿಮೆ, ಅಮಾವಾಸೆಯಲ್ಲಿ ಉಪವಾಸವಿದ್ದು, ಗ್ರಹಬಲ ಬರುವುದೆಂಬ ಶುಭಗಳಿಗೆಯಲ್ಲಿ ಅರಳಿಯ ಮರಕ್ಕೆ ನೀರು ಹಾಕಿ, ನೂಲು ಸುತ್ತಿ ಜ್ಯೋತಿಷಿಗಳಿಗೆ ಧನ ಕನಕ ಕೊಟ್ಟರೆ ಅನಿಷ್ಟ ಹೋಗುವುದೆಂಬ ಅನಾಚಾರಿಯ ಮಾತು ಕೇಳಲಾಗದು ಎಂದು ಚೆನ್ನಬಸವಣ್ಣನವರು ಎಚ್ಚರಿಸಿದ್ದಾರೆ. ಕಂಟಕ ನಿವಾರಣೆಗಾಗಿ ಕರ್ಮಸಿದ್ಧಾಂತವನ್ನು ನಂಬದೆ ಕಾಯಕ ಸಿದ್ಧಾಂತವನ್ನು ನಂಬಬೇಕು ಎಂದು ಸೂಚಿಸಿದ್ದಾರೆ.

ಗುರುವಿಂದಾಯಿತ್ತೆಂಬೆನೆ? ಗುರುವಿಂದಾಗದು.
ಲಿಂಗದಿಂದಾಯಿತ್ತೆಂಬೆನೆ? ಲಿಂಗದಿಂದಾಗದು.
ಜಂಗಮದಿಂದಾಯಿತ್ತೆಂಬೆನೆ? ಜಂಗಮದಿಂದಾಗದು.
ಪಾದೋದಕದಿಂದಾಯಿತ್ತೆಂಬೆನೆ? ಪಾದೋದಕದಿಂದಾಗದು.
ಪ್ರಸಾದದಿಂದಾಯಿತ್ತೆಂಬೆನೆ? ಪ್ರಸಾದದಿಂದಾಗದು.
ತನ್ನಿಂದ ಅಹುದು, ತನ್ನಿಂದ ಹೋಹುದು ಕಾಣಾ
ಕೂಡಲಚೆನ್ನಸಂಗಮದೇವಾ.

–ಚೆನ್ನಬಸವಣ್ಣ

ಗುರು ಲಿಂಗ ಜಂಗಮ ಪಾದೋದಕ ಪ್ರಸಾದದಿಂದ ಕೂಡ ನಮ್ಮ ದೈನಂದಿನ ಬದುಕಿನ ಅನಿಷ್ಟಗಳು ನಿವಾರಣೆಯಾಗುವುದಿಲ್ಲ. ನಮ್ಮ ಅನಿಷ್ಟಗಳಿಗೆ ನಮ್ಮ ವ್ಯವಸ್ಥೆ ಮತ್ತು ನಾವು ಕಾರಣರಾಗಿರುತ್ತೇವೆ. ಮಾನವರಿಂದ ಎದುರಾಗುವ ಅನಿಷ್ಟಗಳು ಮಾನವರಿಂದಲೇ ನಿವಾರಣೆಯಾಗಬೇಕಾಗುತ್ತದೆ. ನಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ನಾವು ನಿರಂತರ ಯತ್ನಿಸಬೇಕು. ಈ ಬದುಕಿನ ಹೋರಾಟವನ್ನು ನಾವು ಸ್ವೀಕರಿಸದೆ ಇದ್ದಾಗ ಅವ್ಯಕ್ತ ಶಕ್ತಿಯ ಮೇಲೆ ಭರವಸೆಯನ್ನಿಟ್ಟುಕೊಂಡು ಕೂಡುತ್ತೇವೆ. ದೇವರೇ ಬಂದು ನಮ್ಮ ಕೆಲಸ ಮಾಡಿಕೊಡಬೇಕಾದರೆ ನಮಗೆ ತಲೆ, ಕೈಕಾಲು ಮುಂತಾದ ಅಂಗಾಂಗಗಳಿದ್ದು ಪ್ರಯೋಜನವೇನು ಎಂಬ ಭಾವವನ್ನು ಈ ವಚನದಲ್ಲಿ ತುಂಬಿದ್ದಾರೆ. ಅಂತೆಯೆ 'ತನ್ನಿಂದ ಅಹುದು, ತನ್ನಿಂದ ಹೋಹುದು ಕಾಣಾ' ಎಂದು ಮಾರ್ಗದರ್ಶನ ಮಾಡುತ್ತಾರೆ.

ಲಿಂಗ ಬಿದ್ದಿತು, ಲಿಂಗ ಬಿದ್ದಿತೆಂಬರಯ್ಯಾ
ಲಿಂಗ ಬೀಳಲು ಬಲ್ಲುದೆ? ಭೂಮಿ ತಾಳಲು ಬಲ್ಲುದೆ?
ಕಮ್ಮಾರ ಕಡೆದು ಮಾರಿದ, ಬೋಗಾರ ತಂದು ಮಾರಿದ,
ಗುರು ಕೊಂಡು ಮಾರಿದ ಈ ಲಿಂಗ ಬಿದ್ದಡೆ ಸಮಾಧಿಯುಂಟೆ?
ಲಿಂಗವ ಕಟ್ಟಿದ ಗುರು ಸತ್ತಡೆ ಸಮಾಧಿಯನೇಕೆ ಕೊಳ್ಳರೊ
ಕೂಡಲಚೆನ್ನಸಂಗಮದೇವಾ?


–ಚೆನ್ನಬಸವಣ್ಣ

ಕೈಯಲ್ಲಿನ ಇಷ್ಟಲಿಂಗ ಬಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುವಂಥ ಭಾವುಕರು ಕೂಡ ಲಿಂಗವಂತ ಸಮಾಜದಲ್ಲಿ ಇದ್ದರು. ಇಂಥ ಮೂಢನಂಬಿಕೆಯನ್ನು ಚೆನ್ನಬಸವಣ್ಣನವರು ಪ್ರಬಲವಾಗಿ ವಿರೋಧಿಸಿದ್ದಾರೆ. ಇಷ್ಟಲಿಂಗವು ಜಗನ್ನಿಯಾಮಕನ ಸಂಕೇತ ಮಾತ್ರ. ಇಷ್ಟಲಿಂಗ ಬಿದ್ದರೆ 'ದೇವರೇ ಬಿದ್ದ' ಎಂಬುದು ಮೂಢತನದ ಪರಮಾವಧಿ. ದೇವರು ಬಿದ್ದರೆ ಈ ಭೂಮಿ ತಾಳಿಕೊಳ್ಳಲು ಸಾಧ್ಯವೆ ಎಂದು ಅವರು ಪ್ರಶ್ನಿಸುತ್ತಾರೆ. ಗುರು ಕೊಂಡು ಮಾರಿದ ಲಿಂಗ ಬಿದ್ದರೆ ಜೀವ ಕಳೆದುಕೊಳ್ಳಬೇಕೆ? ಹಾಗಾದರೆ ಲಿಂಗ ಕಟ್ಟಿದ ಗುರು ಸತ್ತಾಗ ಏಕೆ ಜೀವ ಕಳೆದುಕೊಳ್ಳುವುದಿಲ್ಲ ಎಂದು ಚೆನ್ನಬಸವಣ್ಣನವರು ದುರ್ಬಲ ಮನದವರಿಗೆ ಛೇಡಿಸುತ್ತಾರೆ.

ಲಿಂಗಭಕ್ತನ ವಿವಾಹದಲ್ಲಿ ಶಿವಗಣಂಗಳಿಗೆ
ವಿಭೂತಿವೀಳೆಯವ ಕೊಟ್ಟು ಆರೋಗಣೆಯ ಮಾಡಿಸಿ
ಶಿವಗಣಂಗಳು ಸಾಕ್ಷಿಯಾಗಿ ಪ್ರಸಾದವನಿಕ್ಕುವುದೆ ಸದಾಚಾರವಲ್ಲದೆ
ವಾರ ತಿಥಿ ಸುಮುಹೂರ್ತವೆಂಬ ಲೌಕಿಕದ ಕರ್ಮವ ಮಾಡಿದಡೆ
ನಿಮ್ಮ ಸದ್ಭಕ್ತರಿಗೆ ದೂರವಯ್ಯಾ ಕೂಡಲಚೆನ್ನಸಂಗಮದೇವಾ.

–ಚೆನ್ನಬಸವಣ್ಣ

ಮಕ್ಕಳ ಮದುವೆ ಮಾಡುವಾಗ ಪಂಚಾಂಗ ಕೇಳುತ್ತ ಜ್ಯೋತಿಷಿಗಳು ಹೇಳಿದ ಹಾಗೆ ಖರ್ಚು ಮಾಡುತ್ತ ಸಾಲದ ಶೂಲಕ್ಕೇರಬೇಕಿಲ್ಲ. ಲಿಂಗಭಕ್ತನ ವಿವಾಹಕ್ಕೆ ಶಿವಭಕ್ತರನ್ನು ವಿಭೂತಿ ಕೊಡುವುದರ ಮೂಲಕ ಆಹ್ವಾನಿಸಬೇಕು. ಅವರ ಸಾಕ್ಷಿಯಾಗಿ ಮದುವೆ ಮಾಡಿ ಅವರಿಗೆ ಪ್ರಸಾದ ವ್ಯವಸ್ಥೆ ಮಾಡುವುದು ಸದಾಚಾರ. ಆದರೆ ವಾರ, ತಿಥಿ, ಸುಮುಹೂರ್ತ ಎಂಬ ಲೌಕಿಕದ ಮೂಢಾಚಾರಗಳಿಂದ ಕೂಡಿದ ಸಂಪ್ರದಾಯಗಳನ್ನು ಆಚರಿಸುವುದು ಸದ್ಭಕ್ತರ ಜೀವನಕ್ರಮಕ್ಕೆ ವಿರುದ್ಧವಾದುದು ಎಂದು ಚೆನ್ನಬಸವಣ್ಣನವರು ಎಚ್ಚರಿಸಿದ್ದಾರೆ.



■ ರಂಜಾನ್ ದರ್ಗಾ

ಇತ್ತೀಚೆಗ ಕಡಿದಾಳು ಶಾಮಣ್ಣನವರು ದಸರ ಹಬ್ಬವನ್ನು ಉದ್ಘಾಟಸಲು ನಿರಾಕರಿಸಿದರು. ರೈತರ ಸರಣಿ ಆತ್ಮಹತ್ಯಗಳು ಸಂಭವಿಸುತ್ತಿರುವ ಈ ಹೊತ್ತಿನಲ್ಲಿ ತಾನು ಇಂತಹ ಸಮಾರಂಭದಲ್ಲಿ ಭಾಗಿಯಾಗಲಾರೆ ಎಂದಿರುವ ಶಾಮಣ್ಣ ಕೆಲ ದಶಕಗಳ ಹಿಂದೆ ರೈತ ಹೋರಾಟಗಳಲ್ಲಿ ಮುಂಚೂಣಿಯಲ್ಲಿದ್ದವರು. ರೋಮಾಂಚನ ಹುಟ್ಟಿಸುವ ಅವರ ಹಲವು ನೆನಪುಗಳನ್ನು ಇಲ್ಲಿ ನಮ್ಮ ಓದುಗರಿಗಾಗಿ ನೀಡಿದ್ದೇವೆ.

ದಸರೆಯಲ್ಲಿ ಲಾಠಿ ಏಟು ತಿಂದಾಗ...


ಲೋಹಿಯಾ ಅವರ ಅಂಗ್ರೇಜಿ ಹಟಾವೋ ಚಳವಳಿ ಪ್ರಖರವಾಗಿದ್ದ ಸಂದರ್ಭ ಅದು. ಅದರಿಂದ ಪ್ರೇರೇಪಿತಗೊಂಡಿದ್ದ ಕೋಣಂದೂರು ಲಿಂಗಪ್ಪ ಅದಾಗ್ಲೇ ಕುವೆಂಪು ಬೇಂದ್ರೆ ಪದ್ಯಗಳನ್ನೆಲ್ಲ ಒದ್ಕಂಡು ಆಡಳಿತ ಭಾಷೆ ಕನ್ನಡವಾಗಬೇಕು. ಕನ್ನಡನಾಡಿನಲ್ಲಿ ಎಲ್ಲ ವಿಷಯದಲ್ಲೂ ಕನ್ನಡಕ್ಕೆ ಅಗ್ರಸ್ಥಾನ ದೊರಕಿಸುವ ನಿಟ್ಟಿನಲ್ಲಿ ಅಂಗ್ರೇಜಿ ಹಟಾವೋ ಮಾದರಿಯಲ್ಲಿ ಚಳವಳಿ ಪ್ರಾರಂಭಿಸಲು ಯೋಜಿಸಿ ಅದಕ್ಕಾಗಿ ಜನರನ್ನ ಸಂಘಟಿಸ್ತಿದ್ದರು. ಲಿಂಗಪ್ಪನ ಕಾರ್ಯಕ್ರಮಗಳಿಗೆ ಕಾರ್ಯಕರ್ತರು ಅಂದ್ರೆ ನಾನು, ತೇಜಸ್ವಿ ಕೆ.ಎಚ್.ಶ್ರೀನಿವಾಸ್, ಪ್ರಭಾಕರ ಎಲ್ಲ ಸೇರಿ ಒಂದು ಆರೇಳು ಜನ. ಕ್ರಾಫರ್ಡ್ ಹಾಲ್ ಎದುರಿನ ಕೌಟಿಲ್ಯ ಸ್ಥಳದಲ್ಲಿರುವ ಓರಿಯಂಟಲ್ ಲೈಬ್ರರಿಯ ಎದುರಿನ ಜಗುಲಿಯಲ್ಲಿ ಲಿಂಗಪ್ಪನ ನೇತೃತ್ವದಲ್ಲಿ ನಾವೆಲ್ಲ ಕನ್ನಡ ಹೋರಾಟಗಾರರು ಸೇರಿ ಮೀಟಿಂಗ್ ನಡೆಸ್ತಿದ್ವಿ.

ಹೀಗೊಂದು ಮೀಟಿಂಗ್‌ನಲ್ಲಿ ಆಡಳಿತ ಭಾಷೆ ಕನ್ನಡ ಆಗೋ ನಿಟ್ಟಿನಲ್ಲಿ ಪ್ರತಿಭಟನಾರ್ಥವಾಗಿ ಬೇರೆ ಭಾಷೆಗಳ ಬೋರ್ಡ್‌ಗಳಿಗೆ ಟಾರು ಬಳಿಯೋದು ಅಂತ ನಿರ್ಣಯ ಕೈಗೊಂಡ್ವಿ. ಮೈಸೂರಲ್ಲೇನೋ ಇದನ್ನ ನಾವು ಕಾರ್ಯಗತ ಮಾಡ್ತೀವಿ ಬೇರೆ ಊರುಗಳಲ್ಲಿ ಯಾರಿಂದ ಟಾರು ಬಳಿಸೋದು ಅನ್ನೋ ಪ್ರಶ್ನೆ ಬಂದಾಗ, ಪರಿಚಿತರಿಗೆ, ವಿವಿಧ ಸಂಘಟನೆಯ ಪ್ರಮುಖರಿಗೆ ಟಾರ್ ಬಳಿಯೋ ಚಳವಳಿ ಕುರಿತು ಕಾರ್ಡ್‌ನಲ್ಲಿ ವಿಷಯ ಬರೆದು ತಿಳಿಸೋದು. ಅವರು ಅದನ್ನು ತಮ್ಮ ತಮ್ಮ ಊರುಗಳಲ್ಲಿ ಕಾರ್ಯಗತ ಮಾಡಲಿ ಅಂತ ಆಯ್ತು. ಒಬ್ಬೊಬ್ರು ತಲಾ ಹತ್ತು ಜನರಿಗೆ ಕಾರ್ಡ್ ಬರೆದು ಹಾಕೋ ನಿರ್ಧಾರಕ್ಕೆ ಬಂದ್ವಿ. ಅವತ್ತಿಂದ ಒಂದಿಷ್ಟು ದಿನ ಕಾರ್ಡ್ ಬರೆಯೋದೆ ನಮ್ಮ ಪಾಲಿನ ಮಹತ್ವದ ಕೆಲಸವಾಗಿತ್ತು. ನಮ್ಮಗಳ ಬಾಯಲ್ಲಿ ಬರೀ ಕಾರ್ಡ್ ಚಳವಳಿಯದೇ ಮಾತು.

ಮತ್ತೊಂದು ಮೀಟಿಂಗ್‌ನಲ್ಲಿ ಲಿಂಗಪ್ಪ ದಸರಾ ಸಂದರ್ಭದಲ್ಲಿ ಮಹಾರಾಜರನ್ನು ಚಿನ್ನದಂಬಾರಿಯಲ್ಲಿ ಕೂರಿಸಿ ಮೆರವಣಿಗೆ ಮಾಡೋದರ ವಿರುದ್ಧ ಪ್ರತಿಭಟನೆ ಮಾಡೋಣ ಅಂತ ಕರೆಕೊಟ್ಟು, ಅದಕ್ಕಾಗಿ ನಮ್ಮನ್ನೆಲ್ಲ ತಯಾರು ಮಾಡಿದರು. ಪ್ರಜಾಪ್ರಭುತ್ವ ದೇಶದಲ್ಲಿ ಈ ರೀತಿಯ ವ್ಯಕ್ತಿಪೂಜೆ ನಡೆಸೋಕೆ ಅವಕಾಶ ಕೊಡಬಾರದು ಅನ್ನೋದು ಲಿಂಗಪ್ಪನ ವಾದ. ನಾವೆಲ್ಲ ಲಿಂಗಪ್ಪನವರ ವಾದವನ್ನ ಒಪ್ಕಂಡು ಪ್ರತಿಭಟನೆಗೆ ತಯಾರಾದ್ವಿ.

ದಸರಾದ ದಿನ ಮಹಾರಾಜರ ಜಂಬೂಸವಾರಿ ಬಂಬೂ ಬಜಾರಿಗೆ ಪ್ರವೇಶ ಮಾಡ್ತಿರುವ ಸಂದರ್ಭದಲ್ಲಿ ಅಲ್ಲಿ ಸೇರಿದ್ದ ನಾವೊಂದಿಷ್ಟು ಜನ ಅದುವರೆಗೆ ಜೇಬಿನಲ್ಲಿ ಅಡಗಿಸಿಟ್ಟಿದ್ದ ಕಪ್ಪುಬಾವುಟ ಹೊರತೆಗೆದು ಧಿಕ್ಕಾರ ಕೂಗಲಾರಂಭಿಸಿದೆವು. ನಾನು ಕವಣೆಪಟ್ಟೆಯನ್ನು ರಾಜರ ಮೇಲೆ ಪ್ರಯೋಗಿಸಿದೆ. ಆ ಗದ್ದಲದಲ್ಲಿ ಅದರ ಗುರಿ ಸರಿಯಾಗದೆ ಅದು ಮಹಾರಾಜರ ಕಿರೀಟಕ್ಕೆ ತಾಗೋದು ಬಿಟ್ಟು ಪಕ್ಕದ ಕಂಬಕ್ಕೆ ತಾಕ್ತು ಇದರಿಂದ ಮಹಾರಾಜರೇನೋ ಬಚಾವಾದ್ರು ಆದರೆ ನಮ್ಮ ಗ್ರಹಚಾರಕ್ಕೆ ನಾವೆಲ್ಲಿ ಪ್ರತಿಭಟನೆಗೆ ಸೂಕ್ತ ಅಂತ ನಂಬಿ ನಿಂತಿದ್ದೆವೋ ಅಲ್ಲೆ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಬಂದೋಬಸ್ತ್ ಇತ್ತು. ನಾವು ಧಿಕ್ಕಾರ ಕೂಗಕ್ಕೆ ಶುರುಮಾಡಿ ಐದು ನಿಮಿಷವೂ ಆಗಿರ್ಲಿಲ್ಲ ಅಷ್ಟರಲ್ಲೆ ಚೆನ್ನಾಗಿ ನಡೀತಿರೋ ಮೆರವಣಿಗೆಯನ್ನು ದಿಕ್ಕು ತಪ್ಪಿಸಕ್ಕೆ ಈ ಹುಡುಗರು ಏನೋ ಕಿತಾಪತಿ ನಡ್ಸಿದ್ದಾರೆ ಅನ್ಕಂಡ ಪೊಲೀಸರು ನಮ್ಮನ್ನ ಹಿಡಿದು ಸರಿಯಾಗಿ ಲಾಠಿಯಲ್ಲಿ ನಾಲ್ಕು ಬಾರಿಸಿ ಪೊಲೀಸ್ ವ್ಯಾನಿಗೆ ತುಂಬ್ಕಂಡು ಹೋದರು. ಸರಿಯಾಗೇ ತದುಕಿದ್ರು ಮತ್ತೆ ಜೈಲಿಗೆ ಹಾಕಿ ಎಲ್ಲಿ ಮತ್ತೊಂದಿಷ್ಟು ಜಪ್ಪಾರೇನೋ ಅಂತ ಹೆದರಿಕೆ ಹುಟ್ಟಿ ಈ ಲಿಂಗಪ್ಪನವರ ಮಾತು ಕಟ್ಕಂಡು ಹಾಳಾದ್ವಿ ಅಂತ ಮನಸಲ್ಲೆ ಗೋಳಾಡೋಕೆ ಪ್ರಾರಂಭಿಸಿದ್ವಿ. ಆದರೆ ಪೊಲೀಸರು ಮತ್ತೆ ಹೊಡೀಲಿಲ್ಲ, ಸಂಜೆವರೆಗೂ ಸ್ಟೇಷನ್‌ನಲ್ಲಿ ಇಟ್ಕಂಡು ಏನೋ ಹುಡುಗಾಟಕ್ಕೆ ಮಾಡಿದ್ದಾರೆ ಅಂತ ಅನ್ನಿಸ್ತೇನೋ ಬಿಟ್ಟು ಕಳಿಸಿದ್ರು. ನಾವು ಪ್ರತಿಭಟನೆ ನಡೆಸಿದ ಮರುವರ್ಷವೇ ರಾಜರ ಅಂಬಾರಿಯಾತ್ರೆಯನ್ನು ಸರ್ಕಾರ ನಿಷೇಧಿಸಿತು. ಇದು ಕಾಕತಾಳೀಯವೆ ಆದ್ರೂ ನಮ್ಮ ಹೋರಾಟದಿಂದಲೇ ಜಂಬೂಸವಾರಿ ನಿಂತಿದ್ದು ಅಂತ ದೊಡ್ಡ ಕ್ರಾಂತಿ ಮಾಡಿದವರ ಹಾಗೆ ಸಾರಿಕೊಂಡು ತಿರುಗಲು ಪ್ರಾರಂಭಿಸಿದ್ವಿ.


ಇದೇ ಸಂದರ್ಭದಲ್ಲಿ ಅಂತ ಅನಿಸುತ್ತೆ ಪುಟ್ಟಪ್ಪನವರು 'ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುತ್ತದೆ. ಕನ್ನಡಕ್ಕಾಗಿ ಕೊರಳೆತ್ತು ಅಲ್ಲಿ ಪಾಂಚಜನ್ಯ ಮೊಳಗುತ್ತದೆ. ಕನ್ನಡಕ್ಕಾಗಿ ಕಿರು ಬೆರಳೆತ್ತಿದರೂ ಸಾಕು ಅದೇ ಗೋವರ್ಧನ



ಗಿರಿಯಾಗುತ್ತದೆ' ಎಂದು ಕರೆ ಕೊಟ್ಟರು. ಅವತ್ತಿಂದ ನಾನು ನನ್ನ ಬಲಗೈ ಕಿರು ಬೆರಳನ್ನು ಎತ್ತಿ ಹಿಡಿದುಕೊಂಡು ಓಡಾಡಲು ಪ್ರಾರಂಭಿಸಿದೆ. ಅದನ್ನು ನೋಡಿದವರೆಲ್ಲ ಯಾಕೆ ಕಿರು ಬೆರಳು ಎತ್ಕಂಡು ಓಡಾಡ್ತೀಯ ಎಂದು ಕೇಳೋರು. ಆಗ ನಾನು ಹೆಮ್ಮೆಯಿಂದ ಪುಟ್ಟಪ್ಪನವರು ಕನ್ನಡಕ್ಕಾಗಿ ಕಿರುಬೆರಳೆತ್ತು ಗೋವರ್ಧನಗಿರಿಯಾಗುತ್ತದೆ ಅಂದಿದ್ದಾರೆ ಅವರ ಮಾತನ್ನು ಪಾಲಿಸ್ತಿದ್ದೇನೆ ಅಂತಿದ್ದೆ. 'ಓಹೋ ಹಾಗಾ ನಾವೆಲ್ಲೋ ನಿಂಗೆ ನಂಬರ್ ಒನ್‌ಗೆ ಅವಸರ ಆಗಿದೆಯೇನೋ ಅನ್ಕಂಬಿಟ್ಟಿದ್ವಿ' ಅನ್ನೋರು. ನಂತರದ ದಿನದಲ್ಲಿ ನನ್ನಿಂದ ಪ್ರೇರೇಪಿತರಾಗಿ ಕಿರುಬೆರಳು ಎತ್ತಿ ಹಿಡ್ಕೊಂಡು ಓಡಾಡುವ ಕನ್ನಡ ಪ್ರೇಮಿಗಳ ಸಂಖ್ಯೆ ಜಾಸ್ತಿಯಾಗುತ್ತಾ ಹೋಯಿತು. ಹಿಂಗೆ ಜಾಸ್ತಿಯಾದರೆ ಕನ್ನಡಕ್ಕೆ ಅಪಾಯ ತಪ್ಪಿದ್ದಲ್ಲ ಅಂತ ಎಚ್ಚೆತ್ಕಂಡು ಈ ನನ್ನ ಕನ್ನಡ ಸೇವೆಯನ್ನು ನಿಲ್ಲಿಸಿದೆ.

'ಓ ರೈತ ಎಲ್ಲಿಗೆ? ಗುಂಡೂರಾವ್ ಜೈಲಿಗೆ

ನೀರಾವರಿ ಅಭಿವೃದ್ಧಿ ತೆರಿಗೆಯನ್ನು ವಿರೋಧಿಸಿ ನರಗುಂದ-ನವಲಗುಂದದ ರೈತರು 1980ರ ಜುಲೈ ತಿಂಗಳಿನ ಒಂದು ದಿನ ಅಲ್ಲಿನ ತಹಸೀಲ್ದಾರ್ ಕಚೇರಿಗೆ ಮನವಿ ಕೊಡಲು ಹೋದರು. ಎರೆಮಣ್ಣಿನ ಆ ನೆಲದಲ್ಲಿ ನೀರಾವರಿಯಿಂದಾಗಿ ರೈತರಿಗೆ ಅಂತಹ ಉಪಯೋಗವೇನಾಗಿರಲಿಲ್ಲವಾದರೂ ನೀರಾವರಿ ಅಭಿವೃದ್ಧಿ



ತೆರಿಗೆಯನ್ನಂತೂ ಕಟ್ಟುನಿಟ್ಟಾಗಿ ಸರ್ಕಾರ ವಸೂಲಿ ಮಾಡುತಿತ್ತು, ತೆರಿಗೆ ಕಟ್ಟದ ಪಕ್ಷದಲ್ಲಿ ಅಧಿಕಾರಿಗಳು ರೈತರ ಮನೆ, ಆಸ್ತಿ ಜಪ್ತಿ ಮಾಡುವುದು ಮಾಡುತ್ತಿದ್ದರು. ಇದರಿಂದ ನೊಂದ ರೈತರು ಅವತ್ತಿನ ದಿನ ಅಹವಾಲು ಸಲ್ಲಿಸಲು ಹೋದರೆ ತಹಸೀಲ್ದಾರ್ ಏನು ಅಂತ ಕೂಡಾ ವಿಚಾರಿಸದೇ ಧಿಮಾಕಿನ ಮಾತಾಡುತ್ತಾ ಕಚೇರಿಯಲ್ಲೇ ಉಳಿದ. ಅಂದು ನಿರೀಕ್ಷೆಗಿಂತ ಅತಿ ಹೆಚ್ಚಿನ ಸಾವಿರಾರು ಸಂಖ್ಯೆಯಲ್ಲಿ ಜನ ತಹಸೀಲ್ದಾರ್ ಕಚೇರಿ ಎದುರಿಗೆ ಸೇರಿದ್ದರು. ಕಮ್ಯುನಿಸ್ಟ್ ಪಕ್ಷದ ಹಳಕಟ್ಟಿ ಎನ್ನುವವರು ಇವರನ್ನೆಲ್ಲ ಲೀಡ್ ಮಾಡ್ತಿದ್ದವರು ತಹಸೀಲ್ದಾರರ ಉದ್ಧಟತನದ ವರ್ತನೆಯಿಂದ ಸಿಟ್ಟಿಗೆದ್ದು 'ನುಗ್ರೋ ಒಳಗೆ, ಏನು ಮಾಡ್ತಾನೆ ನೋಡೋಣ' ಅಂದ್ರು. ಈ ಮಾತಿಗೆ ಜನರೂ ಕಾಯ್ತಾ ಇದ್ರೇನೋ ಅನ್ನೋ ಹಾಗೆ ನುಗ್ಗಿ ತಹಸೀಲ್ದಾರರನ್ನ ಹೊರಗೆ ಎಳೆದುಕೊಂಡು ಬಂದ್ರು. ಅದೆಷ್ಟೊತ್ತಿಗೆ ಪೊಲೀಸ್ ಪಡೆ ಬಂದು ನಿಂತಿತ್ತೋ ಲಾಠಿ ಚಾರ್ಜ್ ಅಲ್ಲ ಏಕದಂ ಗೋಲಿಬಾರ್‌ಗೆ ಆದೇಶ ನೀಡಿದರು. ಗೋಲಿಬಾರ್ ಆಗಿ ಇಬ್ಬರು ರೈತರ ಹತ್ಯೆಯಾಯಿತು. ಉಳಿದ ಪ್ರತಿಭಟನಾಕಾರರು ದಿಕ್ಕು ತೋಚದೆ ಅಲ್ಲಿಂದ ಓಡಿ ಹೋದರು. ಅಲ್ಲಿಗೂ ಬಿಡದ ಪೊಲೀಸರು ಮನೆಮನೆಗೂ ನುಗ್ಗಿ ಯಾರ್‍ಯಾರು ಮನವಿ ಕೊಡಕ್ಕೆ ಹೋಗಿದ್ದರೋ ಅವರನ್ನ ಎಳೆದುಕೊಂಡು ಬಂದು ಬಂಧಿಸಿದರು.

ನಮಗೆ ಅವತ್ತೆ ಸಂಜೆ ಗೋಲಿಬಾರ್ ಆಗಿ ರೈತರು ಸತ್ತ ಸುದ್ದಿ ತಲುಪಿತು. ಮರುದಿನ ಬೆಳಗ್ಗೆಯೇ ಕಬ್ಬು ಬೆಳೆಗಾರರ ಸಂಘದಿಂದ ಘಟನೆಯನ್ನು ಖಂಡಿಸಿ ಶಿವಮೊಗ್ಗದಲ್ಲಿ ಮೌನ ಮೆರವಣಿಗೆ ಏರ್ಪಡಿಸಿದ್ವಿ. ರಾತ್ರೋ ರಾತ್ರಿ ಓಡಾಡಿ ಹಳ್ಳಿಹಳ್ಳಿಗೂ ಸುದ್ದಿ ಕೊಟ್ವಿ. ಮರುದಿನ ಐದಾರು ಸಾವಿರ ಜನ ಬಾಯಿಗೆ ಕಪ್ಪುಬಟ್ಟೆ ಕಟ್ಟಿಕೊಂಡು ಮೌನ ಮೆರವಣಿಗೆ ನಡೆಸಿದೆವು. ರೈತರೆಲ್ಲ ಸಂಘಟಿತರಾಗಿ ಶಿಸ್ತಿನಿಂದ ಚಳವಳಿ ನಡೆಸಿದ್ದು ಬಹುಶಃ ಕರ್ನಾಟಕದ ಇತಿಹಾಸದಲ್ಲೆ ಅದೇ ಮೊದಲ ಬಾರಿಗಿರಬೇಕು. ಏನೇ ಸಿಟ್ಟಿದ್ದರೂ ಅದು ನಿಮ್ಮ ಕಣ್ಣಲ್ಲೆ ವ್ಯಕ್ತವಾಗಬೇಕು, ಮಾತಿನಲ್ಲಿ ಕೂಡ ಅಲ್ಲ, ಕಣ್ಣು ನೋಡಿದರೆ ಸರ್ಕಾರಕ್ಕೆ, ಅಧಿಕಾರಿಗಳಿಗೆ ತಿಳಿಬೇಕು ರೈತರು ಸಿಟ್ಟಾಗಿದಾರೆ ಇನ್ನು ನಮ್ಮಾಟ ನಡೆಯಲ್ಲ ಅಂತ ಎಂದೆಲ್ಲ ಹೋರಾಟಗಾರರಿಗೆ ಹೇಳಿದ್ವಿ. ಮೌನ ಮೆರವಣಿಗೆ ಮತ್ತು ಸಭೆ ನಡೆದ ಕೂಡಲೇ ಮತ್ತೊಂದು ನಿರ್ಧಾರವನ್ನು ಸಂಘದಿಂದ ಕೈಗೊಂಡ್ವಿ. ಏನು ಅಂದ್ರೆ

ಮರುದಿನವೇ ನರಗುಂದ ನವಲುಗುಂದಕ್ಕೆ ... ಗೋಲಿಬಾರ್‌ನಿಂದ ಸತ್ತ ರೈತರ ಮನೆಗೆ ಭೇಟಿ ... ಅವರಿಗೆ ಸಾಂತ್ವನ ಹೇಳೋದು. ಸಭೆಯಲ್ಲೆ ... ತಿಳಿಸಿ ಕೂಡಲೇ ಎಲ್ಲ ರೈತರಿಗೆ ಬುತ್ತಿ ಕ... ಹೊರಡಲು ತಿಳಿಸಿದ್ವಿ. ಬಸ್ಸಿನ ಮಾಲೀಕರ... ಬಸ್ಸು ಕಳಿಸಿದ್ರು, ಯಾರೋ ಇನ್ನೊಬ್ಬರು ಲಾರಿ... ಸಭೆಗೆ ಬಂದ ಬಹುತೇಕ ರೈತರೆಲ್ಲ ನರಗುಂದ... ಪರಿಸ್ಥಿತಿಯ ಅವಲೋಕನ ನಡೆಸಿ ಮರಳಿದೆ... ಪರಿಸ್ಥಿತಿ ನಿಜಕ್ಕೂ ಭೀಕರವಾಗಿತ್ತು ಬಹಳಷ್ಟು... ಬಂಧಿಸಲಾಗಿತ್ತು, ಸತ್ತ ಮತ್ತು ಬಂಧಿತ ರೈತರ... ಧ್ವನಿ ಎತ್ತಲು ಕೂಡಾ ಯಾರು ಇರಲಿಲ್ಲ, ಅ... ನಾವೇ ಮಾಡಬೇಕು ಎಂದು ನಿರ್ಧರಿಸಿದೆವು...

ಅಲ್ಲಿಂದ ಮರಳಿದವರೇ ಮತ್ತೆ ಸಭೆ ... ರೈತರ ಸ್ಮರಣಾರ್ಥ ವೀರಗಲ್ಲು ನೆಡಲು ನಿರ್ಧ... ಜೊತೆಗೆ ಆ ರೈತರು ಎದುರಿಸ್ತಿದ್ದ ನೀರಾವರಿ ತೆರಿಗೆ ಸಮಸ್ಯೆ ಅದು ನಮ್ಮ ಭಾಗದ ರೈತರನ್ನೂ ... ಒಂದಲ್ಲ ಒಂದು ದಿನ ನರಗುಂದದಲ್ಲಿ... ದುರ್ಘಟನೆಯೇ ಇಲ್ಲಿಯೂ ಸಂಭ... ಆಶ್ಚರ್ಯವೇನಿರಲಿಲ್ಲ, ಆದ್ದರಿಂದ ರೈತರ ಮೇಲೆ ... ನಡೆಯದಂತೆ ನೋಡಿಕೊಳ್ಳಬೇಕಾದರೆ ... ಸಂಘಟಿತರಾಗಬೇಕು ಎಂಬ ಆಲೋಚನೆ... ಗೋಲಿಬಾರ್‌ನಲ್ಲಿ ಮೃತರಾದ ರೈತರ ಕುಟುಂ... ಸೂಕ್ತ ಪರಿಹಾರ ಕೊಡಬೇಕು. ಬಂಧನದಲ್ಲಿರು... ಯಾವುದೇ ನಿರ್ಬಂಧವಿಲ್ಲದೇ ಬಿಡುಗಡೆ ... ನೀರಾವರಿ ಅಭಿವೃದ್ಧಿ ತೆರಿಗೆ ಕೈ ಬಿಡಬೇ... ಪಂಪ್‌ಸೆಟ್ಟಿಗೆ ವಿದ್ಯುತ್ ಶುಲ್ಕ ವಿಧಿಸಬಾರ... ಮುಂತಾದ ಹತ್ತೊಂಬತ್ತು ಬೇಡಿಕೆಗಳನ್ನಿ... ಶಿವಮೊಗ್ಗ ಜಿಲ್ಲಾಧಿಕಾರಿ ಕಚೇರಿ ಆವರಣ... ಉಪವಾಸ ಸತ್ಯಾಗ್ರಹ ನಡೆಸಲು ನಿರ್ಧರಿಸಲಾಯ... ಬೆಳೆಗಾರರ ಒಕ್ಕೂಟ ಎಂದರೆ ತುಂಬಾ ಸೀಮಿತ ... ಸೂಚಿಸುತ್ತದೆ ಎಂಬ ಕಾರಣಕ್ಕೆ ರೈತ ಹಾ... ಕಾರ್ಮಿಕ ಸಂಘ ಎಂಬ ಹೆಸರಿನಲ್ಲಿ ಒಕ್ಕೂಟ ಮ... ಸರದಿ ಉಪವಾಸ ಸತ್ಯಾಗ್ರಹದ ಬಗ್ಗೆ ಹಳ್ಳಿಹಳ್ಳಿ... ಪ್ರಚಾರ ನಡೆಸಿ ಹೋರಾಟದ ಕಾವು ಸ್ವ... ಹಾಗೆ ನೋಡಿಕೊಂಡ್ವಿ. ಜಿಲ್ಲಾಧಿಕಾರಿ ಕಚೇರಿ... ಒಂದೊಂದು ಹಳ್ಳಿಯವರು ಒಂದೊಂದು ... ಉಪವಾಸ ಸತ್ಯಾಗ್ರಹಕ್ಕೆ ಕುಳಿತರು. ಎಲ್ಲ ಕಡೆ... ಉಪವಾಸ ಸತ್ಯಾಗ್ರಹದ ವಿಷಯ ಹಬ್ಬ... ಒಮ್ಮೊಮ್ಮೆಗೆ ಎರಡು ಮೂರು ಊರಿನವ... ಉಪವಾಸಕ್ಕೆ ಕೂರತೊಡಗಿದರು. ಮತ್ತೊ... ಬಹಳಷ್ಟು ಗ್ರಾಮಸ್ಥರು ಇಪ್ಪತ್ನಾಲ್ಕು ಗಂಟೆ... ಉಪವಾಸ ಮುಗಿದರೂ ಊರಿಗೆ ಹೋಗದೆ ... ಮುಂದುವರೆಸಿದರು. ಹೆಂಗಸರು, ಮಕ್ಕಳಾದಿಯಾ... ಸತ್ಯಾಗ್ರಹದಲ್ಲಿ ಪಾಲ್ಗೊಳ್ಳತೊಡಗಿದರು. ಉಪವಾ... ಮುಗಿಸಿದವರಿಗೆ ಅವರವರ ಊರಿನ ಹೆಣ್ಣ... ಬುತ್ತಿ ಕಟ್ಟಿಕೊಂಡು ತಂದುಕೊಡಬೇಕಿ... ತಂದುಕೊಡುವವರ ಸಂಖ್ಯೆ ಹೆಚ್ಚಾಗುತ್ತಲೇ ... ರೈತ ಹೋರಾಟವೆಂಬುದು ನಿಜಕ್ಕೂ ಹೆ... ಜಾತಿ ಧರ್ಮ ಎಲ್ಲವನ್ನು ಮೀರಲು ಒಂದು ... ವೇದಿಕೆಯಾಗತೊಡಗಿತು.

ಉಪವಾಸ ಸತ್ಯಾಗ್ರಹದ ಬಗ್ಗೆ ಹಳ್ಳಿಹಳ್ಳಿ... ಜನರಿಗೆ ತಿಳಿಸೋದು, ಸತ್ಯಾಗ್ರಹದ ಫೋಟೊ... ವರದಿ ತಯಾರಿಸಿ ಲಂಕೇಶ್ ಪತ್ರಿಕೆಗೆ ಕಳ... ಈ ಸಂದರ್ಭದ ನನ್ನ ಮುಖ್ಯ ಕೆಲಸವಾಗಿ... ಸಂದರ್ಭದಲ್ಲಿ ಜಿ.ಪಿ. ಬಸವರಾಜು ಅವರು ಪ್ರ... ವರದಿಗಾರರಾಗಿ ಶಿವಮೊಗ್ಗಕ್ಕೆ ಅದೇ ತಾನೇ ... ರೈತ ಚಳವಳಿಯ ಬಗ್ಗೆ ತೀವ್ರ ಆಸಕ್ತಿ ಹೊಂ... ವಸ್ತುನಿಷ್ಠ ವರದಿಗಳು ಪ್ರಜಾವಾಣಿ ಪತ್ರಿಕೆಯ... ಅಕ್ಷರಸ್ಥರನ್ನು ತಲುಪತೊಡಗಿದವಲ್ಲದೆ ರೈ... ಎಲ್ಲೆಡೆ ಬೆಂಬಲ ವ್ಯಕ್ತವಾಗುವಂತೆ ನೋ... ಮತ್ತೊಂದೆಡೆ ಲಂಕೇಶ್ ಪತ್ರಿಕೆ ಕೂಡಾ ರೈತ... ವರದಿಗೆ ಬಹಳ ಪ್ರಮುಖ್ಯತೆ ಕೊಟ್ಟಿತು. ನಾವು ... ಜಾಥಾ ಹೋದಾಗ "ರೈತರು ಬರುತ್ತಿದ್ದಾ... ಹೊಟ್ಟೆ ತುಂಬಾ ಊಟ ಹಾಕುವ ಜವಾಬ್ದಾರಿ... ಎಂದು ಲಂಕೇಶರು ಪತ್ರಿಕೆಯಲ್ಲಿ ಬರೆದ ನ... ಎಂತಹ ಜನಸ್ಪಂದನ ದೊರೆತಿದ್ದೆಂದರೆ ... ಮನೆಮನೆಯವರು ನಮ್ಮನ್ನು ಕರೆದು ಸತ್ಕ...

ಉಪವಾಸ ಸತ್ಯಾಗ್ರಹ ಮುಂದುವರ... ಸರ್ಕಾರದ ಪತಿಯಿಂದ ವೀರಪ್ಪ ಮೊಯ್ಲಿ ... ಮತ್ತಿತರರು ರಾಯಭಾರಿಗಳಾಗಿ ಸಂಧಾನಕ್ಕೆ ... ಹತ್ತೊಂಬತ್ತು ಬೇಡಿಕೆಗಳ ಈಡೇರಿಕೆಗೆ ಸಕಾ... ನೀಡಲೇಬೇಕು ಆಗಲೇ ಧರಣಿ ... ಹಿಂತೆಗೆದುಕೊಳ್ಳುವುದು ಎಂದು ಪಟ್ಟು ಹಿಡಿ... ಬರಿಗೈಯಲ್ಲಿ ಹಿಂತಿರುಗಿದರು. ಇ... ನಂಜುಂಡಸ್ವಾಮಿಯವರನ್ನು ಹೋರಾಟಕ್ಕೆ ... ಎಂಬುದು ಬಹುತೇಕ ರೈತ ಹೊ...

...ಂದೂವಾಗಿ ಹುಟ್ಟಿದ್ದೇನೆ ಆದರೆ ಹಿಂದೂವಾಗಿ ಸಾಯಲಾರೆ'

...ಟಿಗೆ ಹಿಂದೂತ್ವವಾದಿಗಳು ಅಂಬೇಡ್ಕರರನ್ನು ವೋಟ್ ...ಕ್ಷದ ತಮ್ಮ ವಶ ಮಾಡಿಕೊಳ್ಳಲು ತಿಣುಕಾಡುತ್ತಿದ್ದಾರೆ. ಇದರ ...ಸಂಘಪರಿವಾರದ ನಾಯಕರುಗಳು ಅಂಬೇಡ್ಕರ್ ಅವರ ಚಿಂತನೆಗಳನ್ನು ...ಸಮುಗ್ಧ ದಲಿತರಿಗೆ ಮಂಕುಬೂದಿ ಎರಚುತ್ತಿದ್ದಾರೆ. ಇಂತಹ ...ಬಗಳಲ್ಲಿ ಅಂಬೇಡ್ಕರ್ ಅವರಿಗೆ ಸಂಘದ ಸಿದ್ಧಾಂತದಲ್ಲಿ ... ಭಗವಾಧ್ವಜವನ್ನು ದೇಶದ ಧ್ವಜವನ್ನಾಗಿ ಮಾಡಲು ಬಯಸಿದ್ದರು ...ಳ್ಳು ಕಂತೆಗಳನ್ನು ಸುತ್ತಲಾರಂಭಿಸಿದ್ದಾರೆ. ಅಂಬೇಡ್ಕರ್ ಅವರು ...ಲ್ಲಿ ಮುಸ್ಲಿಂ ದಾಳಿಕೋರರ ಬಗ್ಗೆ ಬರೆದದ್ದನ್ನು ವಿಜೃಂಭಿಸುವುದಲ್ಲದೆ ...ವನ್ನು ತಿರುಚಿ ಅಂಬೇಡ್ಕರ್ ಅವರು ಮುಸ್ಲಿಂ ವಿರೋಧಿಯಾಗಿದ್ದರು ...ಸಾರುತ್ತಿದ್ದಾರೆ. ಅಷ್ಟಕ್ಕೆ ನಿಲ್ಲದೆ ಆರೆಸ್ಸೆಸ್‌ನ ಮುಖವಾಣಿಯಾದ ..." ಪತ್ರಿಕೆಯು ಇದೇ ವರ್ಷದ ಏಪ್ರಿಲ್ ತಿಂಗಳಿನಲ್ಲಿ ಅಂಬೇಡ್ಕರರ ...ನ್ನೇ ಪ್ರಕಟಿಸಿದೆ. ಎರಡು ದಶಕಗಳ ಹಿಂದೆ ಇದೇ ಪಾಳಯಕ್ಕೆ ...ಣ್ ಶೌರಿ 'ಸುಳ್ಳು ದೇವರ ಆರಾಧನೆ' ಎಂದು ಅಂಬೇಡ್ಕರರನ್ನು ...ದ್ದ ಈಗಲೂ ಅಂತರ್ಜಾಲದಲ್ಲಿ 'ಯಾಂಟಿ ಕ್ಯಾಸ್ಟ್ ರಿಸರ್ವೇಶನ್' ...ಹುಕಿದರೆ ಇದೇ ಸಿದ್ಧಾಂತದ ಗುಂಪಿಗೆ ಸೇರಿದ ಲಕ್ಷಾಂತರ ... ಅಂಬೇಡ್ಕರರನ್ನು ಮನಸೋ ಇಚ್ಛೆ ನಿಂದಿಸಿರುವುದನ್ನು ನೀವು ...ದು. ಇಂತಹ ಗುಂಪು ಇಂದು ಏಕಾಏಕಿ ತನ್ನ ಸಂಪಾದಕತ್ವದ ...ಅಂಬೇಡ್ಕರರ ವಿಶೇಷಾಂಕ ಮಾಡುವುದೆಂದರೇನು? ಒಂದು ...ನೆಯಿಂದ ಅಂಬೇಡ್ಕರರು ಪ್ರತಿಪಾದಿಸಿದ ತತ್ವಗಳನ್ನು ...ಸಲು ಮುಂದಾಗುವುದು. ಮತ್ತೊಂದು ಅಂಬೇಡ್ಕರರನ್ನು ತಮ್ಮ ...ಜೆಂಡಾಗಳಿಗೆ ಬಳಸಿಕೊಳ್ಳುವುದು. ಈ ಎರಡು ಕಾರಣಗಳಲ್ಲಿ ...ಪದವರು ಅಂಬೇಡ್ಕರ್ ಅವರನ್ನು ಯಾವ ರೀತಿಯಲ್ಲಿ ... ಬಯಸಿದ್ದಾರೆ ಎಂದು ತಿಳಿಯಲು 'ಆರ್ಗನೈಜರ್' ಪತ್ರಿಕೆಯಲ್ಲಿ ...ವ ಒಂದೆರಡು ಅಕ್ಕಿಕಾಳುಗಳನ್ನು ಹಿಸುಕಿ ನೋಡೋಣ.

...ಜರ್‌ನ ಮೊದಲ ಲೇಖನದಲ್ಲಿಯೇ ಹಿತೇಶ್ ಶಂಕರ್ ಎಂಬ ...ಲ್ ಬಿಹಾರಿ ವಾಜಪೇಯಿಯವರ ಸಾಲುಗಳನ್ನು ಉದ್ಧರಿಸುತ್ತಾರೆ. ...:

"ಸಮಾಜವೆಂಬ ಪರಿಪೂರ್ಣ ಸಾಗರದ ಒಂದು ಹನಿ ನಾನು, ...ಷ್ಟಿಯ ಹಿತಕ್ಕಾಗಿ ನಾನು ಭಯಭೀತಿಯಿಲ್ಲದೆ ನನ್ನನ್ನೇ ...ವೆನು."

...ಗಳನ್ನು ಹೇಳಿರುವುದು ಅಟಲ್ ಬಿಹಾರಿ ವಾಜಪೇಯಿಯವರಿಗೆ ... ಆಗಿರಬಹುದು. ಆದರೆ ಈ ಲೇಖಕ ಮೇಲಿನ ಸಾಲುಗಳು ...ರ ವ್ಯಕ್ತಿತ್ವಕ್ಕೆ ನಿಖರವಾಗಿ ಹೋಲುತ್ತದೆ ಎನ್ನುತ್ತಾರೆ. ಹಾಗಾದರೆ ...ದೂವಾಗಿ ಹುಟ್ಟಿದ್ದೇನೆ ಆದರೆ ಹಿಂದೂವಾಗಿ ಸಾಯಲಾರೆ" ...ಡ್ಕರ್ ಅವರ ಮಾತುಗಳನ್ನು, ಅದನ್ನು ಸಾಕಾರಗೊಳಿಸಲು ...ರೊಂದಿಗೆ ತಾವೂ ಬೌದ್ಧ ಧರ್ಮ ಸೇರಿದ್ದು ಸುಳ್ಳೇ!! ಈ ...ಖಕ ಅಂಬೇಡ್ಕರ್ ಅವರು ಮಹಾಡ್ ಸತ್ಯಾಗ್ರಹದಲ್ಲಿ ಮಾಡಿದ ...ವರ್ಣೀಯರೇ) ನೀವು ಇಷ್ಟ ಪಡಿ ಇಲ್ಲ ಇಷ್ಟ ಪಡದಿರಿ ...ದರು ಹಿಂದೂ ಸಮಾಜದ ಒಂದು ಭಾಗ' ಎಂಬ ಮಾತನ್ನು ... 'ಅಂಬೇಡ್ಕರರ ಹೋರಾಟ ಹಿಂದೂ ಧರ್ಮದ ಹೊರಗೆ ...ನ್ನಾಗಿರಲಿಲ್ಲ' ಎನ್ನುತ್ತಾರೆ. ಆದರೆ ಹಿಂದೂ ಧರ್ಮ ಸುಧಾರಣೆಗೆ ...ಡ್ಕರರ ಸಲಹೆಗಳನ್ನು ಮರೆಮಾಚುತ್ತಾರೆ. ಅವುಗಳನ್ನು ನಾನು ...ಸುತ್ತೇನೆ.


...ಗೋಪಾಲ್ ಎಂಬ ಲೇಖಕರು ಬುದ್ಧನ ಬಗ್ಗೆ ಮಾತನಾಡುತ್ತಾ ...ಸಾತ್ಮಕವಾಗಿ ಸನಾತನ ಧರ್ಮದ ಮೂಲ ತತ್ವಗಳನ್ನು ...ವನು' ಎನ್ನುತ್ತಾರೆ. ಆದರೆ ಬುದ್ಧನೇ ಹೇಳಿರುವಂತೆ ...ವೇ ಜಗದ ನಿಯಮ' ಎನ್ನುವುದನ್ನು ಜಾಣ ಮರೆವಿಗೆ ...ರೆ. ಬುದ್ಧನು ಸನಾತನ ಧರ್ಮ (ವೈದಿಕ ಧರ್ಮ) ನಂಬಿದ್ದ ... ನಂಬಿರುವ ಚಾತುರ್ವರ್ಣ ವ್ಯವಸ್ಥೆ, ಆತ್ಮ, ಕರ್ಮಸಿದ್ಧಾಂತ, ...ಯಾಗ-ಯಜ್ಞ, ಜಾತಿಪದ್ಧತಿ ಇತ್ಯಾದಿಗಳನ್ನು ಅಲ್ಲಗಳೆದು, ಧಿಕ್ಕರಿಸಿ ...ವನ್ನು ಜಗತ್ತಿಗೇ ಸಾರಿದ. ಆ ಮೂಲಕ ಸನಾತನ ಧರ್ಮಕ್ಕೆ ...ದ ನಿಂತ. ಅದೆಷ್ಟರ ಮಟ್ಟಿಗೆಂದರೆ ತನ್ನ ವಿರುದ್ಧವೇ ನಿಂತ ...ವನ್ನು ವಿಷ್ಣುವಿನ ಅವತಾರವಾಗಿಸಿಕೊಳ್ಳುವ ಮಟ್ಟಕ್ಕೆ ಬುದ್ಧನು ತನ್ನ ...ನಿಂದ ಸನಾತನ ಧರ್ಮಕ್ಕೆ ಪೆಟ್ಟು ಕೊಟ್ಟಿದ್ದ.

...ಖಕ 'ಅಂಬೇಡ್ಕರರು ಅಸ್ಪೃಶ್ಯತೆಯು ರಾಜ ದಾಹೀರನನ್ನು ...ರರು ಸೋಲಿಸಿದ ಮೇಲೆ ಮೊದಲ ಬಾರಿ ಕಂಡುಬಂದಿತು ...ತ್ತಾರೆ' ಎಂದಿದ್ದಾರೆ. ಜೊತೆಗೆ ದಾಹೀರನ ಆಸ್ಥಾನದ ಹೆಂಗಸರು ...ರರು ಅರಮನೆಯನ್ನು ಪ್ರವೇಶಿಸಿದಾಗ 'ಅವರು ಬರುತ್ತಿದ್ದಾರೆ. ...ರು. ಅವರು ನಮ್ಮನ್ನು ಮುಟ್ಟಿ ಅಪವಿತ್ರಗೊಳಿಸುತ್ತಾರೆ. ... ಅವರು ಮುಟ್ಟುವ ಮುಂಚೆ ನಮ್ಮನ್ನೆ ಸುಂಹರಿಸಿಕೊಳ್ಳಬೇಕು' ...ಕ್ಷೇಬಿಸಿ ಇದೇ ಭಾರತದ ಇತಿಹಾಸದಲ್ಲಿನ ಅಸ್ಪೃಶ್ಯತೆಯ ... ಉದಾಹರಣೆ ಎನ್ನುತ್ತಾರೆ. ಈ ಮೂಲಕ ಅಸ್ಪೃಶ್ಯತೆಯ ...ಸ್ಲಿಂ ದಾಳಿಕೋರರು ಎಂದು ಬಿಂಬಿಸಲು ಪ್ರಯತ್ನಿಸಲಾಗಿದೆ. ...ಷ್ಣನರೇ ತಿಳಿಸುವಂತೆ ಮನುಸ್ಮೃತಿಯಲ್ಲಿ ಅಸ್ಪೃಶ್ಯರ ಬಗ್ಗೆ ...ಶಾಸಕ್ಕನೇ ಅಸ್ಪೃಶ್ಯರು ಸ್ಮಶಾನದಿಂದ ಆಚೆ ಜೀವಿಸಬೇಕೆಂದು ...ನಿಂದ ಅಂಬೇಡ್ಕರರು ಹೇಳಿರುವಂತೆ ಅಸ್ಪೃಶ್ಯರ ಸೃಷ್ಟಿಗೆ ಈ ...ರ ಅಂಶಗಳು ಮೂಲ ಕಾರಣವಾಗಿವೆ.

...ಣಗಳು ಮೂಲ ಬೌದ್ಧ ಧರ್ಮವನ್ನು ಬಿಟ್ಟು ಬ್ರಾಹ್ಮಣ ... ಸ್ವೀಕರಿಸದೇ ಇದ್ದದ್ದು,

... ಕೀಳರಿ,

... ಶ್ರೇಷ್ಠನನ್ನು, ಮಾಡುತಿದ್ದವರು.



ಈ ಮೇಲಿನ ಮೂರು ಕಾರಣಗಳಿಂದ ಅಂದಿನ ಪುರೋಹಿತಶಾಹಿಗಳು ಮತ್ತು ರಾಜರುಗಳು ಬೃಹತ್ ಸೇವಾ ಜನಾಂಗವನ್ನು ಅಸ್ಪೃಶ್ಯರನ್ನಾಗಿ ಮಾಡಿದವು. ಅಸ್ಪೃಶ್ಯತೆ ಸ್ವೀಕರಿಸಿರುವುದಲ್ಲ ಬದಲಾಗಿ ಹೇರಿರುವುದು ಎನ್ನುತ್ತಾರೆ ಬಾಬಾಸಾಹೇಬ್ ಅಂಬೇಡ್ಕರ್.

ಅದೇ ಕೃಷ್ಣ ಗೋಪಾಲ್ ತಮ್ಮ ಲೇಖನದ ಕಡೆಯಲ್ಲಿ 'ಸಾಮಾಜಿಕ, ಆರ್ಥಿಕ, ರಾಜಕೀಯ ಅಸಮಾನತೆಯನ್ನು ತೊಲಗಿಸಿ ಭಾರತವನ್ನು ಪ್ರಪಂಚದಲ್ಲೇ ಪ್ರಬುದ್ಧ ರಾಷ್ಟ್ರವಾಗಿಸಲು ನಾವು ವೇದ ಋಷಿಗಳ ಮತ್ತು ಭಗವಾನ್ ಬುದ್ಧನ ದಾರಿಯಲ್ಲಿ ನಡೆಯಬೇಕು. ಇದಕ್ಕೇ ಅಂಬೇಡ್ಕರ್ ಹೋರಾಡಿದ್ದು' ಎನ್ನುತ್ತಾರೆ. ಆದರೆ ಅಂಬೇಡ್ಕರ್ ಅವರು ತಮ್ಮ ಜಾತಿವಿನಾಶ ಕೃತಿಯಲ್ಲಿ ಜನತೆಗೆ ವೇದ, ಸ್ಮೃತಿ-ಶ್ರುತಿಗಳನ್ನು ಧಿಕ್ಕರಿಸಲು ಕರೆ ನೀಡಿದ್ದಾರೆ. ಅದಲ್ಲದೇ 'ನೀವು ಬುದ್ಧನು ತುಳಿದ ದಾರಿಯನ್ನೇ ತುಳಿಯಿರಿ. ಗುರುನಾನಕರು ಸಾಗಿದ ದಾರಿಯಲ್ಲೇ ಸಾಗಿರಿ' ಎಂದು ಹಿಂದೂ ಧರ್ಮದ ವಿರುದ್ಧ-ಬಂಡಾಯ ಸಾರಲು ಜನತೆಗೆ ಕರೆ ನೀಡುತ್ತಾರೆ.

ಆದ್ದರಿಂದ ಅಂಬೇಡ್ಕರರ ಸಾಹಿತ್ಯವನ್ನು ಓದಿದ ಪ್ರತಿಯೊಬ್ಬರಿಗೂ ಈ ಮೇಲೆ ಆರ್ಗನೈಜರ್ ಪತ್ರಿಕೆ ಅವರಿಗೆ ಆರೋಪಿಸಿರುವ ಹಲವು ವಿಷಯಗಳೆಲ್ಲವೂ ಸುಳ್ಳೆಂಬುದು ಎದ್ದು ಕಾಣುತ್ತದೆ. ಅಂಬೇಡ್ಕರ್ ಅವರ ಪ್ರಕಾರ ಬುದ್ಧ ಧಮ್ಮದ ಕೇಂದ್ರ ನೈತಿಕತೆ; ದೇವರಲ್ಲ, ಅವನು ಬೋಧಿಸಿದ್ದು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು, ಆದರೆ ಹಿಂದೂ ಧರ್ಮವು ಈ ಮೂರು ತತ್ವಗಳಿಗೆ ವಿರುದ್ಧವಾಗಿ ಅಸಮಾನತೆಯನ್ನು ಬೋಧಿಸುತ್ತದೆ ಎಂದು ಚಾತುರ್ವರ್ಣ ಮತ್ತು ಜಾತಿಪದ್ಧತಿಗಳನ್ನು ತರಾಟೆಗೆ ತೆಗೆದುಕೊಳ್ಳುತ್ತಾರೆ. ಅವರ 'ಹಿಂದೂ ಧರ್ಮದ ಒಗಟುಗಳು' ಮತ್ತು 'ಜಾತಿವಿನಾಶ' ಕೃತಿಗಳಲ್ಲಿ ಹಿಂದೂ ಧರ್ಮದಲ್ಲಿನ ತಾರತಮ್ಯದ ಬಗ್ಗೆ ವಿಸ್ತೃತವಾಗಿ ಚರ್ಚಿಸಿದ್ದಾರೆ. ಈ ಹಿಂದೆ ಇದೇ ಮನಸ್ಥಿತಿಯ ಮನುವಾದಿಗಳು ಈ ಎರಡು ಕೃತಿಗಳ ಮೇಲೆ ಕೋಪ ಕಾರಿಕೊಂಡು ಒಂದನ್ನು ನಿಷೇಧಿಸುವಂತೆ ಮಾಡಿದ್ದರು. ಮತ್ತೊಂದನ್ನು ಮಂಡಿಸಲು ಅವಕಾಶವನ್ನೇ ರದ್ದುಗೊಳಿಸಿದ್ದರು. ಆದ್ದರಿಂದ ಸಂಘ ಪರಿವಾರದವರು ಏನೇ ಹೇಳಿದರೂ ಅಂಬೇಡ್ಕರ್ ಅವರು ಹೇಳಿರುವ ಸತ್ಯಗಳನ್ನು ಮುಚ್ಚಿಡಲು ಸಾಧ್ಯವಿಲ್ಲ. ಆದರೆ ಅಂಬೇಡ್ಕರ್ ಅವರು ಹೇಳಿರುವ ಸತ್ಯವನ್ನು ಪ್ರತಿಯೊಬ್ಬ ವಿಚಾರವಾದಿಯೂ ನಿರ್ಭಯವಾಗಿ ಸಾರಿ ಸಾರಿ ಹೇಳಬೇಕಿದೆ. ಅದು ಇಂದಿನ ತುರ್ತಾಗಿದೆ.

ಹಾಗಾದರೆ, ಸಂಘ ಪರಿವಾರದವರಿಗೆ ಅಂಬೇಡ್ಕರ್ ಯಾಕೆ ಬೇಕು? ಮತ್ತು ಹೇಗೆ ಬೇಕು? ಎಂಬ ಪ್ರಶ್ನೆಗಳು ನಮ್ಮ ಮುಂದೆ ನಿಲ್ಲುತ್ತವೆ. ಇದನ್ನು ತಿಳಿಯುವುದು ಬಹಳ ಸುಲಭ. ಇತ್ತೀಚೆಗೆ ನಡೆದ ಕೆಲವು ಘಟನೆಗಳನ್ನು ಕೂಲಂಕಷವಾಗಿ ಗಮನಿಸಿದರೆ ಅವರ ಹುನ್ನಾರ ನಮಗೆ ತಿಳಿಯುತ್ತದೆ. ಅದರಲ್ಲಿ ಮೊದಲನೆಯದ್ದು ಮದ್ರಾಸಿನ 'ಐಐಟಿ'ಗೆ ಸಂಬಂಧಿಸಿದ್ದು. ಅಲ್ಲಿನ ಪ್ರಗತಿಪರ ವಿದ್ಯಾರ್ಥಿಗಳ ಗುಂಪೊಂದು 'ಅಂಬೇಡ್ಕರ್-ಪೆರಿಯಾರ್ ಸ್ಟಡಿ ಸರ್ಕಲ್' ಮಾಡಿಕೊಂಡು ಪ್ರಚಲಿತ ಘಟನೆಗಳ ವಿರುದ್ಧ ಸಂವಿಧಾನಿಕವಾಗಿ ವಿದ್ಯಾರ್ಥಿಗಳನ್ನು ಸಂಘಟಿಸುತ್ತಾ ಕಾರ್ಯಕ್ರಮಗಳನ್ನು ನಡೆಸುತ್ತಿದ್ದರೆ ಐಐಟಿ ಸಂಸ್ಥೆಯ ಮುಖ್ಯಸ್ಥರಿಗೆ ದೂರು ನೀಡಿ 'ಅಂಬೇಡ್ಕರ್-ಪೆರಿಯಾರ್' ಹೆಸರನ್ನು ತೆಗೆದುಹಾಕಲು ಅಲ್ಲಿನ ಆರೆಸ್ಸೆಸ್ ವಿದ್ಯಾರ್ಥಿ ಒಕ್ಕೂಟ ಪ್ರಭಾವ ಬೀರಿತ್ತಲ್ಲದೆ ಸ್ಮೃತಿ ಇರಾನಿಯವರು ಮಂತ್ರಿಗಳಾಗಿರುವ ಮಾನವ ಸಂಪನ್ಮೂಲ ಇಲಾಖೆಗೆ ಪತ್ರ ಬರೆದು 'ಅಂಬೇಡ್ಕರ್-ಪೆರಿಯಾರ್ ಸ್ಟಡಿ ಸರ್ಕಲ್' ಅನ್ನು ನಿಷೇಧಿಸುವಲ್ಲಿ ಸಫಲವಾಗಿತ್ತು. ಆರ್ಗನೈಜರ್ ಪತ್ರಿಕೆಯಲ್ಲಿ ಅಂಬೇಡ್ಕರರನ್ನು ದೇಶ ಕಂಡ ಮಹಾನ್ ಪುತ್ರ ಎಂದು ಬಿಂಬಿಸುವ ಇದೇ ಆರೆಸ್ಸೆಸ್ ವಿದ್ಯಾರ್ಥಿ ಒಕ್ಕೂಟ ಮದ್ರಾಸಿನಲ್ಲಿ ಅಂಬೇಡ್ಕರ್ ಹೆಸರನ್ನೇ ಬಳಸಬಾರದೆಂದು ತಾಕೀತು ಮಾಡಿದ್ದೇಕೆ?

ಮತ್ತೊಂದು ಉದಾಹರಣೆಯಾಗಿ ತೀರ ಇತ್ತೀಚೆಗೆ ಗುಜರಾತಿನ ಬಿಜೆಪಿ ಸರ್ಕಾರ ಅಂಬೇಡ್ಕರರ 125ನೇ ಜನ್ಮ ದಿನಾಚರಣೆಯ ಪ್ರಯುಕ್ತ ವರ್ಷವಿಡೀ ಕಾರ್ಯಕ್ರಮ ಹಮ್ಮಿಕೊಂಡಿದ್ದು ಅದರ ಭಾಗವಾಗಿ ಪ್ರತಿ ಶಾಲೆಗಳಿಗೆ ಉಚಿತವಾಗಿ ಅಂಬೇಡ್ಕರರ ಜೀವನವನ್ನು ತಿಳಿಸುವ ಪುಸ್ತಕಗಳನ್ನು ಮಕ್ಕಳಿಗೆ ನೀಡಿತ್ತು. ಆದರೆ ಆ ಪುಸ್ತಕವು ಹಿಂದೂ ಧರ್ಮದವರ ಭಾವನೆಗೆ ಧಕ್ಕೆ ತರುತ್ತದೆ ಎಂಬ ಕಾರಣ ಕೊಟ್ಟು ಎಲ್ಲಾ ಪುಸ್ತಕಗಳನ್ನು ಹಿಂಪಡೆದಿದೆ. ಹೀಗೆ ಹಿಂಪಡೆಯಲು ಆ ಪಠ್ಯ ಪುಸ್ತಕದಲ್ಲಿದ್ದ ಹಿಂದೂ ಧರ್ಮೀಯರಿಗೆ ಧಕ್ಕೆ ತರಬಹುದಾದಂತಹ ಅಂಶವೇನು? ಅವು ಅಂಬೇಡ್ಕರರು ಬೌದ್ಧ ಧರ್ಮಕ್ಕೆ ಮರಳುವಾಗ ಮಾಡಿದ್ದ 22 ಪ್ರತಿಜ್ಞೆಗಳು. ಆ ಪ್ರತಿಜ್ಞೆಗಳು ಇಂತಿವೆ.

1. ಬ್ರಹ್ಮನನ್ನಾಗಲಿ, ವಿಷ್ಣುವನ್ನಾಗಲಿ, ಶಿವನನ್ನಾಗಲಿ ನಾನು ದೇವರೆಂದು ಭಾವಿಸುವುದಿಲ್ಲ, ವಂದಿಸುವುದಿಲ್ಲ.
2. ರಾಮನನ್ನಾಗಲಿ, ಕೃಷ್ಣನನ್ನಾಗಲಿ ನಾನು ದೇವರೆಂದು ಭಾವಿಸುವುದಿಲ್ಲ, ವಂದಿಸುವುದಿಲ್ಲ.
3. ಹಿಂದೂ ದೈವಗಳೆನ್ನಲಾಗುವ ಗೌರಿ, ಗಣೇಶ ಇತ್ಯಾದಿಗಳನ್ನು ನಾನು ದೇವರೆಂದು ಭಾವಿಸುವುದಿಲ್ಲ, ಅವುಗಳಿಗೆ ವಂದಿಸುವುದಿಲ್ಲ.
4. ದೇವರು ಅವತಾರ ತಾಳಿದನು ಎಂಬುದನ್ನಾಗಲಿ, ಯಾವ ಒಂದು ರೂಪದಲ್ಲಾಗಲಿ ಅವನ ಅವತಾರವಿದೆಯೆಂದಾಗಲಿ ನಾನು ನಂಬುವುದಿಲ್ಲ.
5. ಭಗವಾನ್ ಬುದ್ಧ ಮಹಾವಿಷ್ಣುವಿನ ಅವತಾರವೆಂಬುದನ್ನು ನಾನು ನಂಬುವುದಿಲ್ಲ. ಹಾಗೆ ಪ್ರಚಾರ ಮಾಡುವುದು ಉದ್ದೇಶಪೂರ್ವಕ ಅಪಪ್ರಚಾರವೆಂದು ನಾನು ಮನಸಾರೆ ನಂಬುತ್ತೇನೆ.
6. ಮರಣಕ್ಕೆ ಸಂಬಂಧಿಸಿದಂತೆ ಹಿಂದೂ ಧರ್ಮದ ಸಂಸ್ಕಾರ ಅನುಷ್ಠಾನಗಳನ್ನು ತಿಥಿ-ಶ್ರಾದ್ಧಕಾರ್ಯಗಳನ್ನು ನಾನು ಮಾಡುವುದಿಲ್ಲ, ಸತ್ತವರ ಹೆಸರಿನಲ್ಲಿ ನಾನು ಪಿಂಡ ಕೊಡುವುದಿಲ್ಲ.
7. ಬೌದ್ಧ ಧರ್ಮಕ್ಕೆ ವಿರೋಧವಾದ ಕಾರ್ಯಾಚರಣೆಯನ್ನು ನಾನು ಎಂದಿಗೂ ಮಾಡುವುದಿಲ್ಲ.
8. ಬ್ರಾಹ್ಮಣರಿಂದ ನಡೆಸಲಾಗುವ ಸಂಸ್ಕಾರ ಕಾರ್ಯಗಳನ್ನು ನಾನು ಒಪ್ಪುವುದಿಲ್ಲ, ಭಾಗಿಯಾಗುವುದಿಲ್ಲ.
9. ಮಾನವರು ಎಲ್ಲರೂ ಸರಿಸಮಾನರು ಎಂಬ ತತ್ವವನ್ನು ನಾನು ನಂಬುತ್ತೇನೆ.
10. ಸಮಾಜದಲ್ಲಿ ಸಮಾನತೆಯನ್ನು ಸ್ಥಾಪಿಸಲು ನಾನು ಎಡಬಿಡದೆ ಶ್ರಮಿಸುವೆನು.
11. ಭಗವಾನ್ ಬುದ್ಧನು ಹೇಳಿದ ಎಂಟು ಅಂಶದ ಶೀಲವನ್ನು ನಾನು ಪರಿಪಾಲಿಸುತ್ತೇನೆ.
12. ಬುದ್ಧ ಧರ್ಮದ 10 ಪರಿಮಿತಿಗಳನ್ನು ನಾನು ಪಾಲಿಸುತ್ತೇನೆ.
13. ಎಲ್ಲ ಪ್ರಾಣಿಗಳಲ್ಲಿಯೂ ಕರುಣೆಯಿಟ್ಟು ಅವುಗಳನ್ನು ರಕ್ಷಿಸಿ ಕಾಪಾಡಲೂ ಪ್ರಯತ್ನಿಸುವೆ.
14. ನಾನು ಸುಳ್ಳು ಹೇಳುವುದಿಲ್ಲ.
15. ನಾನು ಕಳುವು ಮಾಡುವುದಿಲ್ಲ.
16. ಕಾಮಾತುರನಾಗಿ, ಲೈಂಗಿಕ ಸುಖದಲ್ಲಿ ನಾನು ಹದ್ದು ಮೀರುವುದಿಲ್ಲ.
17. ಬುದ್ಧಿ ಭ್ರಮಣೆ ಬರಿಸುವ ಮಧುವನ್ನು ಅದರಂತಹ ಇತರ ಮದ್ಯಗಳನ್ನು ನಾನು ಸೇವಿಸುವುದಿಲ್ಲ.
18. ಜ್ಞಾನ, ಕರುಣೆ, ಬುದ್ಧಿವಾದಗಳಿಗೆ ಮೂಲಭೂತವಾದ ಬುದ್ಧ ಬೋಧನೆಗಳಿಗೆ ಅನುಸಾರವಾಗಿ ನನ್ನ ಜೀವನವನ್ನು ರೂಪಿಸಲು ನಾನು ಸತತ ಪ್ರಯತ್ನಿಸುತ್ತೇನೆ.
19. ಬ್ರಾಹ್ಮಣರನ್ನು ಮೇಲು ಹುಟ್ಟೆಂದು ಇತರ ಜನರನ್ನು ಹೀನ ಹುಟ್ಟುಗಳೆಂದು ಭಾವಿಸುವುದಾಗಲಿ, ಅವರಿಗೆ ಸಮಾನತೆ ತೋರಬಾರದೆಂದು ನೆನೆವುದಾಗಲಿ, ಮಾನವನ ಅಡಿಯಾಳುತನ ಬದುಕಿಗೆ ವಿರುದ್ಧವಾಗಿ ಏನನ್ನೂ ನಾನು ಮಾಡುವುದಿಲ್ಲ. ಅಂಥ ದುರಾಚಾರದ ಹಿಂದೂ ಧರ್ಮವನ್ನು ತ್ಯಜಿಸಿ ನಾನು ಬುದ್ಧ ಧರ್ಮವನ್ನು ಅವಲಂಬಿಸುತ್ತೇನೆ.
20. ಬುದ್ಧ ಧರ್ಮವೇ ಮಾನವತೆಗೆ ಶ್ರೇಷ್ಠವಾದ ಧರ್ಮವೆಂದು ನಾನು ಭಾವಿಸುತ್ತೇನೆ.
21. ನಾನು ಈ ದಿನ ಹೊಸ ಹುಟ್ಟನ್ನು ತಾಳಿದ್ದೇನೆಂದು ಭಾವಿಸುತ್ತೇನೆ.
22. ಬುದ್ಧ ಬೋಧನೆಗಳಿಗೆ ಅನುಸಾರವಾಗಿ ಇಂದಿನಿಂದ ಕಾರ್ಯಾಚರಣೆಗಳನ್ನು ಮಾಡುತ್ತೇನೆಂದು ಘೋಷಿಸುತ್ತೇನೆ.

ಅಂಬೇಡ್ಕರರನ್ನು, ಬುದ್ಧನನ್ನು ಹಾಡಿ ಹೊಗಳಲು ಶುರು ಮಾಡಿರುವ ಸಂಘ ಪರಿವಾರದವರಿಗೆ ಮತ್ತು ಅವರ ಶ್ರೀರಕ್ಷೆಯಲ್ಲಿ ಬದುಕುತ್ತಿರುವ ರಾಜಕೀಯ ಪಕ್ಷಕ್ಕೆ ಈ ಮೇಲಿನ ಅಂಬೇಡ್ಕರರ ಪ್ರತಿಜ್ಞೆಗಳಲ್ಲಿ ಹಿಂದೂ ಧರ್ಮದ ಬಗ್ಗೆ ಇರುವ ಅಸಮಾಧಾನದ ಕಾರಣಗಳು ತಿಳಿದಿಲ್ಲವೆ? ಅಂಬೇಡ್ಕರರು ಹಿಂದೂ ಧರ್ಮವನ್ನು ತೊರೆಯಲು ಕಾರಣವಾಗಿದ್ದ ಅನಿಷ್ಟಗಳನ್ನು ತೊಡೆಯಲು ಈ ಆರು ದಶಕಗಳಲ್ಲಿ ಅಣಿಯಾಗಬಹುದಿತ್ತಲ್ಲವೆ? ಭಾರತದಾದ್ಯಂತ ದಲಿತರ ಮೇಲೆ ನಡೆಯುವ ದೌರ್ಜನ್ಯಗಳು ಹತ್ಯೆಗಳ ವಿರುದ್ಧ ಸಿಡಿದೆದ್ದು ಸವರ್ಣೀಯರನ್ನು ಹದ್ದುಬಸ್ತಿನಲ್ಲಿಟ್ಟೋ, ಮನಪರಿವರ್ತಿಸಿಯೋ ದಲಿತರಿಗೆ ರಕ್ಷಣೆ ನೀಡಬಹುದಿತ್ತಲ್ಲವೆ? ಜಾತಿಪದ್ಧತಿಯನ್ನು ನಾಶ ಮಾಡಲು ನಡೆಯುತ್ತಿರುವ ಹೋರಾಟಗಳಲ್ಲಿ ಭಾಗವಹಿಸಬಹುದಲ್ಲವೆ? ದಲಿತರ ಹೆಣ್ಣುಮಕ್ಕಳನ್ನು ಮೇಲ್ಜಾತಿಯ ತಮ್ಮ ಸಂಘಟನೆಯವರು ಕಡ್ಡಾಯವಾಗಿ ಮದುವೆಯಾಗಬೇಕೆಂದು ನಿಯಮ ಮಾಡಬಹುದಲ್ಲವೆ? ಖಾಸಗಿ ಕಂಪನಿಗಳಲ್ಲಿ ಮೀಸಲಾತಿಗಾಗಿ ಪಟ್ಟು ಹಿಡಿಯಬಹುದಿತ್ತಲ್ಲವೆ? ಹೀಗೆ ನಾನು ಅನೇಕ ಪ್ರಶ್ನೆಗಳನ್ನು ಹಾಕಬಹುದು ಆದರೆ ಅದಕ್ಕೆಲ್ಲ ಅವರ ಬಳಿ ಉತ್ತರವಿಲ್ಲ, ಏಕೆಂದರೆ ಅವರಿಗೆ ಅಂಬೇಡ್ಕರರು ಬೇಕಾಗಿರುವುದು ಹಿಂದೂ ಧರ್ಮವನ್ನು ಕಟ್ಟುವಲ್ಲಿ ಕಾಲಾಳುಗಳಾಗುವ ದಲಿತರಿಗಾಗಿಯಷ್ಟೆ. ಅವರ ಓಟುಗಳಷ್ಟೆ. ಈಗಲೂ ಸಹ ಮಂಡ್ಯದ ಹುಲಿವಾನದ ದಲಿತರ ಮೇಲೆ ಮೇಲ್ಜಾತಿ ಮನಸ್ಸುಗಳು ಅಂತರ್ಜಾತಿ ವಿವಾಹದ ಕಾರಣವಿಟ್ಟುಕೊಂಡು ದೌರ್ಜನ್ಯವೆಸಗಿದ್ದಾರೆ. ಹಾಸನದ ಹೊಳೆನರಸೀಪುರದಲ್ಲಿ ದೇವಸ್ಥಾನ ಪ್ರವೇಶಿಸಿದ್ದಕ್ಕೆ ಅಲ್ಲಿನ ಸವರ್ಣೀಯ ಹಿಂದೂಗಳು ದಲಿತರ ಮೇಲೆ ದಂಡ ವಿಧಿಸಿದ್ದಾರೆ. ಈ ರೀತಿ ಹಲವಾರು ಪ್ರಕರಣಗಳನ್ನು ನಾನು ಉಲ್ಲೇಖಿಸಬಹುದು. ಆದರೆ ಈ ಯಾವ ಪ್ರಕರಣಗಳಲ್ಲೂ 'ಹಿಂದೂ ನಾವೆಲ್ಲ ಒಂದು' ಎನ್ನುವ ನಾಲಿಗೆಗಳು ದಲಿತರಪರ ಬೊಬ್ಬೆಗಿಟ್ಟಿಲ್ಲ. ಹಿಂದುಮುಂದು

▶▶ 16

14◀◀ ದಸರೆಯಲ್ಲಿ ಲಾರಿ ಏಟು...

ಏಕಾಭಿಪ್ರಾಯವಾಗಿತ್ತು. ಸುಂದರೇಶ್, ನಾಗರಾಜ್ ಮತ್ತು ಭದ್ರಪ್ಪ ಮೂವರು ಹೋಗಿ ನಂಜುಂಡಸ್ವಾಮಿಯವರನ್ನ ಕರೆದರೆ ಆವರಿದ್ಯೋರು ನನ್ನ ಪತ್ರ ಈ ರೈತರನ್ನ ಕಟ್ಟಕೊಂಡು ಏಗಕ್ಕಾಗಲ್ಲ ಅಂತ ನಿರಾಕರಿಸಿದರು. ನಾನು ಲಂಕೇಶರಿಗೆ ಒಂದು ಪತ್ರ ಬರೆದೆ. ಗಾಂಧಿ ಜಯಂತಿ ದಿನ ಬೃಹತ್ ಸಭೆ ನಡೆಸಿ ಹೋರಾಟವನ್ನು ತೀವ್ರಗೊಳಿಸಲು ನಿರ್ಧರಿಸಿದ್ದೇವೆ. ನೀವು ಅಂದು ನಂಜುಂಡಸ್ವಾಮಿ ಮತ್ತು ಶಂಕ್ರಪ್ಪರನ್ನು ಕರೆದುಕೊಂಡು ಬರಲೇಬೇಕು. ನೀವು ರೈತರಿಗೆ ಹುಟ್ಟಿದವರಾದರೆ ಬಂದೇ ಬರುತ್ತೀರಿ ಅಂತಾ ಬರೆದೆ. 'ರೈತರಿಗೆ ಹುಟ್ಟಿದವರಾದರೆ' ಅನ್ನೋ ಪದವನ್ನೇ ಉಪಯೋಗಿಸಿದ್ದೆ. ಲಂಕೇಶರೇ ಟ್ಯಾಕ್ಸಿ ಮಾಡಿಕೊಂಡು ನಂಜುಂಡಸ್ವಾಮಿ ಮತ್ತು ಶಂಕ್ರಪ್ಪರನ್ನು ಕರೆತಂದಿದ್ದರು. ಅಂದಿನ ಸಭೆಯಲ್ಲಿ ಸುಮಾರು ಇಪ್ಪತ್ತೈದು ಸಾವಿರ ರೈತ ಹೋರಾಟಗಾರರು ಸೇರಿದ್ದರು. ಸಭೆಗೆ ಜಾರ್ಜ್ ಫರ್ನಾಂಡಿಸ್‌ರನ್ನು ಅವರ ಸೋಷಿಯಲಿಸ್ಟ್ ಗೆಳೆಯರಾದ ರವಳಪ್ಪ ಪೊನ್ನಮ್ಮಾಳ್ ಮತ್ತಿತರರು ಕರೆತಂದಿದ್ದರು. ಆದರೆ ಹೋರಾಟಕ್ಕೆ ರೈತ ಹೋರಾಟಗಾರರು ಸಜ್ಜಾಗಿದ್ದೆವು. ಮರುದಿನದಿಂದಲೇ ಶಿವಮೊಗ್ಗ ನಗರಕ್ಕೆ ಪ್ರವೇಶ ನೀಡುವ ಪುರಲೆ, ಮಲವಗೊಪ್ಪ, ಆಯನೂರು, ಗಾಜನೂರು, ಸೂಗೂರು ಗ್ರಾಮಗಳಲ್ಲಿ ರಸ್ತೆ ತಡೆ ಚಳವಳಿ ಹಮ್ಮಿಕೊಂಡ್ವಿ. ನಗರದ ಜನ ಕಂಗಾಲಾಗತೊಡಗಿದರು. ಹಾಲಿಲ್ಲ, ತರಕಾರಿ ಇಲ್ಲ, ಆ ವಾರದ ಸಂತೆ ನಡೀಲಿಲ್ಲ. ಹೊಟೇಲ್‌ಗಳು ವಿಧಿಯಿಲ್ಲದೆ ಬಾಗಿಲು ಮುಚ್ಚ ತೊಡಗಿದವು. ಸರ್ಕಾರ ಮಾತುಕತೆಗೆ ಕರೆಯೋ ಬದಲು ಹೋರಾಟಗಾರರನ್ನು ಜೈಲಿಗೆ ತುಂಬತೊಡಗಿತು. ಸರ್ಕಾರ ಜೈಲಿಗೆ ತುಂಬಿದಷ್ಟು ಹೋರಾಟದ ಸಾಗರಕ್ಕೆ ಜಿಗಿಯುವ ರೈತರ ಸಂಖ್ಯೆ ಹೆಚ್ಚಾಗೋಕೆ ಶುರುವಾಯಿತು. ಎಲ್ಲಿ ನೋಡಿದರೂ ಬಸ್ಸು, ಲಾರಿ ವಾಹನಗಳನ್ನು ರೈತರು ತಡೆ ಹಿಡಿಯತೊಡಗಿದರು. ಪಿಕೆಟಿಂಗ್ ಪ್ರಾರಂಭಿಸಿ ಸರ್ಕಾರಿ ಕಚೇರಿಗಳನ್ನು ಮುಚ್ಚೋ ಹಾಗೆ ಮಾಡಿದರು. ರೈತರಿಂದ ಜೈಲುಗಳು ತುಂಬತೊಡಗಿದವು. ನಮ್ಮನ್ನೆಲ್ಲ ಶಿವಮೊಗ್ಗ ಜೈಲಿಗೆ ಹಾಕಿದರು. ಶಿವಮೊಗ್ಗ ಜೈಲಿನಲ್ಲಿ ಜಾಗ ಇಲ್ಲದೆ ಬೆಳಗಾವಿ,



ನಂಜುಂಡಸ್ವಾಮಿ ಇದ್ದವರು ಜಾರ್ಜ್‌ರನ್ನು ವೇದಿಕೆಯ ಮೇಲೆ ಕೂರಿಸಲು ಸಮ್ಮತಿಸಲಿಲ್ಲ. ಯಾವ ರಾಜಕಾರಣಿಗೂ ಈ ವೇದಿಕೆಯಲ್ಲಿ ಜಾಗ ಇಲ್ಲ ಅಂಥ ನಿರ್ದಾಕ್ಷಿಣ್ಯವಾಗಿ ಹೇಳಿದರು. ಹಾಗಂತ ನಮ್ಮ ಸಮಿತಿಯವರು ನಿರ್ಧರಿಸಿದ್ದಲ್ಲ. ನಂಜುಂಡಸ್ವಾಮಿಯವರೇ ಆ ಕ್ಷಣದಲ್ಲಿ ತೆಗೆದುಕೊಂಡ ನಿರ್ಧಾರವದು ಮತ್ತು ನಮಗೆಲ್ಲರಿಗೂ ಆ ನಿರ್ಧಾರ ಸರ್ವಸಮ್ಮತವಾಗಿತ್ತು. ಜಾರ್ಜ್‌ರನ್ನು ಕೊನೆಗೂ ವೇದಿಕೆ ಮೇಲೆ ಕೂರಿಸಲಿಲ್ಲ. ಈ ದಿನದಿಂದ ರೈತ ಹೋರಾಟಕ್ಕೆ ನಂಜುಂಡಸ್ವಾಮಿಯವರ ಸಕ್ರಿಯ ಪ್ರವೇಶವಾಯಿತು.


'ಧರಣಿ ತೆಗೀರಿ ಮಾತುಕತೆಗೆ ಕರೀತಿವಿ ಅಂತ ಸರ್ಕಾರ ಘೋಷಿಸಿತ್ತು ಬೆಳಗ್ಗೆಯಿಂದ ಧರಣಿ ತೆಗೆದಿದ್ದೀವಿ ಆದರೂ ಮಾತುಕತೆಗೆ ಕರೆದಿಲ್ಲ. ನಾಳೆಯಿಂದ ರಸ್ತೆ ತಡೆ ಚಳವಳಿ ನಡೆಯಲಿದೆ. ಶಿವಮೊಗ್ಗ ನಗರಕ್ಕೆ ನಾಳೆಯಿಂದ ಹಾಲು, ತರಕಾರಿ, ಕಟ್ಟಿಗೆ ಯಾವ ವಸ್ತುಗಳೂ ಬರಬಾರದು. ಯಾವ ರೈತರು ಇವುಗಳನ್ನು ತಂದು ಕೊಡಬಾರದು. ಹಾಗೇನಾದರೂ ಯಾರಾದ್ರೂ ಹಾಲು ಇತ್ಯಾದಿಗಳನ್ನು ಮಾರಾಟ ಮಾಡಿದ್ದು ತಿಳಿದರೆ ಅವರಿಗೆ ಹಳ್ಳಿಯವರೇ ದಂಡ ಹಾಕಬೇಕು' ಎಂದು ಗಾಂಧಿ ಜಯಂತಿಯ ದಿನದ ಸಭೆಯಲ್ಲಿ ಕರೆಕೊಡಲಾಯಿತು. ಅಂದಿಗೆ ನಲವತ್ತೆಂಟು ದಿನಗಳ ಸತತ ಸರದಿ ಉಪವಾಸ ಸತ್ಯಾಗ್ರಹ ಮುಗಿದು ಮತ್ತೊಂದು ಬಳ್ಳಾರಿ ಜೈಲಿಗೂ ಸಾವಿರಾರು ರೈತರನ್ನು ರವಾನಿಸಲಾಯಿತು. 'ಓ ರೈತ ಎಲ್ಲಿಗೆ? ಗುಂಡೂರಾವ್ ಜೈಲಿಗೆ' ಅನ್ನೋದು ಎಲ್ಲರ ಬಾಯಲ್ಲಿನ ಸೊಲ್ಲಾಯಿತು. ಹಾಗೆ ಕೂಗ್ತಾನೆ ರೈತರು ಹುರುಪಿನಿಂದ ಜೈಲಿಗೆ ಹೋಗೋಕೆ ಪ್ರಾರಂಭಿಸಿದರು. ಜೈಲಿಗೆ ಹೊರಟ ರೈತರಿಗೆ ಹೆಂಗಸರು ಮಕ್ಕಳು ಆರತಿ ಬೆಳಗಿ ಕಳುಹಿಸಿದಂತ ಘಟನೆಗಳು ನಡೆದವು. ಮ್ಯಾಜಿಸ್ಟ್ರೇಟ್ ಸಾಹೇಬರು ರಾತ್ರೋ ರಾತ್ರಿ ಬಿಡುಗಡೆ ಮಾಡಿ ಕಳುಹಿಸಬೇಕಾದ ಸಂದರ್ಭಗಳು ಬಂದೊದಗಿದವು. ಯಾಕೆಂದರೆ ಮತ್ತೆ ಬೆಳಗಿಗೆ ವಿಚಾರಣೆ ಇಟ್ಟುಕೊಂಡರೆ ಅಷ್ಟು ಸಂಖ್ಯೆಯ ಬಂಧಿತ ರೈತರಿಗೆ ಊಟ ವಸತಿ ಏರ್ಪಡಿಸಬೇಕಾಗುತಿತ್ತು. ಮ್ಯಾಜಿಸ್ಟ್ರೇಟರು ತಪ್ಪೊಪ್ಪಿಗೆ ಬರೆದುಕೊಡಲು ಹೇಳಿದರೆ ನಾವು ರೈತರು ನಾವೇನು ತಪ್ಪು ಮಾಡಿಲ್ಲ. ನಾವು ಬರೆದುಕೊಡಲ್ಲ. ಬೇಕಿದ್ರೆ ಮತ್ತೆ ಜೈಲಿಗೆ ಕಳಿಸಿ ನಾವು ಹೋಗಲು ತಯಾರಿದ್ದೀವಿ ಎಂದು ಹೇಳತೊಡಗಿದ್ವಿ. ಯಾವುದೇ ನಿರ್ಬಂಧನೆಗಳಿಲ್ಲದೆ ಬಿಡುಗಡೆ ಮಾಡುವುದಾದರೆ ಮಾಡಿ ಎನ್ನತೊಡಗಿದೆವು. ಕೊನೆಗೂ ಸರ್ಕಾರ ಎಚ್ಚೆತ್ತು ರಸ್ತೆ ತಡೆ ನಿಲ್ಲಿಸಿ ಮಾತು ಕತೆಗೆ ಬನ್ನಿ ಎಂದು ರೈತ ಹೋರಾಟಗಾರರನ್ನು ಆಹ್ವಾನಿಸಿತು.

ಕೃಪೆ: ಕಾಡು ತೊರೆಯ ಜಾಡು
ಅಹರ್ನಿಶಿ ಪ್ರಕಾಶನ

12◀◀ ಸಿಂಧೂರದ ಕುಜ್ಞಾನ

ಇವೆರಡೂ ಎಲಿಮೆಂಟುಗಳು (ಸೀಸ ಮತ್ತು ಪಾದರಸ) ಪ್ರಯೋಗಾಲಯದ ಪ್ರಾಣಿಗಳಲ್ಲಿ ಕ್ಯಾನ್ಸರ್‌ಗೆ ಕಾರಣವಾಗಿರುವುದು ದೃಢಪಟ್ಟಿದೆ. ಆದರೆ ಮನುಷ್ಯನಲ್ಲೂ ಇವು ಕ್ಯಾನ್ಸರ್‌ಕಾರಕಗಳೇ ಎಂಬ ಬಗ್ಗೆ ಇನ್ನೂ ಸ್ಪಷ್ಟವಾಗಿಲ್ಲವಾದರು ವಿಜ್ಞಾನ ಆ ಸಾಧ್ಯತೆಯನ್ನೂ ತಳ್ಳಿಹಾಕಿಲ್ಲ. ಮನುಷ್ಯನ ದೇಹದ ಮೇಲೆ ಇಷ್ಟೆಲ್ಲಾ ನಂಜು ಪರಿಣಾಮಗಳನ್ನು ಹೊಂದಿರುವ ಪಾದರಸ ಮತ್ತು ಸೀಸ ಮಿಶ್ರಿತ ಸಿಂಧೂರಕ್ಕೆ ಅರ್ಥವಿಲ್ಲದ, ದಾಖಲೆಗಳಿಲ್ಲದ ವೈಜ್ಞಾನಿಕ ಹುಚ್ಚಾಟಗಳನ್ನು ಆರೋಪಿಸಿ ಅದು ಭಾವನೆಗಳನ್ನು ನಿಯಂತ್ರಿಸುತ್ತದೆ, ರಕ್ತದೊತ್ತಡವನ್ನು ಹದ್ದುಬಸ್ತಿನಲ್ಲಿಡುತ್ತದೆ ಎಂಬ ಮಿಥ್ಯಗಳ ಮೂಲಕ ಜನರ ಆರೋಗ್ಯದ ಮೇಲೆಯೇ ದಾಳಿ ಮಾಡುತ್ತಿರೋದು ನಿಜಕ್ಕೂ ಒಂದು ಅಪರಾಧವೇ ಸರಿ.

ಈ ವಾಟ್ಸಪ್ ಸಂದೇಶದ ಮತ್ತೊಂದು ಕುಚೋದ್ಯವೇನೆಂದರೆ ಸಿಂಧೂರವನ್ನು ಪಿಟ್ಯುಟರಿ ಗ್ರಂಥಿಯವರೆಗೆ ಲೇಪಿಸಿಕೊಳ್ಳಬೇಕಂತೆ. ತಕ್ಕಡಿ ಇಟ್ಟು ತೂಗಿದರೆ ಅರ್ಧ ಗ್ರಾಮ್‌ಗಿಂತ (0.5 ಗ್ರಾಂ) ಕಡಿಮೆ ತೂಕದ ಈ ಪಿಟ್ಯುಟರಿ ಗ್ರಂಥಿಯನ್ನು ಮಾಸ್ಟರ್ ಗ್ಲಾಂಡ್ ಎಂದು ಕರೆಯಲಾಗುತ್ತದೆ. ಏಕೆಂದರೆ ದೇಹದ ಬೆಳವಣಿಗೆ, ರಕ್ತದೊತ್ತಡ, ಜನನಾಂಗಗಳ ಕ್ರಿಯೆ, ಥೈರಾಯ್ಡ್ ಗ್ರಂಥಿ, ಚಯಾಪಚಯ ಕ್ರಿಯೆ, ಎದೆಹಾಲು ಸ್ರವಿಕೆ ಮೊದಲಾದವನ್ನು ನಿಯಂತ್ರಿಸುವ ಸುಮಾರು ಒಂಬತ್ತು ಬಗೆಯ ಹಾರ್ಮೋನ್‌ಗಳನ್ನು ಉತ್ಪಾದಿಸಿ ಸ್ರವಿಸುವುದು ಈ ಕುಬ್ಜ ಗ್ರಂಥಿಯ ಕಾಯಕ. ಇಂತಹ ಅತ್ಯಮೂಲ್ಯವಾದ ಗ್ರಂಥಿಯನ್ನು ನಮ್ಮ ದೇಹ ಅಬೇಧ್ಯ ಕೋಟೆಯೊಳಗೆ ಬಹಳ ಜತನ ಮಾಡಿಟ್ಟುಕೊಂಡಿದೆ. ಮೇಲಿನ ಸಂದೇಶ ಓದುತ್ತಿದ್ದರೆ ಈ ಗ್ರಂಥಿ, ನಮ್ಮ ನೆತ್ತಿಯ ... ತಲೆಬುರುಡೆ ಚರ್ಮದ ಜಸ್ಟ್ ಕೆಳಗೆ ಹುದುಗಿಕೊಂಡಿದೆ, ನೆತ್ತಿಯವರೆಗೆ ಲೇಪಿಸಿಕೊಂಡರೆ ಅದು ಚರ್ಮವನ್ನು ಹಾದು ... ಗ್ರಂಥಿಯನ್ನು ಉದ್ದೀಪಿಸಿ ಬಿಡುತ್ತೆ ಎಂ... ಮೂಡಿಬರುತ್ತೆ. ಅಸಲಿಗೆ ಪಿಟ್ಯುಟರಿ ಗ್ರಂಥಿ ... ಭದ್ರ ಕಪಾಲ ಬುರುಡೆಯೊಳಗೆ ಬಂಧಿ...



ಸಂಕೀರ್ಣ ಮೆದುಳಿನ ತಳಭಾಗದಲ್ಲಿ ಅ... ಟರ್ಸಿಕಾ (sella turcica) ಎಂಬ ... ಕುಹರದೊಳಗೆ. ಜೀವಾಧಾರಕ ಅಂಶಗಳ... ತಲುಪಬೇಕೆಂದರೆ ರಕ್ತ ಪ್ರವಾಹದ ಮೂ... ಸಾಧ್ಯವೇ ಹೊರತು, ನೇರವಾಗಿ ಕರಗಿ ಇಳಿಯು... ಅಲ್ಲ!

ಇಷ್ಟೆಲ್ಲಾ ವಿಶ್ಲೇಷಣೆಯ ನಂತರ ಈ ಇ... ಸಂದೇಶವನ್ನು ಒಂದೇ ಮಾತಿನಲ್ಲಿ ತೂ... 'ಇದೊಂದು ನಾನ್‌ಸೈನ್ಸ್ ಮತ್ತು ನಾನ್‌ಸೆನ್... ಎನ್ನಬಹುದಷ್ಟೆ....

ಹಾಯ್ಕುಗಳು



1
ಬೆನ್ನ ಮೇಲಿದೆ
ಪುಸ್ತಕ ಮಣಭಾರ
ಮಗು ನಕ್ಕಿತು

2
ಎಲೆಯ ಮೇಲೆ
ಹೊಳೆವ ಮಂಜಹನಿ
ನಗುವ ಸೂರ್ಯ

3
ಮಳೆ ಬಂದಿದೆ
ಎಲ್ಲೆಲ್ಲೂ ಕೆಂಪು ರಕ್ತ
ರಸ್ತೆಯ ಗುಂಡಿ

4
ಮಗು ಅತ್ತಿದೆ
ಎತ್ತಿಕೊಂಡಿತು ಓಡಿ
ತಾಯಿ ಮಮತೆ

5
ನೆಲ ಬಿರಿದು
ಮೊಳಕೆಯೊಡೆಯಿತು
ಮಗು ಅತ್ತಿತು

6
ನಕ್ಕ ಹೂಗಳು
ಓಡಿ ಬಂದ ಮಕ್ಕಳು
ಶಾಲೆ ಬಿಟ್ಟಿದೆ

7
ಈ ಗಾಳಿಗೆ ಬೇರೆ ಕೆಲಸವೇ ಇಲ್ಲ
ಮನೆಯಿಂದ ಮನೆಗೆ
ಸುದ್ದಿ ಮುಟ್ಟಿಸುವುದ ಹೊರತು

8
ಮೇಲೆ ಓಡುವ ರೈಲು
ಕೆಳಗೆ ಹರಿಯುವ ನದಿ
ಸೇತುವೆ ಗಟ್ಟಿಯಾಗಿದೆ.

9
ಮುಗ್ಧ ಮಗಳ ಮುಖದಲ್ಲಿ
ಮುಗುಳ್ನಗೆ
ಗುಲಾಬಿ ತೋಟ

■ ಹರಿನಾಥ ಬಾಬು, ...

ಹಿಂದೂವಾಗಿ ಸಾಯಲಾರೆ 15◀◀

ನೋಡುತ್ತವೆ. ದಲಿತರ ಪರ ಈ ಸಂಘಪರಿವಾರದವರು ಬೀದಿಗಿಳಿದ ಒಂದೂ ಉದಾಹರಣೆಗಳು ಇತಿಹಾಸದ ಪುಟಗಳಲ್ಲಿ ನಮಗೆ ಸಿಗುವುದಿಲ್ಲ.

ಇವರಿಗೆ ನಿಜಕ್ಕೂ ಅಂಬೇಡ್ಕರ್ ಅವರ ಆಶಯಗಳನ್ನು ನನಸು ಮಾಡುವ ಮನಸಿರುವುದಾದರೆ ಅಂಬೇಡ್ಕರ್ ಅವರೇ ಹಿಂದೂ ಧರ್ಮದ ಸುಧಾರಣೆಗೆ 'ಜಾತಿವಿನಾಶ' ಕೃತಿಯಲ್ಲಿ ನೀಡಿರುವ ಈ ಕೆಳಗಿನ ಅಂಶಗಳನ್ನು ಹಿಂದೂ ಧರ್ಮದ ರಕ್ಷಕರು ಪರಿಗಣಿಸುವರೇ? ಸವಾಲೆಂದು ಸ್ವೀಕರಿಸಿ ಹಿಂದೂ ಧರ್ಮದ ಉದ್ಧಾರಕ್ಕಾಗಿಯೇ ಶ್ರಮಿಸುವರೆ?

1. ಎಲ್ಲಾ ಹಿಂದೂಗಳಿಗೂ ಅನ್ವಯಿಸುವಂತಹ ಹಾಗೂ ಇಡೀ ಹಿಂದೂ ಸಮುದಾಯಕ್ಕೆ ಒಪ್ಪಿತವಾಗುವಂಥ ಏಕೈಕ ಮತ್ತು ಪ್ರಮಾಣಭೂತವಾದ ಒಂದು ಗ್ರಂಥವಿರಬೇಕು. ಅಂದರೆ ಈವರೆಗೆ ಪವಿತ್ರ ಧಾರ್ಮಿಕ ಗ್ರಂಥಗಳೆಂದು ಭಾವಿಸಲಾಗಿರುವ ವೇದಗಳು, ಶ್ರುತಿ-ಸ್ಮೃತಿಗಳು, ಶಾಸ್ತ್ರ-ಪುರಾಣಗಳು ನಿಜವಾದ ಧರ್ಮಗ್ರಂಥಗಳಲ್ಲ ಎಂದು ಘೋಷಿಸಿ, ಅವುಗಳನ್ನು ಕಾಯ್ದೆಬದ್ಧವಾಗಿ ರದ್ದುಗೊಳಿಸಬೇಕು. ಅಲ್ಲದೆ ಈ ಕಂದಾಚಾರಿ ಗ್ರಂಥಗಳಿಗೆ ಅನುಗುಣವಾಗಿ ಯಾರೇ ಯಾವುದೇ ಆಚಾರ ವ್ರತ ತತ್ವಗಳನ್ನು ಬೋಧಿಸಲು ಯತ್ನಿಸಿದರೆ ಅದೊಂದು ದಂಡನಾರ್ಹ ಅಪರಾಧವೆಂದು ಪರಿಗಣಿಸತಕ್ಕದ್ದು.

2. ಹಿಂದೂಗಳಲ್ಲಿ ಪಾರಂಪರಿಕವಾಗಿ ನಡೆದುಬಂದಿರುವ ಪೌರೋಹಿತ್ಯ ಹಾಗೂ ಸನಾತನ ಧಾರ್ಮಿಕ ಅಧಿಪತ್ಯ ಮುಂತಾದವುಗಳನ್ನು ಮುಲಾಜಿಲ್ಲದೆ ರದ್ದುಪಡಿಸಬೇಕು. ಆದರೆ ಇದು ತುಸು ಕಷ್ಟಸಾಧ್ಯ ಅಥವಾ ಅಸಾಧ್ಯ ಎಂದು ಎನಿಸುವುದರಿಂದ ಕೊನೆಯ ಪಕ್ಷ ಅದು ಅನುವಂಶಿಕವಾಗಿರದಂತೆ ಕ್ರಮ ಕೈಗೊಳ್ಳಬೇಕು. ಯಾವುದೇ ಧಾರ್ಮಿಕ ಸಂಸ್ಥೆಯಲ್ಲಿ ಪುರೋಹಿತನಾಗಲು, ಧರ್ಮಾಧಿಪತಿಯಾಗಲು ಎಲ್ಲಾ ಹಿಂದೂಗಳಿಗೂ ಸಮಾನವಾದ ಹಕ್ಕು ಇರುವಂತೆ ನೋಡಿಕೊಳ್ಳಬೇಕು. ಸರ್ಕಾರ ನಿಗದಿಗೊಳಿಸುವ ಪರೀಕ್ಷೆಯಲ್ಲಿ ಪಾಸಾಗಿ ಸರ್ಟಿಫಿಕೇಟ್ ಪಡೆದವನಿಗೆ ಮಾತ್ರ ಪೂಜಾರಿ ಪುರೋಹಿತ ಅಥವಾ ಧರ್ಮಾಧಿಪತಿ ಆಗುವ ಅಧಿಕಾರ ಇರತಕ್ಕದ್ದು.

3. ಸರ್ಕಾರದಿಂದ ಸನ್ನದ ಪಡೆದುಕೊಳ್ಳದೆ ಯಾವುದೇ ಧಾರ್ಮಿಕ ಕಾರ್ಯಕ್ರಮಗಳನ್ನು ನೆರವೇರಿಸುವ ಪುರೋಹಿತರನ್ನು ಕಾಯ್ದೆಬಾಹಿರ ಕೆಲಸದಲ್ಲಿ ತೊಡಗಿ ಅಪರಾಧ ಎಸಗಿದ್ದಕ್ಕಾಗಿ ಶಿಕ್ಷೆ ವಿಧಿಸಬೇಕು.

4. ಯಾವುದೇ ಪುರೋಹಿತನನ್ನು ಸರ್ಕಾರಿ ನೌಕರನೆಂದು ಪರಿಗಣಿಸತಕ್ಕದ್ದು. ಆಗ ಅವನ ನೈತಿಕತೆ ನಂಬುಗೆ ಹಾಗೂ ಆರಾಧನೆಯ ವಿಷಯಕ್ಕೆ ಸಂಬಂಧಿಸಿದಂತೆ ಅವನು ಸರ್ಕಾರದ ಶಿಸ್ತಿನ ನಿಯಮಗಳಿಗೆ ಅಧೀನವಾಗಿರತಕ್ಕದ್ದು. ಅದರಿಂದಾಗಿ ಅವನು ನಾಡಿನ ಕಾಯ್ದೆಯಡಿಯಲ್ಲಿ ಸಾಮಾನ್ಯ ಪ್ರಜೆಗಳು ಬದುಕುವಂತೆ ಜೀವನ ನಡೆಸುವುದರ ಜೊತೆಗೆ ಸರ್ಕಾರಿ ಸೇವಾ ನಿಯಮಗಳಿಂದ ನಿಯಂತ್ರಿಸಲ್ಪಡಬೇಕು.

5. ಐ.ಸಿ.ಎಸ್ (ಐ.ಎ.ಎಸ್) ಮತ್ತು ಇತರ ಉನ್ನತ ಹುದ್ದೆಗಳ ವಿಷಯದಲ್ಲೆಂತೋ ಅಂತೆಯೇ ಪುರೋಹಿತರ ವಿಷಯದಲ್ಲೂ ಪ್ರಭುತ್ವ ಕಟ್ಟುನಿಟ್ಟಿನಿಂದ ನಡೆದುಕೊಳ್ಳಬೇಕು. ಅವರ ಸಂಖ್ಯೆಯನ್ನು ಅವಶ್ಯಕತೆಗೆ ತಕ್ಕಂತೆ ಮಿತಗೊಳಿಸಬೇಕು.

ಈ ರೀತಿ ಕ್ರಾಂತಿಕಾರಕ ಸಲಹೆಗಳನ್ನು ಹಿಂದೂ ಧರ್ಮವನ್ನು ಸುಧಾರಿಸುವಲ್ಲಿ ಹಿಂದೂ ಧರ್ಮದವರು ಕೈಗೊಳ್ಳಬೇಕು ಎಂದಿರುವ ಅಂಬೇಡ್ಕರರ ನೈಜ ಕಾಳಜಿಯನ್ನು ಹಿಂದೂತ್ವವಾದಿಗಳು ಸ್ವೀಕರಿಸುವರೇ? ಕೇವಲ ಅಂಬೇಡ್ಕರರು ವಾಸವಾಗಿದ್ದ ವಿದೇಶಿ ಬಂಗಲೆಯನ್ನು ಕೊಂಡುಕೊಳ್ಳುವುದರಿಂದ ಅಂಬೇಡ್ಕರರ ಅನ... ತಮ್ಮ ಹಿಂಬಾಲಕರಾಗಿ ತಮ್ಮ ಬತ್ತ... ಅಸ್ತ್ರವಾಗುತ್ತಾರೆ ಎಂದು ಭಾವಿಸುತ್ತಿರುವ ... ಗಳು ಅಂಬೇಡ್ಕರರು ಬಿಟ್ಟುಹೋಗಿರು... ಕ್ರಾಂತಿಯ ರಥವನ್ನು ಬೇಕೆಂದೇ ಮರೆಮಾ... ಬೇಕಾದ ಅಂಬೇಡ್ಕರರನ್ನು ಕಟ್ಟಿಕೊಳ್ಳುತ್ತಿ... ಬಾರಿ ಸುಳ್ಳು ಹೇಳಿ ಸತ್ಯವಾಗಿಸುವ ಪರಿ... ವಿಚಾರದಲ್ಲಿ ನಡೆಯುವುದು ಕಷ್ಟಕರ. ಏ... ಇಂದು ನಮ್ಮೊಂದಿಗೆ ಇಲ್ಲದಿದ್ದರೂ ಅವರು... ರುವ ಕೃತಿಗಳು ಅವರ ಧೋರಣೆಯನ್ನು ಮತ್ತ... ಸಾರಿ ಸಾರಿ ಹೇಳುತ್ತಿವೆ. ಅದನ್ನು ಜಗ... ಮಾನವತಾವಾದಿಗಳು ಜನತೆಗೆ ತಿಳಿಸಿ ಹೇಳ... ರಬಹುದು ಆದರೆ ಮುಂದೊಂದು ದಿನ ... ಮೂಲಭೂತವಾದಿಗಳಿಗೆ ಎತ್ತಿರುವ ಪ್ರಶ್ನೆ... ದೇಶದ ಪ್ರತಿ ಶೋಷಿತರೂ ಕೂಗಿ ಕೂಗಿ... ಳಂತೆಯೇ ಕೇಳುತ್ತಾರೆ. ಆಗ ಉತ್ತರ ಕೊಡಲ... ಸರದಿ ಹಿಂದೂತ್ವವಾದಿಗಳ ದ್ದಾಗಿರುತ್ತ... ಅಂಬೇಡ್ಕರ್ ಎಂಬ ಕೆಂಡವನ್ನು ಸೆರಗಿನಲ್ಲಿ... ವುದು ಸೆರಗಿಗೆ ಅಷ್ಟು ಸುಲಭವಲ್ಲ. ಒಳ್ಳೆ...

■ ವಿಕಾಸ ಆರ್ ...

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಬುದ್ಧ ಬಾಲಕನ ರೌಡಿಸಂ ಕಥೆಗಳು


...ಸ್ಥಳೀಯ ಮೂಲದಿಂದ ಅಥವಾ ಜಾತಿ/ ...ಮೂಲದಿಂದ ಯಾರಾದರೊಬ್ಬರು ಸಮಾಜದಲ್ಲಿ ...ರೀತಿಯಲ್ಲಿ ಗುರುತಿಸಿಕೊಂಡರೆ, ಜನಪ್ರಿಯರಾದರೆ ...ಆ ಸ್ಥಳೀಯರು ಮತ್ತು ಜಾತಿ/ಜನಾಂಗದವರು ...ರೀತಿಯಲ್ಲಿ ಆ ವ್ಯಕ್ತಿಯನ್ನು ಹಿಡಿದೆತ್ತಲು ...ರೆ. ಅದು ಬಹಳ ಸಾಧಾರಣವಾದಂತಹ ಮತ್ತು ...ಯೋಚಿಸ ಪಡುವ ಅಗತ್ಯವೇನೂ ಇಲ್ಲದಂತಹ ...ದಂತಹ ಅಭಿಮಾನ ಎನ್ನುವಂತೆ ವರ್ತಿಸುತ್ತಾರೆ.


ನಮ್ಮವರು

...ಸಣ್ಣವನಿದ್ದಾಗ ಮತ್ತು ಕೆಲವೊಮ್ಮೆ ಈಗಲೂ ...ರು ಮತ್ತು ಇತರ ಬಂಧುಗಳ ಮನೆಯಲ್ಲಿ ..." ಎಂಬ ಮಾತನ್ನು ಕೇಳುತ್ತೇನೆ. 'ನಮ್ಮವರು' ...ನೇರವಾಗಿ ನಮ್ಮ ಜಾತಿ ಜನರೆಂದೇ ಅರ್ಥ.









...ವರು ಎಂಬ ಶಬ್ದದ ಉಚ್ಚಾರಣೆಯ ಸಮೇತ ...ಕಾಲದಲ್ಲಿ ಸಹಾಯ ಮಾಡುವುದೋ ಅಥವಾ ...ಖಾನೆ ಬಿದ್ದಾಗ ವೈದ್ಯಕೀಯ ನೆರವಿಗೆ ...ವುದೋ ಇತ್ಯಾದಿಗಳನ್ನೇನನ್ನೂ ಮಾಡಿರುವುದು ...ಮ್ಮ ಜಾತಿ ಜನ ಎಂದು ಗುರುತಿಸುವುದಕ್ಕೆ ...ದು ಸಂಬಂಧ ಹೇಳುವುದಕ್ಕೆ ಬಳಸುತ್ತಾರೆ. ...ಂದುವರಿದರೆ, ಆ ವ್ಯಕ್ತಿ ರಾಜಕೀಯ, ಸಾಂಸ್ಕೃತಿಕ, ...ವಾಗಿ ಪ್ರವರ್ಧಮಾನಕ್ಕೆ ಬಂದಿದ್ದರೆ, ಆಗ ...ಎಂದು ಹೆಮ್ಮೆ ಪಡಲು, ಆ ನಮ್ಮವರಲ್ಲೊಬ್ಬ ...ಮೇಲೆ ಬಂಡವಾಳದಾರರು ಬಂಡವಾಳ ... ಜಾತಿ ಜನಗಳನ್ನೆತ್ತಿ ಸಂಘಟನಾತ್ಮಕವಾಗಿ ... ಬಲ ಪ್ರದರ್ಶಿಸಲು ಇತ್ಯಾದಿಗಳನ್ನು ...ವಿದಾಗಿದೆ.

... ಜಾತ್ಯಾಭಿಮಾನ ಅಥವಾ ಧರ್ಮಾಭಿಮಾನದಲ್ಲಿ ...ವರ ಸವಲತ್ತುಗಳನ್ನು ನೋಡಿಕೊಳ್ಳಲು ... ಎಂಬ ಪದ ಬೇಕಾಗುತ್ತದೆ. ಇದೇ ಸ್ಥಳೀಯ ...ಕೂಡ ಯಾರಾದರೊಬ್ಬ ತಮ್ಮ ನೆಲೆಯಿಂದ ... ಸಾರ್ವಜನಿಕ ಕ್ಷೇತ್ರದಲ್ಲಿ, ಅದರಲ್ಲೂ ...ಹೆಚುಂದರೆ ಬಂಡವಾಳವಿಲ್ಲದ್ದು, ಯಾವ ... ಅಥವಾ ಪೂರ್ವತಯಾರಿ ಇಲ್ಲದ್ದು, ದೇವರು, ...ಸಹಾದ ದೈವೀ ಮಾನವ ಅಥವಾ ಸಂತಸಂತೆ ...ರೆ. ಬಹಳ ಅನುಕೂಲಕರವಾದದ್ದು. ಏಕೆಂದರೆ ...ಗಳಲ್ಲಿ ನರಳುತ್ತಿರುವವರು, ಶತಶತಮಾನಗಳಿಂದ ...ತ್ತು ಶ್ರದ್ಧಾನಂಬಿಗೆಗಳಲ್ಲಿ ಬಂಧಿತರಾಗಿಯೇ ... ಬಂದು ಅಡ್ಡ ಬೀಳುತ್ತಾರೆ. ...ಆಗದಿದ್ದರೂ, ಕನಿಷ್ಟಪಕ್ಷ ಧಿಕ್ಕರಿಸಲು ...ದು ಕೂಡ ಈ ಧಾರ್ಮಿಕತೆಯೇ. ಹಾಗಾಗಿ ...ರ್ಥಿಕ ಸ್ಥಿತಿಗತಿಯು ಉತ್ತಮವಾಗಲು ಮುಕ್ತ ... ಧಾರ್ಮಿಕತೆಯೇ ಸರ್ವ ಶ್ರೇಷ್ಠ ಮತ್ತು ...ಕೆ. ತಮ್ಮ ಸ್ಥಳಕ್ಕೆ ಕೀರ್ತಿ ಲಭಿಸುತ್ತದೆ. ...ನಿಂದ ಬರುವವರು ಹೆಚ್ಚಾದಷ್ಟು ಅಂಗಡಿ ... ಕಳೆ ಏರುತ್ತವೆ. ಹಿಸ್ಸಿನ ಮತ್ತು ಮಲಗುವ ...ಸೌಲಭ್ಯಗಳು ಅಗತ್ಯವಾಗಿ ಬಂದವರಿಗೆ ...ಸಿದ್ದಿದ ಜೊತೆಗೆ ಫೋಟೋ, ಡಾಲರ್, ... ಇತ್ಯಾದಿಗಳ ಪರಾಟಗಳು ಬೇರೆ.

ಸಣ್ಣದಾಗಿರುವ ರಸ್ತೆ ಅಗಲವಾಗುತ್ತವೆ. ಬಸ್ಸು ಅಥವಾ ಇತರ ರಸ್ತೆಯ ಸಂಚಾರ ಸಾಧನಗಳು ಬೆಳೆಯುತ್ತವೆ. ಅವೆಲ್ಲಾ ಆದಂತೆ ಅಲ್ಲಿನ ಬಾಡಿಗೆ ಮನೆಗಳ ಬಾಡಿಗೆ ಹೆಚ್ಚಿಸಬಹುದು. ಹಾಗೆಯೇ ಭೂಮಿಯ ಬೆಲೆಯೂ ಹೆಚ್ಚುತ್ತದೆ. ಜನಸಂಖ್ಯೆ ಹೆಚ್ಚಿದಂತೆ ಎಲ್ಲಾ ರೀತಿಯಲ್ಲಿಯೂ ಬ್ಯಾಂಕುಗಳು, ಕ್ಲಿನಿಕ್‌ಗಳು, ಮೆಡಿಕಲ್ ಶಾಪ್‌ಗಳು; ಹೀಗೆ ಅನುಕೂಲಗಳೂ ಅಗತ್ಯವಿರುವುದರಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ದೊರಕಲಾರಂಭಿಸುವವು. ಇಷ್ಟೆಲ್ಲಾ ಆಗುವಾಗ ಒಬ್ಬ ಯಾರಾದರೂ ಸರಿಯೇ, ಯೋಗ್ಯನೋ ಅಯೋಗ್ಯನೋ ದೈವೀಪುರುಷನಾಗಿ ಅವತಾರವೆತ್ತಿದರೆ ತಪ್ಪೇನು? ಅವನು ಒಳಗೆ ಏನಾರ ಮಾಡಿಕೊಂಡು ಸಾಯಲಿ. ಹೊರಗಿನಿಂದ ಬರುವ ಯಾರ ತಲೆ ಮೇಲಾದರೂ ಚಪ್ಪಡಿ ಕಲ್ಲು ಎಳೆಯಲಿ. ತಮಗಿಲ್ಲಿ ಅನುಕೂಲವಾಗುತ್ತಿದೆ ಎಂದರೆ ಆ ವ್ಯಕ್ತಿಯ ಬಂಡವಾಳವೆಲ್ಲಾ ತಿಳಿದಿದ್ದರೂ ಹೇಗಾದರೂ ಹೋಗಲಿ ಎಂದೇ ಬಿಡುವರು. ಅದೇ ರೀತಿಯಲ್ಲಿಯೇ ಪುಟ್ಟಪರ್ತಿಯೆಂಬ ಪುಟ್ಟ ಗ್ರಾಮ ಸಾಯಿಬಾಬನ ನಾಮಬಲದಿಂದ ಅಂತಾರಾಷ್ಟ್ರೀಯ ವ್ಯಾಪಾರಕೇಂದ್ರವಾಗಿದ್ದು, ಕಾಡುಗೋಡಿಯಲ್ಲಿ ವಸ್ತುಗಳಿಗೆ ವಿದೇಶೀ ವ್ಯವಹಾರಗಳ ಮೌಲ್ಯ ಬಂದಿದ್ದು. ಇದು ದೇವಮಾನವರು, ಪವಾಡ ಪುರುಷರು ಉದ್ಭವಿಸುವ ಎಲ್ಲಾ ಕಡೆಯೂ ಸಾಮಾನ್ಯ. ಹಾಗಾಗಿ ಸ್ಥಳೀಯರಾರೂ ಈ ಉದ್ಭವಮೂರ್ತಿಗಳ ವಿರುದ್ಧವಾಗಿ ತಕರಾರು ಎತ್ತುವುದಿಲ್ಲ. ಬುದ್ಧ ಬಾಲಕನ ವಿಷಯದಲ್ಲಿಯೂ ಹಾಗೆಯೇ ಆಯಿತು.

ಬೋಮ್ಜಾನ್‌ನ ತರಲೆಗಳು

ಬುದ್ಧ ಬಾಲಕನ ಪ್ರಭಾವದಲ್ಲಿ ತಾನು ಗಟ್ಟಿಯಾಗಲು ಹೊರಟ ಸಂಬೋಧಿ ಧರ್ಮ ಸಂಘಕ್ಕೆ ಬೋಮ್ಜಾನ್‌ನ ತರಲೆಗಳು ತಾಪತ್ರಯಗಳನ್ನು ತಂದೊಡ್ಡಿದವು. 2007 ರಲ್ಲಿ ಬೋಮ್ಜಾನ್‌ನ ತಿಕ್ಕಲುತನಕ್ಕೆ ಅಪಾಯಕರ ರೀತಿಯಲ್ಲಿ ಸಿಕ್ಕಿಬಿದ್ದದ್ದು ಅನಿಲ್ ಖತ್ರಿ ಎಂಬಾತ. ಕುರಿ ಮೇಯಿಸುತ್ತಿದ್ದ ಅನಿಲ್ ಖತ್ರಿ ಅಕಸ್ಮಾತ್ ಬೋಮ್ಜಾನ್‌ನಿಗೆ ಕಾಡಿನಲ್ಲಿ ಎದುರಾದ. ಇಬ್ಬರೂ ಹಳೆಯ ಸ್ನೇಹಿತರೂ ಹೌದು. ಬುದ್ಧ ಬಾಲಕನೆಂದು ಕರೆಸಿಕೊಳ್ಳುತ್ತಿದ್ದ ಈತ ಕತ್ತಿಯನ್ನು ಹಿಡಿದಿದ್ದೇ ಅಲ್ಲದೇ, ಅಲ್ಲೇನು ಅವರಿಬ್ಬರ ನಡುವೆ ಮಾತುಕತೆಗಳಾದವೋ ಯಾವ ಮುನ್ಸೂಚನೆಯೂ ಇಲ್ಲದೇ ಕತ್ತಿಯಿಂದ ದಾಳಿ ಮಾಡಿದ. ಭುಜ ಮತ್ತು ಇತರ ಭಾಗಗಳಲ್ಲಿ ತೀವ್ರ ರಕ್ತಸ್ರಾವವಾಗುವಂತಹ ಗಾಯಗಳನ್ನು ಮಾಡಿ ಆಕ್ರಮಣಕಾರಿ ಪ್ರವೃತ್ತಿಯನ್ನು ಪ್ರದರ್ಶಿಸಿದ. ಆದರೆ ಅವನ ಹುಡುಗಾಟ ತೀವ್ರತರವಾದಂತಹ ಗಾಯವಾಗಿ, ಅಪಾಯಕರವೆನ್ನುವಷ್ಟು ರಕ್ತಸ್ರಾವವಾಗುವುದನ್ನು ನೋಡಿ, ತನ್ನ ಸೋದರ ದಿಲ್ ಬಹಾದ್ದೂರ್‌ನ ನೆರವಿನಿಂದ ಬೈಕಿನಲ್ಲಿ ಆಸ್ಪತ್ರೆಗೆ ಸಾಗಿಸಿದ.

ಎರಡನೆಯದಾಗಿ ಕಂಡುಬಂದ ಘಟನೆಯೆಂದರೆ, ನೇಪಾಳದಲ್ಲಿ ಓರ್ವ ಸ್ಪಾನಿಶ್ ಹೆಂಗಸೊಬ್ಬಳನ್ನು ಅಪಹರಿಸಿ, ತಮ್ಮ ಕಾಡಿನಲ್ಲಿ ಬಂಧಿಸಿಟ್ಟು, ಅವಳಿಗೆ ತರಾವರಿಯಾಗಿ ಹಿಂಸೆ ಕೊಟ್ಟರು. ಅವನ ಅನುಯಾಯಿಗಳು ಹೇಳಿದ್ದೇನೆಂದರೆ ಅವಳು ಮಾಟಗಾತಿಯಾಗಿದ್ದುಕೊಂಡು ಧರ್ಮವನ್ನು ಅತಿಕ್ರಮಿಸಿದಳು ಎಂದು. ನಂತರ ಸ್ಥಳೀಯರಿಂದ ಆಕೆಯ ಬಂಧನದ ವಿಷಯ ತಿಳಿದು ಅವಳನ್ನು ಬಿಡುಗಡೆಗೊಳಿಸಿದಾಗ ಅವಳು ಸಂಪೂರ್ಣವಾಗಿ ಚರ್ಮವ್ಯಾಧಿಗಳೆಲ್ಲಾ ಬಂದು ಜರ್ಜರಿತಳಾಗಿದ್ದಳು.

ಮತ್ತೊಂದು ಘಟನೆಯೆಂದರೆ, ಅದೇ ತಾನೇ ಜ್ಞಾನೋದಯವಾಗಿದ್ದ ಬುದ್ಧ ಬಾಲಕ ಹದಿನೇಳು ಮಾದೇಶಿ ಹುಡುಗರ ಮೇಲೆ ಹಲ್ಲೆ ಮಾಡಿದ್ದ. ಆಗ ಅವರು ಮಾಡಿದ್ದ ಘನವಾದ ಅಪರಾಧವೇನಾಗಿತ್ತೆಂದರೆ, ಈ ಬುದ್ಧ ಬಾಲಕನು ಧ್ಯಾನ ಮಾಡುತ್ತಿದ್ದಾಗ ಅವರು ಅವನನ್ನು ಅನುಕರಿಸುತ್ತಾ ಕೀಟಲೆ ಮಾಡುತ್ತಿದ್ದರು ಎಂದು. ಆದರೆ ಅವರು ಕೊಟ್ಟ ಕಾರಣವೆಂದರೆ, ಹಲ್ಖೋರಿಯಾ ಕಾಡಿನಲ್ಲಿ ಸಿಗುವ ಅಪರೂಪದ ಗಿಡಮೂಲಿಕೆಗಳನ್ನು ಸಂಗ್ರಹಿಸುತ್ತಿದ್ದುದರಿಂದ ಅದನ್ನು ತಡೆಯಲು ಹಲ್ಲೆ ಮಾಡಿದರೆಂಬುದು. ಬಹುಶಃ ಎರಡೂ ಕಾರಣಗಳು ಇರಬಹುದು. ಹೀಗೆ ಅವನೇ ನೇರವಾಗಿ ಮಾಡಿರುವ ಆಕ್ರಮಣಗಳಿಗೆ ಲೆಕ್ಕವಿಲ್ಲ. ಅವನ ಅನುಯಾಯಿಗಳು ಮಾಡಿರುವ ಹಲ್ಲೆ ಮತ್ತು ಹಡಾವಿಡಿಗಳಂತೂ ಯಥೇಚ್ಛ. ಬುದ್ಧನ ಮತ್ತು ಸಂಘದ ಹೆಸರಿನಲ್ಲಿ ಮಾಡಿರುವ ಅಕ್ರಮ ಹಣ ಮತ್ತು ಪಡೆದ ಖ್ಯಾತಿ ಹಾಗೂ ಹಗರಣಗಳ ಕುಖ್ಯಾತಿಗಳಿಗೆ ಲೆಕ್ಕವಿಲ್ಲ. ವಿದೇಶಿಯರ ಮತ್ತು ಸ್ಥಳೀಯರ ಮೇಲೆ ಆಕ್ರಮಣ, ಮೈತ್ರಿಪೂಜೆ ಎಂದು ಮಾಡುವ ಒಂದು ಧಾರ್ಮಿಕ ಉತ್ಸವದಲ್ಲಿ ವ್ಯಕ್ತಿಗಳ ಅಪಹರಣ, ಮಾಧ್ಯಮದವರ ಮೇಲೆ ಹಲ್ಲೆ ಇತ್ಯಾದಿಗಳು ಒಂದೆರಡಲ್ಲ. ಬುದ್ಧ ಬಾಲಕನೇ ಸ್ವಯಂ ರೌಡಿ ಅಲ್ಲದೇ ಅವನ ರೌಡಿ ಪಡೆಯೂ ಬುದ್ಧನ ಹೆಸರಿಗೆ ಮಸಿ ಬಳಿಯಲು ಏನೇನು ಮಾಡಬೇಕೋ ಅವೆಲ್ಲವನ್ನೂ ಮಾಡುತ್ತಿತ್ತು.

ಅವನ ಸಂಘವು ಸ್ತೂಪಗಳನ್ನು ಕಟ್ಟಿಸಿದ್ದು ಅದರಲ್ಲಿ ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಲಾಗಿತ್ತು. ಪ್ರಾರಂಭದಲ್ಲಿ ಅವನ ನಾಮಬಲದಿಂದ ಆರ್ಥಿಕವಾಗಿ ನೆಮ್ಮದಿ ಕಂಡುಕೊಳ್ಳಲು ಹಾತೊರೆದಿದ್ದ ಸ್ಥಳೀಯರೇ ಅವನ ಸ್ತೂಪಗಳನ್ನು ಕೆಡವಿ ಹಾಕಿದರು. ಅವನ ಕಚೇರಿ ಮತ್ತು ಮನೆಯನ್ನು ಪೊಲೀಸರು ಧ್ವಂಸ ಮಾಡಿದರು. ಅವನ ಶಸ್ತ್ರಾಸ್ತ್ರ ಸಂಗ್ರಹವನ್ನು ಖಾಲಿ ಮಾಡಿದರು. ಅಷ್ಟರಮಟ್ಟಿಗೆ ಬುದ್ಧ ಬಾಲಕನ ರೌಡಿಸಂ ಅಲ್ಲಿಯವರ ತಲೆ ಕೆಡಿಸಿತ್ತು.

ಅವನ ಬಗ್ಗೆ ಬರುತ್ತಿದ್ದ ಬ್ಲಾಗ್‌ಗಳನ್ನು, ಯೂಟ್ಯೂಬ್ ಮತ್ತು ಇನ್ನಿತರ ಅಂತರ್ಜಾಲ ಮಾಧ್ಯಮಗಳನ್ನು ಬ್ಲಾಕ್ ಮಾಡಿಸಿದರು. ಅಷ್ಟೆಲ್ಲಾ ಆದರೂ, ತೊಂದರೆಗಳನ್ನು ಮತ್ತು ಅದೆಷ್ಟೇ ಬೆದರಿಕೆಗಳನ್ನು ಒಡ್ಡುತ್ತಿದ್ದರೂ ಹಿಮಾಲಯನ್ ಟಾಯಿಮ್ಸ್ ಮಾತ್ರ ಅವನ ವಿಷಯಗಳನ್ನು ಹೊರಕ್ಕೆಳೆಯದೇ ಬಿಡಲೇ ಇಲ್ಲ. ಅವನಿಗಿದ್ದ ಬಂಡವಾಳಶಾಹಿ, ಧಾರ್ಮಿಕ ಮುಖಂಡರ ಹಾಗೂ ರಾಜಕೀಯ ವ್ಯಕ್ತಿಗಳ ಯಾವ ಬೆಂಬಲವನ್ನೂ ಲೆಕ್ಕಿಸಲಿಲ್ಲ. ಹೆಡ್ ಲೈನ್‌ಗಳಲ್ಲಿ ಅವನ ಕರ್ಮಕಾಂಡವನ್ನು ಬಯಲಿಗೆಳೆಯುತ್ತಿತ್ತು. ಇಷ್ಟೆಲ್ಲಾ ಹಗರಣಗಳ ಸರದಾರನಿಗೆ ಬರಿಯ ಇಪ್ಪತ್ತಮೂರು ವರ್ಷಗಳು ಮಾತ್ರ. ಅವನು ಕೆನಡಾ, ಅಮೆರಿಕಾ ಮತ್ತು ಇತರ ಐರೋಪ್ಯ ರಾಷ್ಟ್ರಗಳಿಗೆ ವಿಶ್ವಶಾಂತಿ ಮತ್ತು ಅಂತಃಕರಣದ ಬಗ್ಗೆ ಉಪನ್ಯಾಸಗಳನ್ನು ನೀಡಲು ಭೇಟಿ ಕೊಡಬೇಕಾಗಿತ್ತು. ಅದಕ್ಕಾಗಿ ಆಗಿನ ಪ್ರಧಾನ ಮಂತ್ರಿ ಸುಶೀಲ್ ಕೊಯಿರಾಲರನ್ನೂ ಸಂಧಿಸಿದ್ದ.

ಕೊನೆಗೆ ಅವನ ಸ್ಥಳೀಯರೇ ಅವನನ್ನು ಸಹಿಸಿಕೊಳ್ಳಲಾಗದೇ ದಂಗೆದ್ದು ನಿಲ್ಲುವಂತಾಯ್ತು. ಅಲ್ಲಿಗೆ ಅವನ ಪವಾಡ ಪುರುಷ, ಬುದ್ಧ ಬಾಲಕನ ಧ್ಯಾನ ಇತ್ಯಾದಿಗಳ ಬಗ್ಗೆ ತಾವೇ ಪ್ರಚಾರ ಕೊಡುವುದನ್ನು ನಿಲ್ಲಿಸಬೇಕಾಯ್ತು. ಅತ್ಯಂತ ಅಲ್ಪಕಾಲದಲ್ಲಿ ಅವರ ಅವಿವೇಕತನದ ಪರಮಾವಧಿಯನ್ನು ಕಂಡುಕೊಂಡುಬಿಟ್ಟರು.


ಕ್ಷೇತ್ರ ಮಹಾತ್ಮೆಗೆ ಪರ್ಯಾಯಗಳು


ಸ್ಥಳೀಯರು ವ್ಯಕ್ತಿಗಳ ವಿಷಯದಲ್ಲಿ ಹೀಗೆ ಭ್ರಮನಿರಸನವಾಗುವ ಸಾಧ್ಯತೆಗಳು ಉಂಟು. ಆದರೆ ತಮ್ಮ ಕ್ಷೇತ್ರದ ಮಹಿಮೆಯನ್ನು ಹುಟ್ಟಿಸಿಕೊಳ್ಳಲು ಅಥವಾ ಪಸರಿಸಿಕೊಳ್ಳಲು ಇನ್ನಿತರ ತಂತ್ರಗಳನ್ನೂ ಮಾಡುವುದುಂಟು.

ಬಸವನಗುಡಿಯ ದೊಡ್ಡ ಬಸವನ ಗುಡಿಯಲ್ಲಿ ನಾನು ಸಣ್ಣವನಿದ್ದಾಗಿನಿಂದಲೂ ಹೇಳುತ್ತಿದ್ದ ಮಾತೊಂದಿದೆ. ಅದೇನೆಂದರೆ ಬಸವಣ್ಣನ ಕಲ್ಲಿನ ವಿಗ್ರಹವು ಬೆಳೆಯುತ್ತಾ ಇತ್ತು, ಅದು ವಿಪರೀತವಾಗಿ ಬೆಳೆದುಬಿಡುತ್ತದೆ ಎಂದು ತಲೆಯ ಮೇಲೆ ಗೂಟ ಹೊಡೆದ ಕಾರಣದಿಂದ ಇಷ್ಟಕ್ಕೆ ನಿಂತಿತು ಎಂದು. ಅದೆಷ್ಟು ಬೆಳೆಯುತ್ತದೋ ಬೆಳೆಯಲಿ ಬಿಡಿ ಎಂದೇಕೆ ಯಾರೂ ಬಿಡುವುದಿಲ್ಲ, ಅದೇನೂ ಯಾರದೋ ಪುಟ್ಟ ಮನೆಯಲ್ಲಿ ಇರುವುದೇನಲ್ಲವಲ್ಲ! ಈ ರೀತಿಯಲ್ಲಿ ಅನೇಕ ವಿಗ್ರಹಗಳ, ಲಿಂಗಗಳ, ಕಂಬಗಳ, ಬಸವಗಳ ಬಗ್ಗೆ ಅದೆಷ್ಟೆಷ್ಟೋ ಊರುಗಳಲ್ಲಿ ಕೇಳುತ್ತೇವೆ. ನಾವು ನೋಡುವ ಸಮಯಕ್ಕೆ ಮುನ್ನವೇ ಅದು ಬೆಳೆಯುವುದು ನಿಂತಿರುತ್ತದೆ. ನಾವು ಎಲ್ಲೇ ನೋಡಲಿ, ಯಾವಾಗಲೇ ನೋಡಲಿ ಭೂತಕಾಲದಲ್ಲಿ ಬೆಳೆಯುತ್ತಲಿದ್ದು ಈಗ ಗೂಟ ಹೊಡೆಸಿಕೊಂಡು ಬೆಳೆಯುವುದು ನಿಂತಿರುತ್ತದೆ.

ಬೆಳೆಯುವಂತಹ ಈ ಐತಿಹ್ಯ ಬಸವನ ಅಥವಾ ಲಿಂಗಕ್ಕೆ ಮಾತ್ರವಲ್ಲ ಬುದ್ಧನ ಹಲ್ಲಿಗೂ ಇದೆ ಎಂದರೆ ಎಲ್ಲಾ ಕಾಲದ, ಎಲ್ಲಾ ಪರಂಪರೆಯ, ಎಲ್ಲಾ ಬುದ್ಧರೂ ಬಿದ್ದೂ ಬಿದ್ದೂ ನಗುವರು. ಆದರೆ ಬುದ್ಧನಿಗೆ ಪುರಾಣದ ಐತಿಹ್ಯದ ಲೇಪ ಹಚ್ಚಲು ಹೆಣಗಾಡುವ ಬೌದ್ಧ ಪುರೋಹಿತರು ಬುದ್ಧನ ಹಲ್ಲನ್ನು ಬೆಳೆಸುತ್ತಾರೆ.

ದಕ್ಷಿಣ ಕ್ಯಾಲಿಫೋರ್ನಿಯಾದಲ್ಲಿ ರೋಸ್‌ಮೀಡ್‌ನ 'ಲು' ಬುದ್ಧವಿಹಾರದಲ್ಲಿ ಸುಮಾರು ಎರಡು ಸಾವಿರದ ಐನೂರು ವರ್ಷಗಳಷ್ಟು ಹಳೆಯದು ಎನ್ನಲಾದ ಹಲ್ಲಿದೆಯಂತೆ. ಅದು ಬುದ್ಧನದಂತೆ. ಅಷ್ಟು ದೊಡ್ಡ ಹಲ್ಲು ಇರುವುದಾದರೆ ಅದೆಷ್ಟು ವಿಕಾರಮುಖಿಯಾಗಿರಬೇಕು ಆ ಬುದ್ಧ ಎಂದು ಮುಖ ಕಿವುಚಿಕೊಳ್ಳುವ ಕಾರಣವಿಲ್ಲ. ಏಕೆಂದರೆ, ಅದು ಬುದ್ಧನ ಬಾಯಲ್ಲಿ ಇದ್ದಾಗ ಸಾಧಾರಣವಾಗಿಯೇ ಇದ್ದು ಈಗ ಅದರ ಬುಡವೇ ಎರಡು ಇಂಚುಗಳಿಗಿಂತ ದೊಡ್ಡದಾಗಿದ್ದು, ಹಲ್ಲಿನ ಮೇಲ್ಭಾಗ ಸಾಧಾರಣ ಹಲ್ಲಿಗಿಂತ ನಾಲ್ಕುಪಟ್ಟು ದೊಡ್ಡದಾಗಿ ಬೆಳೆದಿದೆ. ಗಿನ್ನಿಸ್ ಬುಕ್‌ನ ರೆಕಾರ್ಡ್‌ನ ಪ್ರಕಾರ ವಿಶ್ವದ ಅತಿದೊಡ್ಡ ಹಲ್ಲೆಂದರೆ 1.26 ಇಂಚುಗಳಂತೆ. ಆದರೆ ಇದು ಅದರ ದಾಖಲೆಯನ್ನು ಎಲ್ಲೋ ಮುರಿದು ಬಿಸಾಡಿಬಿಟ್ಟಿದೆ. ಇದು ಅತ್ಯಂತ ಪ್ರಜ್ವಲವಾಗಿದ್ದು ಕಿರಣಗಳನ್ನು ಸೂಸುತ್ತದೆಯಂತೆ. ಹಾಗೆಯೇ ಗುಬ್ಬಚ್ಚಿಯಂತಹ ಪಕ್ಷಿಗಳೂ ವಿಶೇಷವಾಗಿ ಆಕರ್ಷಿತವಾಗಿ ಇಲ್ಲಿಗೆ ಬಂದು ಸಂದರ್ಶಿಸಿ ಹೋಗುತ್ತವಂತೆ. ಬೆಂಗಳೂರಿನ ಗವಿಗಂಗಾಧರೇಶ್ವರನ ದೇವಾಲಯದಲ್ಲಿ ಸಾಕ್ಷಾತ್ ಸೂರ್ಯನೇ ಸಂಕ್ರಾಂತಿಯಂದು ಬಂದು ಶಿವಲಿಂಗದ ಹಣೆಯನ್ನು ಬೆಳಗಿಸಿ ಹೋಗುವಂತೆ.






ಇರಲಿ, ಇದರ ದರ್ಶನದಿಂದ ರೋಗಗಳು ಗುಣವಾಗುತ್ತವೆ. ಒಳ್ಳೆಯದಾಗುತ್ತದೆ. ಹಾಗಾಗಿ ತಂಡೋಪತಂಡವಾಗಿ ಎಲ್ಲಾ ಧರ್ಮೀಯರೂ ಇಲ್ಲಿಗೆ ಬರುವುದರಿಂದ ಒಂದು ಉತ್ತಮ ಧಾರ್ಮಿಕ ವಾಣಿಜ್ಯ ಕೇಂದ್ರವಾಗಿದೆ.

ವಿಯಟ್ನಾಂನ ಬೌದ್ಧನೊಬ್ಬ ಬುದ್ಧನ ಅವಶೇಷಗಳನ್ನು ಸಂಗ್ರಹಿಸುತಲಿದ್ದು, ಅದರಿಂದ ಒಂದನ್ನು ಇವರಿಗೆ ಕೊಟ್ಟನಂತೆ. ಬುದ್ಧನ ಹಲ್ಲುಗಳು ಮತ್ತು ಕೂದಲು ಇಲ್ಲಿ ಮಾತ್ರವಲ್ಲದೇ ಜಗತ್ತಿನ ಇತರ ಕಡೆಗಳಲ್ಲೂ ಇವೆಯಂತೆ.

ಏನಿವು ಬುದ್ಧನ ಹಲ್ಲುಗಳು, ಕೂದಲುಗಳು ಇತ್ಯಾದಿ? ಬುದ್ಧನ ಮರಣಾನಂತರ ದೇಹದಿಂದ ಯಾರಾದರೂ ಬಂದು ಹಲ್ಲುಗಳನ್ನು ಕಳಚಿಕೊಂಡು ಹೋದರೆ? ಅದೇನೇ ಆದರೂ ಬುದ್ಧ ಸ್ವಯಂ ದೇವರಲ್ಲದಿದ್ದರೂ, ದೇವರುಗಳನ್ನು ನಿರಾಕರಿಸಿದ್ದರೂ, ಪಡೆದಿರುವ ಖ್ಯಾತಿಯ ವ್ಯಾಪ್ತಿಯಲ್ಲಿ ಇತರ ದೇವತೆಗಳಂತೆ ಇಂತಹ ಐತಿಹ್ಯಗಳನ್ನು ಹೊಂದಿಲ್ಲ. ಅದಕ್ಕೆ ಕಾರಣವೇನು? ರಾಮ, ಕೃಷ್ಣರನ್ನು ಹಾಸುಹೊಕ್ಕಾಗಿ ಬಳಸಿಕೊಂಡಿರುವ ನಮ್ಮ ಜಾನಪದ ಬುದ್ಧನನ್ನೇಕೆ ತಮ್ಮ ಸಾಹಿತ್ಯದಲ್ಲಿ ಹೊಂದಿಲ್ಲ? ಮುಂದೆ ನೋಡೋಣ. ■

ತೂತಾಗಲಿರುವ ಶಂಭು ಬಳಗದ ಚಂಬ



ಪ್ರೇಮಲತಾರ ಅತ್ಯಾಚಾರ ಕೇಸಿನಲ್ಲಿ ಹಿಂದಿನಿಂದಲೂ ನಾಯಿಗಿಂತ ನಾಯಿ ಬಾಲದಾಟವೇ ಮೇಲ್ಮೈ ಸಾಧಿಸಿದೆ. ಹೌದು, ಇದೊಂದು ಬಡಿದಾಟ, ಹಣಕಾಸಿನ ವಂಚನೆಯಂತಹ ಬಹಿರಂಗ ಸಾಕ್ಷಿ ಹುಡುಕಬಹುದಾದ ಕೇಸಲ್ಲ, ನಾಲ್ಕು ಗೋಡೆಯ ಮಧ್ಯೆ ನಡೆದಿರುವ ಅತ್ಯಾಚಾರದ ಕೇಸು ಇದು. ಆ ಕಾರಣಕ್ಕೆ ಈ ಕೇಸಿನಲ್ಲಿ ದೂರುದಾರ ಮತ್ತು ಆರೋಪಿಗಷ್ಟೇ ಸತ್ಯಾಸತ್ಯತೆ ತಿಳಿದಿರುತ್ತದೆ. ನಾವಿಲ್ಲಿ ಕಾನೂನು ಪ್ರಕ್ರಿಯೆ ನ್ಯಾಯಯುತವಾಗಿರಲಿ ಎಂದು ಆಗ್ರಹಿಸಬಹುದೇ ವಿನಃ ಉನ್ನತ ಸ್ಥಾನದಲ್ಲಿರುವ ಮಾತ್ರಕ್ಕೆ ಆರೋಪಿತನಿಗೆ ಕ್ಲೀನ್‌ಚಿಟ್ ಕೊಟ್ಟು ವಾಮಮಾರ್ಗದಲ್ಲಿ ಸಂತ್ರಸ್ತೆಯನ್ನು ಹಳಿಯುವುದಕ್ಕಾಗುವುದಿಲ್ಲ. ಸಂತ್ರಸ್ತೆ ಪ್ರೇಮಲತಾ ಮಾತಾಡುವಂತೆ ಆರೋಪಿ ರಾಘವೇಶ್ವರ ಸ್ವಾಮಿಯೂ ಸತ್ಯಾಸತ್ಯತೆಯ ಕುರಿತು ಮಾತನಾಡಬೇಕೇ ವಿನಹ ಅವರ ಚೇಲಾಗಳಲ್ಲ, ಆದರೆ ಆಗಿದ್ದು ಚೇಲಾಗಳದ್ದೇ ವಿಪರೀತ ಅನ್ನಿಸುವಂತಹ ಆರ್ಭಟ. ಅದೂ ಅತ್ಯಂತ ಕೀಳುಮಟ್ಟದಲ್ಲಿ.



ಪ್ರೇಮಲತಾ ಹಾಗು ಅವರ ಪುತ್ರಿಯರ ಕುರಿತು ಫೇಸ್‌ಬುಕ್ಕಿನಲ್ಲಿ ಈ ಚೇಲಾಗಳು ಹಬ್ಬಿಸಿದ ಕೀಳುಮಟ್ಟದ ಪ್ರಚಾರಗಳು ಕಡಿಮೆ ಏನಲ್ಲ. (ಯುದ್ಧ ಸಂದರ್ಭದಲ್ಲಿ ದಾಳಿ ಮಾಡುವ ವೈರಿ ಸೈನಿಕರು ದಾಳಿಗೊಳಗಾದ ಪ್ರದೇಶದ ಮಹಿಳೆಯರ ಮೇಲೇ ದೌರ್ಜನ್ಯ ನಡೆಸುತ್ತಾರೆ. ಕಾರಣ ಅಲ್ಲಿನವರ ಮಾನಸಿಕ ಸ್ಥೈರ್ಯ ಕುಂದಿಸಲು. ಇದೂ ಕೂಡ ಹಾಗೆಯೆ) ಈ ಚೇಲಾಗಳು ತಮ್ಮ ವಿರೋಧಿಗಳಿಗೆ ಗುರುಶಾಪದ ಬ್ಲಾಕ್‌ಮೇಲ್ ಬೆದರಿಕೆಗಳನ್ನು ಹಾಕಿದರು. ಪತ್ರ ಹಾಗು ಫೋನ್ ಮೂಲಕ ಬೆದರಿಕೆಗಳನ್ನೂ ಒಡ್ಡಿದರು.

ಗಮನಿಸಿ, ಇಬ್ಬರೂ ಇಲ್ಲಿ ಒಂದೇ ಸಮುದಾಯಕ್ಕೆ ಸೇರಿರುವರಾದರೂ ಇಲ್ಲಿ ನಡೆಯುವುತ್ತಿರುವುದು ಸಮಾನ ವ್ಯಕ್ತಿಗಳ ನಡುವಿನ ವ್ಯಾಜ್ಯವಲ್ಲ, ಲೈಂಗಿಕ ಸಂಬಂಧಿ ವ್ಯಾಜ್ಯದಲ್ಲಿ ಇಂತಹ ಮೂರನೇ ವ್ಯಕ್ತಿಗಳಿಂದ ಹೀನವಾಗಿ ದೂಷಣೆಗೊಳಗಾಗುತ್ತಿರುವವರು ಓರ್ವ ಹೆಣ್ಣು. ತನ್ನ ರಕ್ಷಣೆಯ ನೆಪದಲ್ಲಿ ಹೆಣ್ಣೊಬ್ಬಳ ದೂಷಣೆ ನಡೆಯುತ್ತಿರುವುದನ್ನು ಕಂಡೂಕಾಣದಂತೆ (ಪರೋಕ್ಷವಾಗಿ ಇದು ರಾಘವನ ಪ್ರಚೋದನೆಯಿಂದಲೇ ಆಗುತ್ತಿರುವುದು ಬಹಿರಂಗ ಸತ್ಯ) ಸುಮ್ಮನಿದ್ದ ರಾಘವೇಶ್ವರ ಸ್ವಾಮಿಯನ್ನು ಸಚ್ಚಾರಿತ್ರ್ಯದ ಧಾರ್ಮಿಕ ವ್ಯಕ್ತಿಯೆಂದು ಹೇಗೆ ಕರೆಯಲು ಸಾಧ್ಯ? ಸೂಲಿಬೆಲೆಯಂತಹ ಕೆಲವರು 'ನೂರು ಬಾರಿ ಅತ್ಯಾಚಾರ ಎಲ್ಲಾದರೂ ಸಾಧ್ಯವೇ?' ಎಂದು ಸಂತ್ರಸ್ತೆಯನ್ನೇ ಅಪಹಾಸ್ಯ ಮಾಡಿ ಗಾಯಕ್ಕೆ ಮತ್ತಷ್ಟು ಉಪ್ಪನ್ನು ಸವರುತ್ತಾರೆ.

ಭಾವನಾತ್ಮಕ ಸಂದರ್ಭಗಳಲ್ಲಿ ಇದು ಸಾಧ್ಯವಿದೆ. ಇದಕ್ಕೆ ಉದಾಹರಣೆಯಾಗಿ ಅಪರೂಪದಲ್ಲಿ ಕೇಳಿಬರುವ ತಂದೆ ಮಗಳ ಅತ್ಯಾಚಾರ ಸಂಗತಿಗಳನ್ನು ನೋಡಬಹುದು. ಇಲ್ಲಿ ಮಗಳು ತಂದೆಯನ್ನೇ ನಂಬಿಕೊಂಡಿದ್ದವಳು. ಆತ ಹಿರಿಯ. ಆತ ಯಾವುದೋ ಸಬೂಬನ್ನು ಹೇಳಿ ಮುಗ್ಧ ಹೆಣ್ಣಿನ ಮೇಲೆ ತಾನು ನಡೆಸಿದಂತಹ ಕಾರ್ಯವನ್ನು ಸಮರ್ಥಿಸಿಕೊಳ್ಳುತ್ತಾನೆ. ಜೊತೆಗೆ ಬಹಿರಂಗಪಡಿಸದಂತೆ ಬೆದರಿಕೆಯನ್ನೂ ಒಡ್ಡುತ್ತಾನೆ. ಇಂತಹ ಸಂದರ್ಭಗಳಲ್ಲಿ ಅತ್ಯಾಚಾರದಂತಹ ದೌರ್ಜನ್ಯದ ಸಂಭವನೀಯತೆ ನೂರಲ್ಲ ಸಾವಿರಕ್ಕೂ ಹೆಚ್ಚು ಬಾರಿಯಾಗುವ ಸಾಧ್ಯತೆಯಿದೆ. ಆದರೆ ಇದು ಅತ್ಯಾಚಾರವೆಂದಾಕ್ಷಣ ಸಿನಿಮಾದಲ್ಲಿ ತೋರಿಸುವಂತಹ ದಾಳಿಯ ಅತ್ಯಾಚಾರವಲ್ಲ, ಬದಲಿಗೆ ಅದಕ್ಕೂ ಮಿಗಿಲಾದ ನಂಬುಗೆ ದ್ರೋಹದ (ನಂಬುಗೆಯನ್ನು ದುರುಪಯೋಗ ಪಡಿಸಿಕೊಂಡು ಎಸಗುವ) ಅತ್ಯಾಚಾರ.

ಆರೋಪಿತನಿಗೆ ತಾನಿದನ್ನು ಮಾಡಿಲ್ಲ ಎಂಬುವುದು ಆತ್ಮಸಾಕ್ಷಿಯಾಗಿ ಖಾತ್ರಿಯಿದ್ದರೆ, ಚಾತುರ್ಮಾಸ್ಯ, ಮಧ್ಯಂತರ ಜಾಮೀನು, ತಡೆ, ಅದೂಇದೂ ನೆಪಗಳಿಂದ ನುಣುಚಿಕೊಳ್ಳಲು ಹೋಗದೇ ಎಲ್ಲಾ ವಿಧದ ತನಿಖೆಗಳಿಗೆ ಸಹಕರಿಸಿ ಕೇಸನ್ನು ಶೀಘ್ರದಲ್ಲೇ ಮುಗಿಸಿ ಶುದ್ಧವಾಗಿ ಹೊರಬರುತ್ತಿದ್ದನಲ್ಲವೇ? ಸತ್ಯ ತನ್ನ ಪರವಿದ್ದರೆ ಇಷ್ಟೆಲ್ಲಾ ಎಳೆದಾಟಗಳು ಅಗತ್ಯವಿತ್ತಾ?

ಆದರೆ ಗೋಕರ್ಣವನ್ನು ಕೊಳ್ಳೆಹೊಡೆದ ಈ ಪಾರಮಾರ್ಥಿಕ ಮುಖವಾಡದ ಆರ್ಥಿಕ ಚತುರನನ್ನು ಬಲ್ಲವರ ಲೆಕ್ಕಾಚಾರಗಳೇ ಬೇರೆ. ಕೇಸನ್ನು ಎಳೆದಷ್ಟೂ ರಾಘವನಿಂದ ಕೋಟಿಗಟ್ಟಲೆ ದುಡ್ಡನ್ನು ಕಾಲಕಾಲಕ್ಕೆ ಪೀಕಬಹುದು ಎಂಬುದು ಇಂತವರ ಒಳ ಲೆಕ್ಕಾಚಾರ. ಇದರಲ್ಲಿ ತಪ್ಪೇನೂ ಇಲ್ಲ. ಯಾಕೆಂದರೆ ಕೊಲ್ಕತ್ತಾ ರಾಜಸ್ತಾನಗಳಲ್ಲಿ ಸಾಮ್ರಾಜ್ಯ ಕಟ್ಟಹೊರಟ ರಾಘವನ ಸಂಪತ್ತು ಆತ ಬಿಸಿಲಲ್ಲಿ, ಕೆಸರಲ್ಲಿ ಬೆವರು ಹರಿಸಿ ದುಡಿದದ್ದಲ್ಲ. ಅದು ಪಾಪದ ಹಣ. ಆ ಹಣವೆಲ್ಲ ನಾಯಿ ನರಿ ಪಾಲಾಗುವ ಬದಲು ತಮಗೆ ಸಿಗಲಿ ಎಂಬುದೇ ಆತನ ಬೆಂಬಲಿಗರ ಲೆಕ್ಕಾಚಾರ.

ರಾಘವನ ಬಂಧನ ಹತ್ತಿರವಾದಂತೆ ಟೀವಿಗಳಲ್ಲಿ ಬಾಲಿಶವಾಗಿ (ಅವರ ಪ್ರಕಾರ ದಿವಾಕರ ಶಾಸ್ತ್ರಿ ಕೇಸ್ ಹಾಕುವ ಮೊದಲು ಜೋತಿಷಿಗಳಲ್ಲಿ ಹೋದದ್ದೇ ಘನ ಘೋರ ಅಪರಾಧವಂತೆ. ಸಂಡಾಸಿಗೆ ಕುಳಿತುಕೊಳ್ಳಲೂ ದಿಕ್ಕುನೋಡುವ ಈ ಕಾಲದಲ್ಲಿ ಪ್ರತಿಷ್ಠಿತ ವ್ಯಕ್ತಿಯೊಬ್ಬನ ಕುರಿತಾಗಿದ್ದು, ಭಾರೀ ಸುದ್ದಿ ಮಾಡಬಹುದಾದ ತನ್ನ ಕೇಸು ಯಾವ ವಿಘ್ನಗಳಿಲ್ಲದೇ ನ್ಯಾಯ ಒದಗಿಸಿಕೊಡಲಿ ಎಂದು ಭಾವುಕನೊಬ್ಬ ಬಯಸಬಾರದೆಂದೇನಿಲ್ಲ) ರಾಘವನ ಪರವಹಿಸಿ ಮಾತಾಡುವ ಚೆಂಬು ಶರ್ಮ ಮೊದಲಾದವರ ಚೆಂಬಿಗೆ ಈ ಮೂಲಕ ದೊಡ್ಡ ತೂತು ಬೀಳತೊಡಗಿರುವುದಂತೂ ಸತ್ಯ.

ಜೈ... ಜೈ? ಚೊಂಬೇಶ್ವರಾ?!!

- ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ಹಿಂದಿನಿಂದಲೂ ನಡೆಯುತ್ತಿರುವ ವಿಚಾರವಾದಿಗಳ ಕಗ್ಗೊಲೆಗಳು

ರಾಮಾಯಣ ಮಹಾಭಾರತದ ಕಾಲದಿಂದಲೂ ವಿಚಾರವಾದಿಗಳ ಕಗ್ಗೊಲೆ ಆಗುತ್ತಲೇ ಇದೆ. ಮೊಟ್ಟಮೊದಲು ಕೊಲೆಯಾದ ವಿಚಾರವಾದಿ ಶಂಭೂಕ. ಅವನನ್ನು ಕೊಂದವನು ಸ್ವತಃ ಶ್ರೀರಾಮ. ಶಂಭೂಕನನ್ನು ರಾಮ ನೇರ ಹೋಗಿ ಕೊಲ್ಲಲಿಲ್ಲ. ಅದಕ್ಕಿಂತ ಮೊದಲು ಶಂಭೂಕನೊಂದಿಗೆ ರಾಮನು ಧರ್ಮದ ವಿಷಯದಲ್ಲಿ ಬಹಳಷ್ಟು ಚರ್ಚೆ ವಾಗ್ವಾದ ನಡೆಸಿ ಶಂಭೂಕನು ತಪಸ್ಸು ಮಾಡಿ ಮೋಕ್ಷ ಗಳಿಸುವ ಪ್ರಯತ್ನ ಬಿಡುವಂತೆ ಮನವೊಲಿಸಲು ಪ್ರಯತ್ನಿಸಿದ್ದನು (ಕುವೆಂಪುರವರ 'ಶೂದ್ರ ತಪಸ್ವಿ' ಪ್ರಕಾರ). ಆದರೆ ಶಂಭೂಕ ಕೇಳಿದ ತಾರ್ಕಿಕ ಪ್ರಶ್ನೆಗಳಿಗೆ ಉತ್ತರಿಸಲು ರಾಮನಿಗೆ ಸಾಧ್ಯವಾಗದಿದ್ದಾಗ ಅವನು ತನ್ನ ಸೋಲು ಸಹಿಸಲಾಗದೇ ನಿರಾಯುಧ ಶಂಭೂಕನನ್ನು ಕಡಿದು ಕೊಂದನು.


ನಂತರ ಶಂಕರಾಚಾರ್ಯರು ಮಂಡನ ಮಿಶ್ರ ಮತ್ತು ವಸುಬಂಧು ಎಂಬ ಬೌದ್ಧ ಧರ್ಮದ ವಿಚಾರವಾದಿಗಳನ್ನು ಮೋಸದಿಂದ ಕೊಂದ. ಆದರೆ ಅವರಿಬ್ಬರು ಧಾರ್ಮಿಕ ಚರ್ಚೆಯಲ್ಲಿ ಸೋತು ಶರಣಾಗಿ ತಲೆಮರೆಸಿಕೊಂಡು ಹೋದರು ಎಂದು ಪುಕಾರು ಹಬ್ಬಿಸಿದರು. ಆಮೇಲೆ ನಾಗರ್ಜುನಕೊಂಡಕ್ಕೆ ಶಂಕರರ ಶಿಷ್ಯರು ದಾಳಿ ಮಾಡಿ ಅಲ್ಲಿದ್ದ ನೂರಾರು ವಿಚಾರವಾದಿಗಳನ್ನು ಕೊಂದು ಬೌದ್ಧ ವಿಹಾರಗಳನ್ನೆಲ್ಲಾ ನಾಶ ಮಾಡಿದರು.

ಆನಂತರ ಕೊಲೆಯಾದ ಬಹುದೊಡ್ಡ ವಿಚಾರವಾದಿಯೆಂದರೆ ನಮ್ಮ ಕರ್ನಾಟಕದ ಬಸವೇಶ್ವರರು. ಅವರ ನಂತರ ವಿಚಾರವಾದಿ ಕವಿ ಸರ್ವಜ್ಞನದೂ ಕೊಲೆಯೆಂಬ ಆರೋಪವಿದೆ. ಅದಕ್ಕೆ ಸ್ವಲ್ಪ ಮೊದಲು ಉಡುಪಿಯ ಪ್ರಗತಿಪರ ಸ್ವಾಮಿ ವಾದಿರಾಜರು ಶೂದ್ರ ಕನಕದಾಸರನ್ನು ದೇವಳದೊಳಗೆ ಬರಲು ಬಿಟ್ಟರು ಹಾಗೂ ಶೂದ್ರರಿಗೆ ವೈದಿಕ ದೀಕ್ಷೆ ಕೊಟ್ಟು ಬ್ರಾಹ್ಮಣರನ್ನಾಗಿ ಮಾಡಿದರು ಎಂಬ ಕೋಪದಿಂದ ವಾದಿರಾಜರನ್ನು ಅವರ ಶಿಷ್ಯರೇ ಕೆರೆಯಲ್ಲಿ ಸ್ನಾನ ಮಾಡುವಾಗ ನೀರಿನಲ್ಲಿ ಅದುಮಿಟ್ಟು ಕೊಲೆ ಮಾಡಿ ನಂತರ ವಾದಿರಾಜರು ಸ್ವಯಿಚ್ಛೆಯಿಂದ ಜಲಸ್ತಂಭನ ಮಾಡಿ ದೇಹತ್ಯಾಗ ಮಾಡಿದ್ದು ಎಂಬ ಪುಕಾರು ಹಬ್ಬಿಸಿದರು.

ಸ್ವಾಮಿ ವಿವೇಕಾನಂದರೂ ವಿಚಾರವಾದಿಯಾಗಿದ್ದು ಅವರು ಕೇವಲ 39 ನೇ ವರ್ಷಕ್ಕೆ ತೀರಿಕೊಂಡರು. ನಿಜವಾಗಿ ಅವರ ಪ್ರಗತಿಪರ ನೀತಿಗಳಿಗೆ ವಿರುದ್ಧವಾಗಿದ್ದ ಬಂಗಾಳದ ಮೇಲ್ಜಾತಿ ಜಮೀನುದಾರರು ಮತ್ತು ಪುರೋಹಿತಶಾಹಿ ಅವರಿಗೆ ಕೊಟ್ಟ ವಿಪರೀತ ಮಾನಸಿಕ ಹಿಂಸೆ ಹಾಗೂ ಆಹಾರದಲ್ಲಿ ಗುಟ್ಟಾಗಿ ಬೆರೆಸಿದ ವಿಷದಿಂದ ಜರ್ಜರಿತರಾಗಿ ವಿವೇಕಾನಂದರು ಅಷ್ಟು ಬೇಗ ತೀರಿಕೊಂಡಿದ್ದು. ಇದನ್ನೂ ಕೊಲೆಯೆನ್ನಬಹುದು.

ನಮ್ಮ ದೇಶದ ಸ್ವಾತಂತ್ರ್ಯದ ನಂತರ ಮಹಾತ್ಮಾ ಗಾಂಧಿಯವರ ಕೊಲೆಯನ್ನೂ ಒಬ್ಬ ವಿಚಾರವಾದಿಯ ಕೊಲೆಯೆಂದು ಪರಿಗಣಿಸಬಹುದು. ಆ ನಂತರ ಅನೇಕ ಸಣ್ಣ ವಿಚಾರವಾದಿಗಳ ಕೊಲೆಯಾಗಿದ್ದರೂ ಅದು ಸ್ವತಂತ್ರ ಭಾರತದ ಪೊಲೀಸ್ ರೆಕಾರ್ಡುಗಳಲ್ಲಿ ಅಪಘಾತ ಅಥವಾ ಆತ್ಮಹತ್ಯೆ ಎಂದು ನಮೂದಿಸಿ ಫೈಲು ಬಂದಾಗಿರಬಹುದು. ಪ್ರಖರ ವಿಚಾರವಾದಿಗಳಾದ ದಾಭೋಲ್ಕರ್, ಪನ್ಸಾರೆ ಮತ್ತು ಲಿಂಗಣ್ಣ ಸತ್ಯಂಪೇಟೆಯವರದ್ದು ಇತ್ತೀಚಿನ ಕೊಲೆಗಳು. ನಮ್ಮ ಡಾ. ಕಲಬುರ್ಗಿಯವರ ಕೊಲೆಯ ನಂತರ ಕರ್ನಾಟಕದ ಪ್ರಗತಿಪರರೆಲ್ಲಾ ಜಾಗೃತರಾದರು ಅಷ್ಟೇ. ಈಗ ಕಲಬುರ್ಗಿಯವರಿಗೆ ಕೇವಲ ನುಡಿನಮನ ಸಲ್ಲಿಸಿದರೆ ನಮ್ಮ ಕರ್ತವ್ಯ ಮುಗಿಯುವುದಿಲ್ಲ, ಅವರ ಚಿಂತನೆಯ ಧಾರೆಯನ್ನು ಪಸರಿಸಿ ಅವರ ಹೆಸರನ್ನು ಅಮರಗೊಳಿಸುವ ಜವಾಬ್ದಾರಿ ಅವರ ಶಿಷ್ಯರ ಮತ್ತು ಅಭಿಮಾನಿಗಳ ಮೇಲಿದೆ.


- ರವಿ ಬಿ. ಎಸ್, ಮಂಗಳೂರು




ದಹನ ಅಲ್ಲಿಯ ಸರ್ಕಾರವೇ ನಿಷೇಧಿಸಿದೆ.

ಮಹಿಷಾಸುರನನ್ನು ದೇವರೆಂದು ಪೂಜಿಸು
ಜನಾಂಗಗಳೂ ಇವೆ. ಬಲಿ ಚಕ್ರವರ್ತಿಯನ್ನು
ಜನರು ದಕ್ಷಿಣ ಭಾರತದಲ್ಲಿ ಎಲ್ಲೆಡೆ ಇದ
ಕರಾವಳಿಯ ಒಕ್ಕಲಿಗರು ದೀಪಾವಳಿಯ
ಬಲೀಂದ್ರನನ್ನು ಈಗಲೂ ತಪ್ಪದೇ ಪೂಜಿಸುತ್ತಾ
ರಾವಣ ನರಕಾಸುರ ಮಹಿಷಾಸುರ ಬಲೀಂದ್ರ
ದುಷ್ಟ ರಾಕ್ಷಸರು, ಅಸುರರು, ದಾನವರು,
ಎಂದು ಕಾಲ್ಪನಿಕ ಕಥೆ ಕಟ್ಟಿ ಅನುದಿನವೂ
ಅವಮಾನಿಸುವಾಗ ಈ ಬುಡಕಟ್ಟು ಜನರ
ಭಾವನೆಗೆ ಧಕ್ಕೆಯಾಗುವುದಿಲ್ಲವೇ? ಕೇವಲ
ಮಾತ್ರ ಧಾರ್ಮಿಕ ಭಾವನೆ ಇರುವುದೇ?
ಬಲೀಂದ್ರನ ದೇವಳವನ್ನು ಬಾಲಾಜಿ ದೇ
ಬಲಾತ್ಕಾರದಿಂದ ಮತಾಂತರಿಸಿದ್ದು ಬಲೀಂ
ಭಾವನೆಗೆ ನೋವಾಗುವುದಿಲ್ಲವೇ? ಹಾಗಾದ
ಯವರ ಸೇಡಿನ ನೀತಿಯಂತೆ ಈ ಬುಡಕ
ವೈದಿಕರ ನಾಲಿಗೆ ಕತ್ತರಿಸಿ ತಮ್ಮ ಕೋಪ ತೋ

ಇತಿಹಾಸವೆಂದರೆ ಗೆದ್ದವರ ಉತ್ಪ್ರೇಕ್ಷೆ ಹಾಗು
ಉಪೇಕ್ಷೆ ಅಷ್ಟೇ. ಆದರೆ ಪುರಾಣವೆಂದರೆ ಗೆದ
ವೈಭವೀಕರಣ ಹಾಗೂ ಸೋತವರ ಹೀನ
ಗೆದ್ದವನು ಎಷ್ಟೇ ದುಷ್ಟನಾಗಿರಲಿ ಅವನನ್ನು
ವ್ಯಕ್ತಿ ಎಂದು ವೈಭವೀಕರಿಸುವುದು ಹಾಗೂ
ಎಷ್ಟೇ ಒಳ್ಳೆಯವನಾಗಿರಲಿ ಅವನನ್ನು
ದುಷ್ಟನೆಂದು ಬಿಂಬಿಸುವುದಕ್ಕೇ ಪುರಾಣ
ಪುರಾಣಗಳೆಂದರೆ ಒಂದು ಅಂಶ ಇತಿಹ









ಕೊಲೆಯಾದ ಎರಡನೇ ವಿಚಾರವಾದಿಯೆಂದರೆ ಶಿಶುಪಾಲ. ಇವನು ಕೃಷ್ಣನ ತಪ್ಪುಗಳನ್ನು ರಾಜರ ಸಭೆಯಲ್ಲಿ ಎತ್ತಿ ತೋರಿಸಿದ್ದು ಹಾಗೂ ಶಿಶುಪಾಲನ ಆಪಾದನೆಗಳಿಗೆ ಕೃಷ್ಣನಿಗೆ ತಾರ್ಕಿಕ ಉತ್ತರ ನೀಡಲು ಸಾಧ್ಯವಾಗದಿದ್ದಾಗ ಅವನು ಶಿಶುಪಾಲನನ್ನು ಕೊಂದನು.

ಅದಾದನಂತರ ಕೊಲೆಯಾದವನು ನೈಜ ವಿಚಾರವಾದಿ ಚಾರ್ವಾಕ. ಕುರುಕ್ಷೇತ್ರ ಯುದ್ಧದ ನಂತರ ಧರ್ಮರಾಯನ ಪಟ್ಟಾಭಿಷೇಕ ಆಗುವಾಗ ಚಾರ್ವಾಕ ಎಂಬ ಋಷಿಯು ಧರ್ಮರಾಯನ ಮೂರ್ಖ ಜೂಜುಕೋರ ಬುದ್ಧಿಯಿಂದಾಗಿ ಕುರುಕ್ಷೇತ್ರದಲ್ಲಿ 50 ಲಕ್ಷ ಯೋಧರು ಮತ್ತು 20 ಲಕ್ಷ ಪ್ರಾಣಿಗಳು ಸತ್ತು ಭರತಖಂಡದ ಎಲ್ಲಾ ರಾಜ್ಯಗಳೂ ಸಂಕಷ್ಟಕ್ಕೆ ಒಳಗಾಗಿ ಅಪಾರ ಕಷ್ಟನಷ್ಟ ಅನುಭವಿಸಬೇಕಾಯಿತು ಎಂದು ಚಾರ್ವಾಕ ಆಪಾದಿಸಿದ. ಆಗ ಯುಧಿಷ್ಟಿರನಿಂದ ದೊಡ್ಡ ದೊಡ್ಡ ದಾನ ದಕ್ಷಿಣೆ ಪಡೆಯುವ ಆಸೆಯಿಂದ ಅಲ್ಲಿಗೆ ಬಂದಿದ್ದ ಬ್ರಾಹ್ಮಣರೆಲ್ಲಾ ಕೂಡಿ ಚಾರ್ವಾಕನನ್ನು ಕಂಬಕ್ಕೆ ಕಟ್ಟಿ ಸುಟ್ಟು ಕೊಂದರು. ಈ ಕೊಲೆಯಿಂದ ಯುಧಿಷ್ಟಿರ ಮತ್ತು ಕೃಷ್ಣ ಇಬ್ಬರೂ ಖುಷಿಯಾಗಿ ಆ ಕೊಲೆಗಾರರಿಗೆಲ್ಲಾ ಹೆಚ್ಚಿನ ದಾನ ದಕ್ಷಿಣೆ ಕೊಟ್ಟರು.

ಬುಡಕಟ್ಟು ಜನರ ದೇವರುಗಳನ್ನು ಅವಮಾನಿಸುವುದು ಸರಿಯೇ?

ಹಿಂದೂ ದೇವರಾದ ರಾಮ ಕೃಷ್ಣ ಇವರ ಬಗ್ಗೆ ಕೆಟ್ಟದಾಗಿ ಮಾತನಾಡಿ ಹಿಂದೂಗಳ ಧಾರ್ಮಿಕ ಭಾವನೆ ಘಾಸಿಗೊಳಿಸುವವರ ನಾಲಿಗೆ ಕತ್ತರಿಸುತ್ತೇವೆ ಎಂದು ಶ್ರೀರಾಮಸೇನೆಯ ನೇತಾರ ಸಿದ್ದಲಿಂಗ ಸ್ವಾಮಿ ಎಂಬುವ ಪತ್ರಿಕಾ ಹೇಳಿಕೆ ಮೂಲಕ ಪ್ರೊ. ಕೆ.ಎಸ್.ಭಗವಾನರಿಗೆ ಬೆದರಿಕೆ ಹಾಕಿದ್ದಾನೆ.

ಆದರೆ ರಾಮ- ಕೃಷ್ಣರ ಬಗ್ಗೆ ಕೆಟ್ಟದಾಗಿ ಮಾತನಾಡಿದಾಗ ವೈದಿಕರ ಭಾವನೆಗೆ ನೋವಾದಂತೆ ಅಸುರ-ರಾಕ್ಷಸರ ಬಗ್ಗೆ ಕೆಟ್ಟದ್ದು ಮಾತನಾಡಿದಾಗ ಭಾರತದ ಹಲವಾರು ಬುಡಕಟ್ಟು ಜನರ ಭಾವನೆಗಳಿಗೂ ನೋವಾಗುತ್ತದೆ ಎಂಬುದು ಹಿಂದೂತ್ವವಾದಿಗಳಿಗೆ ಗೊತ್ತೇ? ರಾವಣ ಮತ್ತು ನರಕಾಸುರರರನ್ನು ದೇವರೆಂದು ಪೂಜಿಸುವ ದೊಡ್ಡ ಬುಡಕಟ್ಟು ಜನಾಂಗಗಳು ಜಾರ್ಖಂಡ್ ಛತ್ತೀಸ್‌ಘಡ್ ಹಾಗೂ ಒಡಿಶಾ ರಾಜ್ಯಗಳಲ್ಲಿ ಇಂದಿಗೂ ಇವೆ. ಹಾಗಾಗಿ ಜಾರ್ಖಂಡಿನಲ್ಲಿ ದಸರೆಯಂದು ರಾವಣನ ಮೂರ್ತಿಯ

ಒಂಬತ್ತು ಅಂಶ ಕಲ್ಪನೆ. ಮೇಲಾಗಿ ಪುರಾ
ವಿದ್ಯೆಯೆನ್ನುವುದು ಕೇವಲ ಒಂದೇ
ಸೊತ್ತಾಗಿತ್ತು. ಹಾಗಾಗಿ ಪುರಾಣಗಳಲ್ಲಿ
ಮರೆಮಾಚಿ ತಮಗೆ ಬೇಕಾದಂತೆ ಮೇಲ
ಕತೆಗಳನ್ನು ತಿರುಚಿ ಬರೆಯುವುದು
ಅದರಂತೆ ಆಕ್ರಮಣಕಾರ ಆರ್ಯನ್ನರು
ಸೋಲಿಸಿದ ಮೇಲೆ ದ್ರಾವಿಡ ಬುಡಕಟ್ಟು
ಹಾಗೂ ಅವರ ದೇವರನ್ನು ದುಷ್ಟರ
ದಾನವರು-ಅಸುರರು ಎಂದು ಹೀಯಾ
ಲಾಯಿತು. ಹಾಗೂ ಗೆದ್ದ ಆರ್ಯ ನೇತ
ಸಾತ್ವಿಕರು ಮತ್ತು ಪವಿತ್ರ ದೇವತೆಗಳು ಎಂ
ಬಿಂಬಿಸಿ ಕಾಲ್ಪನಿಕ ಕಥೆ ಬರೆಯಲಾಯಿ
ಬರೆದವರು ಗೆದ್ದ ಎತ್ತಿನ ಬಾಲ ಹಿಡಿಯ

ವಿ.ಸೂ. : ನಿಮ್ಮ ಅನಿಸಿಕೆಗಳ
lankesh70@rediffmail.c
ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸ
ಪ್ರತಿಕ್ರಿಯೆಗಳನ್ನು 9980331427
ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕ

ಆದುದರಿಂದಲೇ ಈಗಿನ ಪವಿತ್ರ ಪುರಾಣಗಳು ಆದರ ಮುಖ್ಯ ಮೇಲ್ಜಾತಿ ಪಾತ್ರಗಳು ...ಕೊಂಡು ಭಾರತೀಯರ ತಲೆಗೆ ಮೆತ್ತಿಕೊಂಡಿರು ...ಇಂತಹ ದುಷ್ಟ ಆರ್ಯನ್ನರ ಆಕ್ರಮಣಕಾರಿ ...ನ್ನು ಎಲ್ಲರೂ ದೇವರೆಂದು ಗೌರವಿಸಬೇಕಂತೆ, ...ಲ್ಲೆ ಅವರ ಆರ್ಯ ಭಕ್ತರ ಭಾವನೆಗಳಿಗೆ ...ಕ್ತವಂತೆ. ಎಂತಹ ವಿಪರ್ಯಾಸವಿದು. ಯಾವುದೇ ...ಮುಗಿದ ಮೇಲೆ ಯುದ್ಧದ ಫಲಿತಾಂಶ ಆಧರಿಸಿ ...ರನ್ನು ಕೆಟ್ಟವರೆಂದೂ ಕೆಟ್ಟವರನ್ನು ಒಳ್ಳೆಯವರೆಂದೂ ...ವುದು ಲೋಕರೂಢಿ ಎಂದು 400 ವರ್ಷಗಳ ...ಇಂಗ್ಲಿಷ್ ನಾಟಕಕಾರ ಶೇಕ್ಸ್‌ಪಿಯರ್ ... ಆದರೆ ಇದು ಮೂರು ಸಾವಿರ ವರ್ಷಗಳಿಂದ ...ರತದಲ್ಲಿ ನಡೆಯುತ್ತಿರುವ ಸತ್ಯ ಸಂಗತಿ ಅಷ್ಟೇ.

\- ಜೆ.ರವಿಕಿರಣ, ಮೈಸೂರು

...ದೇವರ ಹೆಸರಲ್ಲಿ ಮಾಡಿದ ಅತ್ಯಾಚಾರ ಸರಿಯೇ?

...ವುದು ಹೆಚ್ಚು ಪಾಪಕರ ಕೆಲಸ? ತಾನು ...ಮ್ಮ ದೇವರನ್ನು ಪಾಪಿ ಎಂದು ಕರೆಯುವುದೋ ...ಾಯಲ್ಲಿ ದೇವರ ಮಂತ್ರ ಜಪಿಸುತ್ತಾ ನಿಜದಲ್ಲಿ ...ದ ಕೆಲಸ ಮಾಡಲು ದೇವರ ಹೆಸರು ದುರ್ಬಳಕೆ ...ಮೋ? ಪ್ರೊ.ಭಗವಾನರು ಶ್ರೀರಾಮನನ್ನು ಪಾಪಿ ...ರೆದಿದ್ದಕ್ಕೆ ದೊಡ್ಡ ಪ್ರತಿಭಟನೆ ಹಾಗೂ ಜೀವ ...ಎದುರಿಸುತ್ತಿದ್ದಾರೆ. ಆದರೆ ಒಂದು ಮಠದ ...ಗಳು ಕಾವಿ ಉಟ್ಟು ಆ ಶ್ರೀರಾಮ ದೇವರ ...ದುರುಪಯೋಗಪಡಿಸಿ, ರಾಮದೇವರು ನನ್ನ ... ಬರುತ್ತಾರೆ ಹಾಗೂ ಆ ರಾಮದೇವರ ...ಂದಲೇ ನಾನು ನಿನ್ನನ್ನು ಅನುಭವಿಸುತ್ತಿರುವುದು ...ಳ್ಳು ಹೇಳಿ ರಾಮದೇವರ ಹೆಸರಲ್ಲಿ ಮುಗ್ಧ ...ಮೇಲೆ ಅತ್ಯಾಚಾರ ಮಾಡಿ ಆ ದೇವರ ಹೆಸರಿಗೇ ...ಪ ಮೆತ್ತಿದ್ದರೂ ಇವರ ಬಗ್ಗೆ ಪ್ರತಿಭಟನೆಯಿಲ್ಲ ...ಏಕಪತ್ನಿ ವ್ರತಸ್ಥ ರಾಮನ ಹೆಸರಲ್ಲಿ ನಿಸ್ಸಹಾಯಕ ...ನ್ನು ಹಾಳು ಮಾಡುವುದು ಪವಿತ್ರ ಕೆಲಸವೇ? ...ವಾಗಿ ಸ್ವತಃ ರಾಮದೇವರೇ ಮಹಾ ಕಾಮುಕ ... ಪರಸ್ತ್ರೀಲೋಲ ಹಾಗಾಗಿ ಆ ರಾಮ ಮಾನವರ ...ಗೆ ಬಂದು ತನ್ನ ತೀಟೆ ತೀರಿಸಿಕೊಳ್ಳುತ್ತಾನೆ ...ಪಾದಿಸುವುದಕ್ಕೆ ಸಮ ತಾನೇ! ರಾಮದೇವರ ...ತ್ತು ಗುರು ಶಾಪದ ಹೆಸರಲ್ಲಿ ಮಹಿಳೆಯರನ್ನು ...ೀಲ್ ಮಾಡಿ ನಿಸ್ಸಹಾಯಕ ಹೆಣ್ಣಿನ ಮೇಲೆ ... ನೂರಾರು ಬಾರಿ ಅತ್ಯಾಚಾರ ಎಸಗಿದ್ದಾನೆ. ... ತಾನು ಮಾಡಿದ ಅತ್ಯಾಚಾರವನ್ನು ರಾಮನ ... ದೇವರಿಗೇ ಅವಮಾನ ಮಾಡಿದ್ದಲ್ಲದೇ ಸಮಸ್ತ ...ಧರ್ಮಕ್ಕೇ ಅವಮಾನ ಮಾಡಿದ್ದಾನೆ. ತನ್ನ ...ನೆಗಾಗಿ ಬ್ರಾಹ್ಮಣ ಸ್ವಾಮಿಯೊಬ್ಬ ಈ ರೀತಿ ...ಾಮನ ಸ್ವಚ್ಛ ವ್ಯಕ್ತಿತ್ವದ ಮೇಲೆ ಕೊಳಚೆ ...ರಿಂದ ಆ ರಾಮದೇವರ ಶೂದ್ರ ಭಕ್ತರ ...ಗೆ ಧಕ್ಕೆಯಾಗುವುದಿಲ್ಲವೇ?


...ನನ್ನು ನಂಬಿ ಪೂಜೆಗೆ ಬಂದ ಹೆಣ್ಣನ್ನು ಅದೇ ...ರಲ್ಲಿ ಭೋಗಿಸಿ ಆ ದೇವರ ಹೆಸರಿಗೇ ಘೋರ ...ಿದ ಗೋಸ್ವಾಮಿಯ ಅಪರಾಧಕ್ಕೆ ಹೋಲಿಸಿದರೆ ...ನು ಕೇವಲ ಬಾಯಿಮಾತಿನಲ್ಲಿ ಮಾತ್ರ ರಾಮ ...ು ಹೇಳಿರುವುದು ಜುಜುಬಿ ಅಪರಾಧ ಅಷ್ಟೇ. ...ರಿಯ ಅಪರಾಧ ಪ್ರೊ.ಭಗವಾನರ ಅಪರಾಧಕ್ಕಿಂತ ... ಪಟ್ಟು ಹೆಚ್ಚು ಘೋರವಾದುದು. ಆದರೂ ...ುವರಿಗೆ ಇಂತಹ ಘೋರ ಪಾಪ ಹಾಗೂ ...ವರ ಹೆಸರನ್ನು ಹೊಲಸು ಕೆಲಸಕ್ಕೆ ಬಳಸಿರುವ ...ದ ವಿರುದ್ಧ ಪ್ರತಿಭಟಿಸುವ ನೈತಿಕ ಧೈರ್ಯವಿಲ್ಲ. ...ೋರ್ಟಿನಲ್ಲಿ ಅಪರಾಧ ಸಾಬೀತಾಗುವವರೆಗೆ ...ಪರಾಧಿ ಎಂಬ ಹಳಸಿದ ನೀತಿಯ ಅಡಿ ...ಯುವ ಬದಲು ತಾನು ನಿರಪರಾಧಿ ಎಂದು ... ಸಾಬೀತು ಮಾಡಲು ಸ್ವಾಮೀಜಿಯು ...ಗೆ ವೈದ್ಯಕೀಯ ಪರೀಕ್ಷೆಗೆ ಸಹಕರಿಸಬೇಕೆಂದು ... ಒತ್ತಡವಾದರೂ ಹೇರಬೇಕಿತ್ತು.

...ದೇ ವಿಷಯದಲ್ಲಾಗಲಿ ಬಾಯಿಮಾತಿನ ...ಅಪರಾಧಕ್ಕಿಂತ ನಿಜ ಕೃತ್ಯದ ಅಪರಾಧ ಹೆಚ್ಚು ...ು ಕೋರ್ಟ್ ಪರಿಗಣಿಸುತ್ತದೆ. ಅತ್ಯಾಚಾರದ ... ಇದೇ ನಿಯಮ ಅನ್ವಯ. ಆದರೆ ಇಂತಹ ...ು ನಮ್ಮ ಮಹಾನ್ ಹಿಂದೂ ಧರ್ಮ ...ಾಗುತ್ತಿಲ್ಲ, ಮೀನು ಮಾಂಸ ಸೇವನೆಯಿಂದ ...ುಷ್ಟ ಗುಣಗಳು ಹಾಗೂ ಅಪರಾಧಿ ... ಬೆಳೆಯುತ್ತವೆ ಎಂದು ಇದೇ ಗೋಸ್ವಾಮಿ ...ಗಳ ಹಿಂದೆ ಹೇಳಿ ಮಾಂಸಾಹಾರಿಗಳನ್ನು ...ವಮಾನಿಸಿದ್ದ, ಆದರೆ ಸಸ್ಯಾಹಾರಿಯಾಗಿರುವ ...ನೇ ಇಂದು ಅತೀ ಹೆಚ್ಚು ತಾಮಸ ... ಅಪರಾಧಿ ಮನೋಭಾವ ಹೊಂದಿರುವುದು ... ಸ್ವತಃ ಸುಳ್ಳೆಂದು ಸಾಬೀತುಮಾಡಿದಂತಾಗಿದೆ.

\- ರಾಮಕೃಷ್ಣ.ಎ.ಕೆ. ಮಂಗಳೂರು

ಅಭಿಮಾನಿಗಳಿಗಾಗಿ ಮಾಡಿದ ಸಿನಿಮಾ 'ಐರಾವತ'

ದರ್ಶನ್ ನಟನೆಯ ಬಹು ನಿರೀಕ್ಷಿತ ಸಿನಿಮಾ 'ಐರಾವತ' ಈ ವಾರ ರಾಜ್ಯಾದ್ಯಂತ ಬಿಡುಗಡೆ ಆಗುತ್ತಿದೆ. ಸಿನಿಮಾ ಕುರಿತಾಗಿ ನಿರೀಕ್ಷೆಯೂ ಹೆಚ್ಚಿದೆ. ನೆಚ್ಚಿನ ಚಿತ್ರದ ಕುರಿತು ದರ್ಶನ್ ಆಡಿದ ಮಾತು ಇಲ್ಲಿದೆ.



ನಿರೀಕ್ಷೆಯ 'ಅಂಬರೀಶ' ಚಿತ್ರ ಬಾಕ್ಸ್ ಆಫೀಸ್‌ನಲ್ಲಿ ಭಾರೀ ಸೋಲುಂಡಿತು. ದರ್ಶನ್‌ಗೆ ಈ ವಿಷಯ ಮೊದಲೇ ಗೊತ್ತಿತ್ತು ಅನಿಸತ್ತೆ, ಹೀಗಾಗಿ ಸಿನಿಮಾದ ಪ್ರಚಾರಕ್ಕೂ ಅವರು ಬರಲಿಲ್ಲ. 'ಅಂಬರೀಶ'ನನ್ನು ಥಿಯೇಟರ್‌ಗೆ ಕಳುಹಿಸಿದ ದರ್ಶನ್, ಆನಂತರ 'ಐರಾವತ' ಚಿತ್ರದ ಶೂಟಿಂಗ್‌ನಲ್ಲಿ ಬಿಜಿಯಾದರು. ಈ ವಾರ 'ಐರಾವತ' ಮುನ್ನೂರಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ಬಿಡುಗಡೆ ಆಗುತ್ತಿದೆ.

** ಬಹು ನಿರೀಕ್ಷೆಯ ಸಿನಿಮಾ 'ಅಂಬರೀಶ' ಪ್ರೇಕ್ಷಕರಿಗೆ ಕೈ ಕೊಟ್ಟಿತು. ಈ ಸಿನಿಮಾ ಹೇಗಿದೆ?*

ಈ ವಾರ ಬಿಡುಗಡೆ ಆಗುತ್ತಿದೆ. ನೀವೇ ನೋಡಿ ಹೇಳಬೇಕು. ಆದರೆ, ಅಭಿಮಾನಿಗಳನ್ನು ಈ ಚಿತ್ರವು ನಿರಾಸೆಗೊಳಿಸಲ್ಲ ಅನ್ನುವ ನಂಬಿಕೆ ನನಗಿದೆ.

** 'ಐರಾವತ' ಚಿತ್ರ ಕುರಿತು ಯಾಕಿಷ್ಟು ವಿವಾದ?*

ಯಾವ ವಿವಾದವೂ ಆಗಿಲ್ಲವಲ್ಲ? ಶೂಟಿಂಗ್ ತಡವಾಗಿದೆ ಅಷ್ಟೆ. ಸಿನಿಮಾ ಚಿತ್ರೀಕರಣ ಅಂದಾಗ ತಡವಾಗೋದು ಸಹಜ..

** ನಿಮ್ಮ ಮತ್ತು ನಿರ್ದೇಶಕರ ನಡುವೆ ಕಿತ್ತಾಟ ಆಯಿತು ಅನ್ನುವ ಸುದ್ದಿ ಹಬ್ಬಿತಲ್ಲ, ಅದು ಏನು?*

ನಾನಾಗಲಿ, ನಿರ್ದೇಶಕರಾಗಲಿ ಈ ಕುರಿತು ಹೇಳಿದ್ದೇವಾ? ಸುಖಾಸುಮ್ಮನೆ ಸುದ್ದಿ ಹಬ್ಬಿಸುವವರಿಗೆ ನಾನು ಉತ್ತರ ಕೊಡುವುದಿಲ್ಲ. ಸಿನಿಮಾ ಚೆನ್ನಾಗಿ ಬರಲು ಎಲ್ಲರೂ ಶ್ರಮಿಸಿದ್ದಾರೆ. ಅದಷ್ಟೇ ಈಗ ಮುಖ್ಯ.

** ಈಗಾಗಲೇ ನೀವು ಪೊಲೀಸ್ ಆಫೀಸರ್ ಪಾತ್ರವನ್ನು ನಿರ್ವಹಿಸಿದ್ದೀರಿ. 'ಐರಾವತ'ದಲ್ಲಿ ವಿಶೇಷ ಏನಿದೆ?*

ಸಿನಿಮಾದ ಕುರಿತಾಗಿ, ಕತೆಯ ಕುರಿತಾಗಿ ಏನೂ ಹೇಳಲಾರೆ. ನನ್ನನ್ನು ಅಭಿಮಾನಿಗಳು ಯಾವ ರೀತಿಯಲ್ಲಿ ನೋಡಲು ಇಚ್ಛಿಸುತ್ತಾರೋ, ನಾನು ಹಾಗೇ ಇಲ್ಲಿದ್ದೇನೆ. ಅರ್ಜುನ್ ಚಿತ್ರಗಳು ಹೇಗಿರುತ್ತವೆ ಎಂಬುದೂ ಗೊತ್ತಿದೆ. ಇಲ್ಲಿ ಎರಡೂ ಮಿಕ್ಸ್ ಆಗಿದೆ.

** ಇತ್ತೀಚೆಗೆ ನೀವು ಸಿನಿಮಾದ ಪ್ರಚಾರದಲ್ಲೇ ಕಾಣಿಸಿಕೊಳ್ಳುವುದಿಲ್ಲ. ಇದರಿಂದ ನಿಮ್ಮ ಚಿತ್ರಕ್ಕೆ ನಷ್ಟ ಅಲ್ಲವಾ?*

ಅಗತ್ಯ ಅನಿಸಿದರೆ ಖಂಡಿತಾ ಭಾಗವಹಿಸುತ್ತೇನೆ. 'ಸಂಗೊಳ್ಳಿ ರಾಯಣ್ಣ'ನಿಗಾಗಿ ನಾನು ಇಡೀ ಕರ್ನಾಟಕವನ್ನೇ ಸುತ್ತಿದೆ. ಅಲ್ಲದೇ ಬಹುತೇಕ ಚಿತ್ರಗಳ ಪ್ರಚಾರದಲ್ಲಿ ಪಾಲ್ಗೊಂಡಿದ್ದೇನೆ. ಒಂದೊಂದು ಚಿತ್ರಗಳಿಗೆ ಪ್ರಚಾರ ಬೇಕಿಲ್ಲ ಅನಿಸುತ್ತದೆ. ಅಂತಹ ವೇಳೆಯಲ್ಲಿ ಅಬ್ಬರ ಪ್ರಚಾರ ಮಾಡುವುದಿಲ್ಲ.

** ವರ್ಷಕ್ಕೊಂದೇ ಸಿನಿಮಾ ಅನ್ನುವಂತಾಗಿದೆ. ಅಭಿಮಾನಿಗಳು ಬೇಸರ ಮಾಡಿಕೊಳ್ಳುವುದಿಲ್ಲವಾ?*

ಬೇಸರ ಮಾಡಿಕೊಂಡಿದ್ದಾರೆ. ಅದಕ್ಕೆ ನಾನೊಂದು ತೀರ್ಮಾನಕ್ಕೆ ಬಂದಿದ್ದೇನೆ. ಇನ್ನು ಮುಂದೆ ವರ್ಷಕ್ಕೆ ಎರಡು ಸಿನಿಮಾ ಮಾಡುತ್ತೇನೆ. ಯಾವುದೇ ಕಾರಣಕ್ಕೂ ಮಿಸ್ ಆಗುವುದಿಲ್ಲ.

** 'ಐರಾವತ' ಸಿನಿಮಾದಲ್ಲಿ ನಿಮ್ಮ ಪುತ್ರ ಕೂಡ ಅಭಿನಯಿಸಿದ್ದಾನೆ. ಆ ಕುರಿತು ಹೇಳಿ.*

ಇಷ್ಟು ಬೇಗ ಅವನು ನನ್ನೊಂದಿಗೆ ಬಣ್ಣ ಹಚ್ಚಿಕೊಳ್ಳುತ್ತಾನೆ ಅಂತ ನಾನಂತೂ ಅಂದುಕೊಂಡಿರಲಿಲ್ಲ. ಅಂಥದ್ದೊಂದು ಸಂದರ್ಭ ಬಂತು. ಹೀಗಾಗಿ ಅಭಿನಯಿಸಿದ. ಅವನ ಆಸೆ ಏನು ಅಂತ ಸದ್ಯ ಅವನಿಂದಲೂ ಹೇಳೋಕೆ ಆಗಲ್ಲ, ಮೊದಲು ಓದಲಿ. ಆಮೇಲೆ ಅಭಿನಯ ಇದ್ದೇ ಇದೆ.

** ಮುಂದಿನ ಸಿನಿಮಾ ಕುರಿತು ಹೇಳಿ?*

ಈಗ 'ಜಗ್ಗುದಾದ' ಸಿನಿಮಾ ಶೂಟಿಂಗ್ ಆಗುತ್ತಿದೆ. ಮುಂಬಯಿಯಲ್ಲಿ ಚಿತ್ರೀಕರಣ ನಡೆಯುತ್ತಿದೆ. ಇದೊಂದು ಕಾಮಿಡಿ ವಿತ್ ಆಕ್ಷನ್ ಸಿನಿಮಾ. ಹೊಸ ರೀತಿಯಲ್ಲಿ ಮೂಡಿಬರುತ್ತಿರುವ ಚಿತ್ರವಿದು.

** 'ಜಗ್ಗುದಾದ' ಯಾರು? ಏನು ಅವನ ಕೆಲಸ?*

ಜಗ್ಗು ಮತ್ತು ದಾದಾ ಎಂಬ ಎರಡು ಪದಗಳೇ ಸಿನಿಮಾದ ಕುರಿತಾಗಿ ಅನೇಕ ವಿಷಯಗಳನ್ನು ಹೇಳುತ್ತವೆ. ಜಗ್ಗು ಇಲ್ಲಿ ಹೇಗೆ ದಾದಾ ಆದ. ಅವನಿಗೆ ಯಾಕೆ ಆ ಹೆಸರು ಬಂತು. ಅವನ ಹಿನ್ನೆಲೆ ಏನು ಅನ್ನುವುದೇ ಸಿನಿಮಾ.


** ನಿಮ್ಮ ನಿರ್ಮಾಣ ಸಂಸ್ಥೆ ಹೇಗೆ ನಡೆಯುತ್ತಿದೆ? ಯಾವ ಯಾವ ಚಿತ್ರಗಳನ್ನು ಪ್ಲಾನ್ ಮಾಡಿದ್ದೀರಿ.*

ಅದನ್ನು ನನ್ನ ಸಹೋದರ ದಿನಕರ್ ನೋಡಿಕೊಳ್ಳುತ್ತಾರೆ. ಸದ್ಯ ಕವಿರಾಜ್ ನಿರ್ದೇಶನದ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದೇವೆ. ಕವಿರಾಜ್ ನನ್ನ ಅನೇಕ ಚಿತ್ರಗಳಲ್ಲಿ ಕೆಲಸ ಮಾಡಿದ್ದಾರೆ. ಅಂತಹ ಸಮಯದಲ್ಲಿ ಒಳ್ಳೆಯ ಕತೆ ಹೇಳಿದರು. ಎಲ್ಲರೂ ಕತೆ ಒಪ್ಪಿಕೊಂಡರು. ಹೀಗಾಗಿ ಸದ್ಯ 'ಮದುವೆಯ ಮಮತೆಯ ಕರೆಯೋಲೆ' ಸಿನಿಮಾವನ್ನು ತಯಾರಿಸುತ್ತಿದ್ದೇವೆ.

** 'ಜಗ್ಗುದಾದ' ನಂತರ ಮತ್ಯಾವ ಸಿನಿಮಾ ಒಪ್ಪಿಕೊಂಡಿದ್ದೀರಿ?*

ಈಗ 'ಜಗ್ಗುದಾದ'. ಮುಂದೆ ಏನು ಅಂತ ಗೊತ್ತಿಲ್ಲ. ಒಟ್ಟಿನಲ್ಲಿ ವರ್ಷಕ್ಕೆ ಎರಡು ಸಿನಿಮಾ ಮಾಡುವುದು ಗ್ಯಾರಂಟಿ. ■

ಗೋಬೆಲ್ಸ್ ತಂತ್ರಗಳು



ಸರ್ವಾಧಿಕಾರಿ ಮನೋಸ್ಥಿತಿಯ ನಾಯಕನಿಗೆ ತಾನೋರ್ವ ಮಹಾನ್ ವ್ಯಕ್ತಿ ಎಂದು ಬಿಂಬಿಸಿಕೊಳ್ಳುವ ಹಾಗೂ ಕರೆಸಿಕೊಳ್ಳುವ ವಿಪರೀತ ಹಂಬಲ ಇರುತ್ತದೆ. ಅಂಥವರು ಜನಪ್ರಿಯತೆಯ ಗಳಿಕೆ ಮತ್ತು ಉಳಿಕೆಗೆ ನಾನಾ ಕಸರತ್ತುಗಳನ್ನು ಮಾಡುತ್ತಿರುತ್ತಾರೆ. ಸ್ವಾಭಾವಿಕವಾಗಿಯೆ ಅಂಥವರಿಗೆ ತಮ್ಮ ವಿರೋಧಿಗಳು ಏನೆಲ್ಲ ಹೇಳುತ್ತಿದ್ದಾರೆಂದು ತಿಳಿಯುವುದು ಅತಿಮುಖ್ಯವಾಗುತ್ತದೆ. ಈ ಎಲ್ಲ ಕಾರಣಗಳಿಗಾಗಿ ಮಾಹಿತಿ ಮತ್ತು ಪ್ರಸಾರಾಂಗ ಖಾತೆಯನ್ನು ಆಡಳಿತ ವ್ಯವಸ್ಥೆಯ ಒಂದು ಬಹುಮುಖ್ಯ ಭಾಗವೆಂದು ಪರಿಗಣಿಸಲಾಗುತ್ತದೆ. ಏಕೆಂದರೆ ದೃಶ್ಯ, ಶ್ರವಣ ಮತ್ತು ಮುದ್ರಣ ಮಾಧ್ಯಮಗಳ ಮೂಲಕ ಜನಾಭಿಪ್ರಾಯ ರೂಪಿಸಿ ಜನಬೆಂಬಲ ಮತ್ತು ಜನಪ್ರಿಯತೆ ಸೃಷ್ಟಿಸುವ ಕಾರ್ಯವನ್ನು ಅದರಷ್ಟು ಉತ್ತಮವಾಗಿ, ಅದರಷ್ಟು ಸಮರ್ಥವಾಗಿ ಮಾಡಿಸಬಲ್ಲವರು ಇನ್ಯಾರೂ ಇಲ್ಲ.

ದೃಶ್ಯ ಮಾಧ್ಯಮದ ಆವಿಷ್ಕಾರಕ್ಕೆ ಮುನ್ನ ಪ್ರಚಾರ ಕಾರ್ಯಗಳಿಗಾಗಿ ರೇಡಿಯೊವನ್ನು ವ್ಯಾಪಕವಾಗಿ ಬಳಸಿಕೊಳ್ಳಲಾಗುತ್ತಿತ್ತು. ದ್ವಿತೀಯ ಮಹಾಯುದ್ಧದ ಕಾಲದಲ್ಲಿ ರೇಡಿಯೊ ಮೂಲಕ ನಡೆಯುವ ಯುದ್ಧ ವಿರೋಧಿ ಪ್ರಸಾರಗಳ ಮೇಲೆ ನಿಗಾ ಇರಿಸಲೆಂದು ಬ್ರಿಟಿಷರು ಭಾರತದಲ್ಲಿ ಸಿಎಂಎಸ್ (Central Monitoring Service) ಎಂಬ ಸಂಸ್ಥೆಯನ್ನು ಪ್ರಾರಂಭಿಸಿದ್ದರು. ಸ್ವಾತಂತ್ರ್ಯಾನಂತರದಲ್ಲಿ ರಂಗಸ್ಥಳವನ್ನು ಇಲೆಕ್ಟ್ರಾನಿಕ್ ಮಾಧ್ಯಮ ಆಕ್ರಮಿಸಿಕೊಳ್ಳುವ ತನಕವೂ ಇದು ಮುಂದುವರಿದಿದೆ. ಮುಂದೆ ನೂರಾರು ಖಾಸಗಿ ಚಾನಲ್‌ಗಳು ತಲೆ ಎತ್ತಿದಾಗ 2008ರಲ್ಲಿ ಯುಪಿಎ ಸರ್ಕಾರ ಇಎಂಎಂಸಿ (Electronic Media Monitoring Center) ಎಂಬ ಸಂಸ್ಥೆಯನ್ನು ಹುಟ್ಟುಹಾಕಿದೆ. ಅದರ ಉದ್ದೇಶ ಚಾನಲ್‌ಗಳ ಕಾರ್ಯಕ್ರಮದ ವಸ್ತುವಿನ ಮೇಲೆ ಕಣ್ಣಿರಿಸುವುದು ಮತ್ತು ಜಾಹೀರಾತಿನ ನಿಯಮಗಳು ಉಲ್ಲಂಘನೆ ಆಗದಂತೆ ನೋಡಿಕೊಳ್ಳುವುದು. ಈ ಕುರಿತ ವರದಿಗಳನ್ನೆಲ್ಲ ಕಲೆಹಾಕಿ ಕಾಲಕಾಲಕ್ಕೆ ಮಾಹಿತಿ ಮತ್ತು ಪ್ರಸಾರಾಂಗ ಸಚಿವಾಲಯಕ್ಕೆ ಕಳುಹಿಸುವುದು ಅದರ ಕರ್ತವ್ಯದ ಭಾಗವಾಗಿದೆ. ಯಾವೆಲ್ಲ ವಿಷಯಗಳು ಉಲ್ಲಂಘನೆಗೆ ಕಾರಣವಾಗುತ್ತವೆ ಎಂಬುದನ್ನು 1994ರ ಕೇಬಲ್ ಟಿವಿ ನೆಟ್‌ವರ್ಕ್ ನಿಯಮಗಳಲ್ಲಿ ಸ್ಪಷ್ಟಪಡಿಸಲಾಗಿದೆ. ಇವುಗಳಲ್ಲಿ ಸಭ್ಯರುಚಿ ಮತ್ತು ಸಭ್ಯತೆಯ ಮೀರುವಿಕೆ, ಧರ್ಮ ಅಥವಾ ಸಮುದಾಯಗಳ ದೂಷಣೆ, ಹಿಂಸೆಗೆ ಪ್ರಚೋದನೆ, ಕಾನೂನು ಸುವ್ಯವಸ್ಥೆಗೆ ವಿರುದ್ಧವಿರುವುದು, ರಾಷ್ಟ್ರ ವಿರೋಧಿ ಭಾವನೆ ಹುಟ್ಟಿಸುವುದು, ನ್ಯಾಯಾಲಯಗಳ ನಿಂದನೆ, ರಾಷ್ಟ್ರಪತಿ ಮತ್ತು ನ್ಯಾಯಾಂಗಗಳ ಪ್ರಾಮಾಣಿಕತೆಯನ್ನು ಅನುಮಾನಿಸುವುದು, ದೇಶದ ಸಾಮಾಜಿಕ, ಸಾರ್ವಜನಿಕ ಮತ್ತು ನೈತಿಕ ಬದುಕಿನ ನಿರ್ದಿಷ್ಟ ಗುಂಪುಗಳನ್ನು, ಅಂಶಗಳನ್ನು ಅಥವಾ ಯಾವನೇ ವ್ಯಕ್ತಿಯನ್ನು ಟೀಕಿಸುವುದು, ಹೆಸರು ಕೆಡಿಸುವುದು, ಮಿಥ್ಯಾಪವಾದ ಹೊರಿಸುವುದು ಮುಂತಾದವು ಸೇರಿವೆ.

ಯುಪಿಎ ಆಡಳಿತದ ಕಾಲದಲ್ಲಿ ಇಎಂಎಂಸಿ ಟಿವಿ ಚಾನಲ್‌ಗಳ ಮೇಲೆ ಕಣ್ಣಿರಿಸಿ ಅವು ನಿಯಮಗಳನ್ನು ಪರಿಪಾಲಿಸುತ್ತಿವೆಯೇ ಇಲ್ಲವೇ ಎಂಬುದನ್ನು ಗಮನಿಸಲು ಶುರುಮಾಡಿತ್ತು. ತನ್ನ ಜವಾಬ್ದಾರಿಯನ್ನು ನಿಭಾಯಿಸಲು ಅಷ್ಟೋ ಇಷ್ಟೋ ಪ್ರಯತ್ನಿಸಿತ್ತು. ಆದರೆ ಆ ಪ್ರಯತ್ನಗಳೆಲ್ಲವೂ ಹೆಚ್ಚುಕಡಿಮೆ ನೀರಿನಲ್ಲಿ ಮಾಡಿದ ಹೋಮದಂತಾಗಿವೆ ಎಂಬುದಕ್ಕೆ ಇವತ್ತು ಪ್ರಸಾರವಾಗುತ್ತಿರುವ ಕಾರ್ಯಕ್ರಮಗಳ ಸ್ವರೂಪ ಮತ್ತು ಗುಣಮಟ್ಟಗಳೇ ಸಾಕ್ಷಿ. ಇದಕ್ಕೊಂದು ಜ್ವಲಂತ ನಿದರ್ಶನವೆಂದರೆ ಯಾವುದೇ ಅಡೆತಡೆಯಿಲ್ಲದೆ ರಾಜಾರೋಷವಾಗಿ ಪ್ರಸಾರವಾಗುತ್ತಿರುವ ಜ್ಯೋತಿಷ್ಯ, ವಾಸ್ತು, ಪೂರ್ವಜನ್ಮ ಫಲ ಜಾತಕ, ಭೂತಪ್ರೇತ ಬಾಧೆ ಮುಂತಾದ ಮೂಢನಂಬಿಕೆಗಳನ್ನು ವೃದ್ಧಿಸುವಂತಹ ಕಾರ್ಯಕ್ರಮಗಳು.

ಮೋದಿ ಸರ್ಕಾರ ಬಂದನಂತರ ಕೆಲವೊಂದು ಮಹತ್ತರ ಬದಲಾವಣೆಗಳು ನಡೆದಿವೆ. ಆದರೆ ಚಾನಲ್‌ಗಳ ಸ್ವರೂಪ, ಗುಣಮಟ್ಟಗಳಲ್ಲಿ ಸುಧಾರಣೆ ಆಗುತ್ತಿದೆಯೆಂದು ಯಾರಾದರೂ ಭಾವಿಸಿದರೆ ಅದು ಸ್ವಪ್ನಲೋಕದ ವಿಹಾರವಷ್ಟೆ ಆಗುತ್ತದೆ. ವಾಸ್ತವದಲ್ಲಿ ಆಗಿರುವ ಋಣಾತ್ಮಕ ಬದಲಾವಣೆ ಏನೆಂದರೆ ಇಎಂಎಂಸಿ ಇಂದು ತನ್ನ ಗಮನವನ್ನೆಲ್ಲಾ ಕೇವಲ ಒಂದು ವಿಷಯದ ಮೇಲೆ ಕೇಂದ್ರೀಕರಿಸಿದೆ - ಚಾನಲ್‌ಗಳು ಮೋದಿ ಸರ್ಕಾರದ ಸಚಿವರುಗಳ ವಿವಿಧ ಚಟುವಟಿಕೆಗಳ ಪ್ರಸಾರಕ್ಕೆ ಎಷ್ಟು ಸಮಯ ಕೊಡುತ್ತಿವೆ ಎಂಬುದರ ಮೇಲೆ! ಮಂತ್ರಿಗಳಿಗೆ ನೀಡಲಾಗುತ್ತಿರುವ ಸಮಯವನ್ನು ಬಲು ಎಚ್ಚರಿಕೆಯಿಂದ ಲೆಕ್ಕಹಾಕಿ, ಕಡತಗಳಲ್ಲಿ ನಮೂದಿಸಿ ಸಚಿವಾಲಯಕ್ಕೆ ರವಾನಿಸಲಾಗುತ್ತಿದೆ! ಇಎಂಎಂಸಿಯ ಸಮಯ ಮತ್ತು ಸಾಮರ್ಥ್ಯಗಳೆಲ್ಲವೂ ಹೀಗೆ ಮಂತ್ರಿಮಹೋದಯರಿಗೋಸ್ಕರ ವ್ಯಯವಾಗುತ್ತಿದ್ದರೆ ಇನ್ನು ದೃಶ್ಯ ಮಾಧ್ಯಮದ ನಿಯಮೋಲ್ಲಂಘನೆಗಳಿಗೆ ಅಂಕೆ ಹಾಕುವ ಪ್ರಶ್ನೆ ಎಲ್ಲಿಂದ ಬಂತು?!

ಇಎಂಎಂಸಿಯ ಈ ಬದಲಾದ ಕಾರ್ಯವಿಧಾನ ಮೋದಿ ಕಾರ್ಯಕ್ರಮಗಳ ಕವರೇಜ್‌ನಿಂದಲೆ ಶುರುವಾಗಿದೆ. ತರುವಾಯ ಮಾಹಿತಿ ಮತ್ತು ಪ್ರಸಾರ ಮಂತ್ರಿ ಅರುಣ್ ಜೇಟ್ಲಿಯನ್ನೂ ಸೇರಿಸಲಾಗಿದೆ. 2014ರ ಸೆಪ್ಟಂಬರ್ ತಿಂಗಳಲ್ಲಿ ಮೋದಿ ಕುರಿತಂತೆ 15 ಮತ್ತು ಜೇಟ್ಲಿ ಕುರಿತಂತೆ 20 ಸುದ್ದಿ ಕ್ಲಿಪ್‌ಗಳನ್ನು ಸಂಗ್ರಹಿಸಿ ಕಳುಹಿಸಲಾಗಿದೆ. ಇದಲ್ಲದೆ ಮೋದಿಯ 'ಮನ್ ಕಿ ಬಾತ್'ಗೆ ಕೊಟ್ಟ ಸಮಯದ ವಿವರಗಳನ್ನೂ ಅದಕ್ಕೆ ವಿವಿಧ ಚಾನಲ್‌ಗಳು ಕೊಟ್ಟ ಪ್ರಚಾರದ ತುಲನಾತ್ಮಕ ವಿಶ್ಲೇಷಣೆಯನ್ನೂ ಸಿದ್ಧಪಡಿಸಲಾಗಿದೆ. ನವಂಬರ್‌ನಿಂದ ಈ ಪಟ್ಟಿಗೆ ಉಪಸಚಿವ ರಾಜ್ಯವರ್ಧನ್ ರಾಠೋಡ್ ಹೆಸರೂ ಸೇರ್ಪಡೆಯಾಗಿದೆ. ನವಂಬರ್‌ನಲ್ಲಿ ರಾಠೋಡ್ ಬಗ್ಗೆ 2 ಸುದ್ದಿ ಕ್ಲಿಪ್‌ಗಳಿದ್ದರೆ ಮಾರ್ಚ್ 2015ರಲ್ಲಿ ಅದು 17 ಕ್ಲಿಪ್‌ಗಳಿಗೆ ಏರಿದೆ. ಮೋದಿ ಮತ್ತು ಒಬಾಮಾ ಜಂಟಿಯಾಗಿ ನಡೆಸಿದ 'ಮನ್ ಕಿ ಬಾತ್ ಸಾಥ್ ಸಾಥ್' ಕಾರ್ಯಕ್ರಮಕ್ಕೆ ವಿವಿಧ ಚಾನಲ್‌ಗಳು ಕೊಟ್ಟ ಕವರೇಜ್‌ನ ವಿವರಗಳನ್ನು ಕೂಡ ಕಳುಹಿಸಲಾಗಿದೆ. ದಿಲ್ಲಿ ಚುನಾವಣೆಗಳಿಗೆ ಸಂಬಂಧಿಸಿದ ಸುದ್ದಿ ಕ್ಲಿಪ್‌ಗಳನ್ನೂ ರವಾನಿಸಲಾಗಿದೆ. ಗಮನಿಸಬೇಕಿರುವ ಅಂಶವೆಂದರೆ ಈ ರೀತಿ ಮೋದಿಗೆ ಮತ್ತು ಕೆಲವು ಮಂತ್ರಿಗಳಿಗೆ ನೀಡಲಾಗುವ ಪ್ರಸಾರ ಸಮಯದ ಮೇಲೆ ಕಣ್ಗಾವಲಿರಿಸುವ ಬಗ್ಗೆ ಸರ್ಕಾರದಿಂದ ಯಾವುದೇ ಅಧಿಕೃತ ಲಿಖಿತ ಆದೇಶ ಇಲ್ಲ!

ಇವತ್ತು ಇಎಂಎಂಸಿ ಮೂಲಕ ಸುಮಾರು 600 ಟಿವಿ ಚಾನಲ್‌ಗಳನ್ನು ದಿನದ 24 ಗಂಟೆಗಳ ಕಾಲವೂ ಮಾನಿಟರ್ ಮಾಡಲಾಗುತ್ತಿದೆ. ಜನವರಿ 2015ರಿಂದ ಗುಜರಾತಿ ಚಾನಲ್‌ಗಳ ಮೇಲೂ ಆಮೂಲಾಗ್ರ ಗಮನ ಇರಿಸಲಾಗುತ್ತಿದೆ ಎಂದು ತಿಳಿದುಬಂದಿದೆ. ಮಂತ್ರಿಗಳ ಚಟುವಟಿಕೆಗಳು, ಕಾರ್ಯಕ್ರಮಗಳು, ಹೇಳಿಕೆಗಳು ಮುಂತಾದವುಗಳ ಕುರಿತು ಚಾನಲ್‌ಗಳ ವರದಿಗಾರಿಕೆಯಲ್ಲಿ ಸ್ವಲ್ಪ ಹೆಚ್ಚುಕಡಿಮೆ ಆದರೂ ಸರ್ಕಾರದಿಂದ ಶೀಘ್ರ ನೋಟಿಸು ಜಾರಿಯಾಗುತ್ತದೆ. ಈಗಾಗಲೆ ನಾಲ್ಕು ಚಾನಲ್‌ಗಳಿಗೆ ಬಿಸಿ ಮುಟ್ಟಿಸಲಾಗಿದೆ. ಬಹುಶಃ ಮುಂದಿನ ಸರದಿ ಮೋದಿ ಸರ್ಕಾರವನ್ನು ಟೀಕಿಸುವ ವಾಹಿನಿಗಳದಿರಬಹುದು. ಆದರೆ ಕಾರ್ಪೊರೇಟು ಮಾಲಕತ್ವದ ಭಟ್ಟಂಗಿ ಚಾನಲ್‌ಗಳಿಗೆ ಯಾವ ಆತಂಕವೂ ಇರಬೇಕಾಗಿಲ್ಲ, ಅಂಥವರಿಗೆಲ್ಲ ಸುಗ್ಗಿಯ ಕಾಲ ಕಾದಿದೆ.

(ಆಧಾರ: *20.9.2015ರ 'ದ ಹಿಂದೂ'* ನಲ್ಲಿ ಅನುರಾಧಾ ರಾಮನ್ ಲೇಖನ)

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 14-10-2015 RNI No. KA

ಬೆಚ್ಚಿ ಬಿತ್ತು ಗಾಂಧಿನಗರ



ಹರಿಪ್ರಿಯಾರ ಫೋಟೋ ಶೂಟ್ ನೋಡಿ ಇಡೀ ಗಾಂಧಿನಗರವೇ ದಂಗಾಗಿದೆ. ಗ್ಲಾಮರ್ ಪಾತ್ರಕ್ಕೆ ನೋ ಎನ್ನುತ್ತಿದ್ದ ಹರಿಪ್ರಿಯಾ 'ನೀರ್‌ದೋಸೆ' ಸಿನಿಮಾದ ಫೋಟೋ ಶೂಟ್‌ನಲ್ಲಿ ಸಖತ್ ಹಾಟ್ ಆಗಿ ಕಾಣಿಸಿಕೊಂಡಿದ್ದಾರೆ. ಫೋಟೋಗಳು ಲೀಕ್ ಆಗಿದ್ದು ಭಾರೀ ಸಂಚಲನವನ್ನೇ ಸೃಷ್ಟಿ ಮಾಡಿವೆ.

ಪಕ್ಕದ ಮನೆ ಹುಡುಗಿ ರೀತಿಯ ಪಾತ್ರಗಳ ಮೂಲಕ ಗುರುತಿಸಿಕೊಂಡ ನಟಿ ಹರಿಪ್ರಿಯಾ ಬೇರೆ ನಾಯಕಿಯರಂತೆ ಐಟಂ ಡಾನ್ಸಿನಲ್ಲೋ, ಟೂ ಪೀಸ್ ಕಾಸ್ಟ್ಯೂಮ್‌ನಲ್ಲೋ ಕಾಣಿಸಿಕೊಂಡವರಲ್ಲ. ಅಂತಹ ದೃಶ್ಯಗಳು ಇದ್ದರೆ, ಸಿನಿಮಾವನ್ನೇ ಕೈಬಿಟ್ಟ ಉದಾಹರಣೆಗಳು ಇವೆ. ಆದರೆ 'ನೀರ್‌ದೋಸೆ'ಯ ನಿರ್ದೇಶಕರಿಗೆ ಗ್ರೀನ್ ಸಿಗ್ನಲ್ ಕೊಟ್ಟಿದ್ದಕ್ಕೆ ಕಾರಣ "ಪಾತ್ರವೇ ಹಾಗಿದೆ" ಎಂಬುದು.

ಈ ಚಿತ್ರದಲ್ಲಿ ಹರಿಪ್ರಿಯಾ ಕಾಲ್‌ಗರ್ಲ್ ಪಾತ್ರ ಮಾಡುತ್ತಿದ್ದಾರೆ. ಅದೂ ಹೈಟೆಕ್ ಕಾಲ್‌ಗರ್ಲ್. ಹೀಗಾಗಿಯೇ ಇಂಥದ್ದೊಂದು ಫೋಟೋ ಶೂಟ್‌ನ ಅಗತ್ಯವಿತ್ತು ಅಂದಿದ್ದಾರೆ ಹರಿಪ್ರಿಯಾ. ಈ ಹಿಂದೆ ಈ ಪಾತ್ರವನ್ನು ರಮ್ಯಾ ಮಾಡಿದ್ದರು. ಅವರು ಈ ಚಿತ್ರದಿಂದ ಹೊರಬಂದ ಕಾರಣ, ಆ ಪಾತ್ರಕ್ಕೆ ಹರಿಪ್ರಿಯಾ ಜೀವ ತುಂಬುತ್ತಿದ್ದಾರೆ. ಅಕ್ಟೋಬರ್ ಎರಡನೇ ವಾರದಲ್ಲಿ ಚಿತ್ರದ ಶೂಟಿಂಗ್ ನಡೆಯಲಿದೆ.

ಬಿಗ್‌ಬಾಸ್‌ಗೆ ನೋ ಅಂದ ಹುಚ್ಚ ವೆಂಕಟ್

ಈಗಾಗಲೇ ಬಿಗ್‌ಬಾಸ್ ಮನೆಗೆ ಹೋಗಲು ಹಲವರು ತಯಾರಿ ಮಾಡಿಕೊಳ್ಳುತ್ತಿದ್ದಾರೆ. ಸುದ್ದಿ ವಾಚಕಿ ಕಂ ನಟಿ ಶೀತಲ್ ಶೆಟ್ಟಿ, ಸುದ್ದಿ ವಾಚಕ ಚಂದನ್ ಸೇರಿದಂತೆ ಹಲವರ ಹೆಸರು ಈ ಬಾರಿ ಕೇಳಿಬಂದಿದೆ. ಅಧಿಕೃತವಾಗಿ ಯಾರ ಹೆಸರೂ ಕೇಳಿಬಂದಿಲ್ಲವಾದರೂ, ನಟ, ನಿರ್ದೇಶಕ, ನಿರ್ಮಾಪಕ ಹುಚ್ಚ ವೆಂಕಟ್ ಮನೆಗೆ ಚಾನೆಲ್ ಮುಖ್ಯಸ್ಥರು ಹೋಗಿದ್ದು ಗುಟ್ಟಾಗಿ ಉಳಿದಿಲ್ಲ.

ತನ್ನ ಹುಚ್ಚುಚ್ಚು ಮಾತುಗಳ ಮೂಲಕವೇ ಫೇಮಸ್ ಆಗಿರುವ ವೆಂಕಟ್, ಈಗ ಕಿರುತೆರೆಯವರ ಪಾಲಿಗೆ ಹಾಟ್ ಕೇಕ್. ಬಹುತೇಕ ಚಾನೆಲ್‌ಗಳಲ್ಲಿ ಈತ ಕಾಣಿಸಿಕೊಂಡು ಆಯಾ ಚಾನೆಲ್‌ಗಳ ಟಿಆರ್‌ಪಿ ಹೆಚ್ಚಿಸಿದ್ದಾನೆ. ಅಲ್ಲದೇ, ಸಾಮಾಜಿಕ ಜಾಲತಾಣಗಳಲ್ಲಿ ಈತನ ಅಭಿಮಾನಿಗಳ ಸಂಖ್ಯೆ ದೊಡ್ಡದು. ಹೀಗಾಗಿಯೇ ವೆಂಕಟ್ ಮನೆಗೆ ಕಲರ್ಸ್ ವಾಹಿನಿಯ ಕಾರ್ಯಕ್ರಮ ಮುಖ್ಯಸ್ಥರು ಹೋಗಿದ್ದಾರೆ. ಬಿಗ್‌ಬಾಸ್ ಮನೆಗೆ ಬರಬೇಕು ಎಂದು ಕೇಳಿಕೊಂಡಿದ್ದಾರೆ. ಸದ್ಯ ವೆಂಕಟ್ ಸಿನಿಮಾವೊಂದನ್ನು ಕೈಗೆತ್ತಿಕೊಂಡಿರುವುದರಿಂದ, ಚಾನೆಲ್‌ಗೆ ಭಾರೀ ಡಿಮಾಂಡ್‌ನ್ನೇ ಇಟ್ಟದ್ದಾನೆ.



ತನ್ನ ಎರಡೂ ಸಿನಿಮಾಗಳನ್ನು ಭಾರೀ ಮೊತ್ತಕ್ಕೆ ಕೊಂಡುಕೊಂಡರೆ ಮಾತ್ರ ಬರುವುದಾಗಿ ಹೇಳಿದ್ದಾನೆ. ದಿನದ ಪೇಮೆಂಟ್ ಒಪ್ಪಿಸಲೆಂದು ಹೋಗಿದ್ದ ಚಾನೆಲ್‌ನವರು ಬಂದ ದಾರಿಗೆ ಸುಂಕವಿಲ್ಲವೆಂದು ವಾಪಸ್ಸಾಗಿದ್ದಾರೆ.

ಆದರೆ, ಪ್ರಯತ್ನವನ್ನಂತೂ ಇನ್ನೂ ಅವರು ನಿಲ್ಲಿಸಿಲ್ಲ.

ಮಕಾಡೆ ಮಲಗಿತು ಸೆಕೆಂಡ್

'ಕೃಷ್ಣಲೀಲಾ' ಸಿನಿಮಾದ ಗೆಲುವಿನಲ್ಲಿ ಬೀಗುತ್ತಿದ್ದ ಅಜಯ್ ರಾವ್‌ಗೆ 'ಸೆಕೆಂಡ್ ಹ್ಯಾಂಡ್ ಲವರ್' ಸಿನಿಮಾ ಸಖತ್ ಹೊಡೆತ ಕೊಟ್ಟಿದೆ. ಅಲ್ಲದೇ ಅಜಯ್‌ನ ಮಾರ್ಕೆಟ್ ಡೌನ್ ಆಗುವಂತೆ ಮಾಡಿದೆ. ಹೀಗಾಗಿ ಕಂಗಾಲಾಗಿದ್ದಾರೆ ಅಜಯ್.

ಶಶಾಂಕ್ ನಿರ್ದೇಶನದ 'ಕೃಷ್ಣಲೀಲಾ' ನೂರು ದಿನ ಓಡಿದರೂ, ಗಲ್ಲಾ ಪೆಟ್ಟಿಗೆಯಲ್ಲಿ ಅದು ಅಷ್ಟೇನೂ ಸದ್ದು ಮಾಡಿರಲಿಲ್ಲ, ಓಟ ನೂರಾದರೂ, ಗಳಿಕೆ ಮಾತ್ರ ಕಡಿಮೆ. ಆದರೆ, ಹಾಕಿದ ದುಡ್ಡಿಗೆ ಅದು ಮೋಸ ಮಾಡಲಿಲ್ಲ, ಸೆಕೆಂಡ್ ಹ್ಯಾಂಡ್ ಮಾತ್ರ ಭರ್ಜರಿ ಸೋಲು ಕಂಡಿದೆ. ಒಂದೇ ವಾರಕ್ಕೇ ಹಲವು ಚಿತ್ರಮಂದಿರಗಳಿಂದ ಹೊರಬಂದಿದೆ.



'ಕೃಷ್ಣಲೀಲಾ'ವನ್ನು ನಂಬಿಕೊಂಡಿದ್ದ ಹಲವು ನಿರ್ಮಾಪಕರು ಇವರಿಗಾಗಿ ಸಿನಿಮಾ ಮಾಡಲು ಮುಂದೆ ಬಂದಿದ್ದರು. ಈಗ ಅವರೂ ಹಿಂದೇಟು ಹಾಕುತ್ತಿದ್ದಾರೆ.

ಅಜಯ್ ಕೆಟ್ಟ ನಟನೇನೂ ಅಲ್ಲ, ಆದರೆ, ಅವರ ಪರತ್ತುಗಳ ಪಟ್ಟಿ ದೊಡ್ಡದಿದೆ. ಸೂಕ್ಷ್ಮ ಮನಸ್ಸಿನ ನಿರ್ದೇಶಕರು ಇವರೊಂದಿಗೆ ಕೆಲಸ ಮಾಡುವುದು ಕಷ್ಟ. ಅಲ್ಲದೇ, ನಾಸ್ತಿಕರು ಮಾತ್ರ ಇವರ ಹತ್ತಿರಕ್ಕೆ ಹೋಗದೇ ಇರುವುದು ಒಳ್ಳೆದು. ಇಂತಹ ಅಜಯ್ ಮತ್ತೆ ಸೋಲಿನ ಸುಳಿಯಲ್ಲಿ ಒದ್ದಾಡುತ್ತಿದ್ದಾರೆ. ಅದರಿಂದ ಪಾರಾಗಲು ಈಗಾಗಲೇ ಎರಡು ಬಾರಿ ಕಾಪಾಡಿರುವ ಶಶಾಂಕ್‌ರ ಮೊರೆ ಹೋಗಬೇಕಷ್ಟೆ.

ಅಣ್ಣನಿಗೆ ಉಡುಗೊರೆ



ಅಮೂಲ್ಯ ಸಹೋದರ ದೀಪಕ್ 'ಪ್ರೇಮಿಸು' ಎಂಬ ಸಿನಿಮಾ ನಿರ್ಮಿಸಿ, ಮೂರು ಕೋಟಿ ಕಳೆದುಕೊಂಡ ವಿಷಯ ಎಲ್ಲರಿಗೂ ಗೊತ್ತಿದೆ. ಆ ಸಾಲವನ್ನು ದೀಪಕ್ ಇನ್ನೂ ತೀರಿಸುತ್ತಿದ್ದಾರೆ. ಜತೆಗೆ ಸಹೋದರಿಯ ಸಹಾಯವೂ ಅವರಿಗಿದೆ. ಇಂತಿಪ್ಪ ದೀಪಿಕ್ ಮತ್ತೆ ನಿರ್ದೇಶನಕ್ಕೆ ಇಳಿದಿದ್ದಾರೆ. ಈ ಬಾರಿ ಅವರು ನಿರ್ಮಾಣವನ್ನು ಮಾಡುತ್ತಿಲ್ಲ ಎನ್ನುವುದು ಸಮಾಧಾನದ ಸಂಗತಿ.

ಅಣ್ಣನ ಈ ಸಾಹಸಕ್ಕೆ ಅಮೂಲ್ಯ ಮೊದಲು ಒಪ್ಪದೇ ಇದ್ದರೂ, ಈಗ ಅಣ್ಣನ ಬೆನ್ನಿಗೆ ನಿಂತಿದ್ದಾರೆ. ಪರಿಚಯ ಇರುವ ನಾಯಕರಿಗೆ ಕತೆ ಕೇಳುವಂತೆ ಹೇಳುತ್ತಿದ್ದಾರೆ. ಅಲ್ಲದೇ ತಾನು ಫ್ರೀಯಾಗಿ ನಟಿಸುವ ಮಾತುಗಳನ್ನು ಆಡಿದ್ದಾರೆ. ಈಗಾಗಲೇ ಚಿರಂಜೀವಿ ಸರ್ಜಾ, ದುನಿಯಾ ವಿಜಯ್ ಕತೆ ಕೇಳಿದ್ದಾರಂತೆ. ಆದರೆ, ಇನ್ನೂ ಯಾರೂ ಓಕೆ ಆಗಿಲ್ಲ, ಅತೀ ಶೀಘ್ರದಲ್ಲಿ ಮತ್ತೆ ಅಣ್ಣನಿಗೆ ನಿರ್ದೇಶಕನ ಪಟ್ಟ ಕಟ್ಟುವ ಆಸೆ ಅಮೂಲ್ಯ ಅವರದ್ದು. ಸದ್ಯ ಅಮೂಲ್ಯ 'ಮದುವೆಯ ಮಮತೆಯ ಕರೆಯೋಲೆ' ಸಿನಿಮಾದ ಶೂಟಿಂಗ್‌ನಲ್ಲಿ ಬಿಜಿ ಆಗಿದ್ದಾರೆ. ಇದು ಕವಿರಾಜ್ ನಿರ್ದೇಶನದ ಸಿನಿಮಾ. ದರ್ಶನ್ ಸಹೋದರ ದಿನಕರ್ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಬಹುತೇಕ ಶೂಟಿಂಗ್ ಮುಗಿದಿದೆ.

ಪಕ್ಕಾ ಲೋಕಲ್




ನಿರ್ದೇಶಕ ಯೋಗರಾಜ್ ಭಟ್ ಮ್ಯಾಜಿಕ್‌ವೊಂದನ್ನು ಸೃಷ್ಟಿಸಿದ್ದಾರೆ. ಪ್ರೇಕ್ಷಕ ಯಾವತ್ತೂ ಕನಸೂ ಕಾಣದ ಜೋಡಿಯೊಂದನ್ನು ರೆಡಿ ಮಾಡಿ 'ದನ ಕಾಯೋನು' ಎಂಬ ಸಿನಿಮಾ ಮಾಡಿದ್ದಾರೆ. ಅದೇನೆಂದರೆ ಈ ಚಿತ್ರದಲ್ಲಿ ದುನಿಯಾ ವಿಜಯ್ ಜತೆ ರಾಷ್ಟ್ರ ಪ್ರಶಸ್ತಿ ವಿಜೇತ ನಟಿ ಪ್ರಿಯಾಮಣಿ ಜೊತೆ ನಟಿಸಿರುವುದು.

ಇತ್ತೀಚಿನ ದಿನಗಳಲ್ಲಿ ಪ್ರಿಯಾಮಣಿಗೆ ಡಿಮಾಂಡ್ ಕಡಿಮೆ ಆಗಿದೆ. ಹೀಗಾಗಿಯೇ ಅವರು ಯಾವ ನಟರಾದರು… ಕಾಲ್‌ಶೀಟ್ ನೀಡುತ್ತಾರೆ. ಆದಕ್ಕಾಗಿಯೇ ಅವ… ಅವರಿಗೂ ನಾಯಕಿ ಆದರು. ಆ ಸಿನಿಮ… ಬಿಡುಗಡೆ ಆಗಬೇಕು. ತಮಿಳು ಮತ್ತು… ಸಿನಿಮಾಗಳಲ್ಲಿ ಮುಕ್ಕಾಲು ಕೋಟಿ ಸಂ… ಪಡೆಯುತ್ತಿದ್ದ ಪ್ರಿಯಾಮಣಿ ಈಗ ಇಪ್ಪ… ಲಕ್ಷವನ್ನೂ ದಾಟುತ್ತಿಲ್ಲ, ಅಲ್ಲದೇ ಮುಂದಿ… ಮದುವೆ ಬೇರೆ ಆಗಲಿದ್ದಾರೆ. ಹೀಗಾಗಿ ಸಿಕ್ಕ… ಅಂದುಕೊಂಡು ಹೊಸ ಹೊಸ ಚಿತ್ರಗಳನ್ನು ಒಪ್ಪಿ…

ಸದ್ಯ ಇವರು ಯೋಗರಾಜ್ ಭಟ್ ನಿರ್ದೇಶನದ … ಮತ್ತು ಶ್ರೀನಿವಾಸ್ ರಾಜು ನಿರ್ದೇಶನದ 'ಕತೆ, ಚ… ಪುಟ್ಟಣ್ಣ' ಎಂಬ ವಿಚಿತ್ರ ಶೀರ್ಷಿಕೆಯ ಸಿನಿಮಾದ… ಎರಡೂ ಚಿತ್ರಗಳು ಬಿಡುಗಡೆಗೆ ಸಿದ್ಧವಾಗಿವೆ. ಈ ಎ… ವಿಶೇಷತೆ ಅಂದರೆ, ಪ್ರಿಯಾಮಣಿ ಎರಡಲ್ಲೂ … ಹುಡುಗಿಯಾಗಿ ನಟಿಸಿರುವುದು. ಜಪ್ಪಯ್ಯ … ಅವರು ಗ್ಲಾಮ್ ಪಾತ್ರದಲ್ಲಿ ಕಾಣಿಸಿಕೊಂಡಿ…

ಪುನೀತ್… ನಿರ್ಮಾಣ ಮ…

ಪುನೀತ್ ನಿರ್ಮಾಣಕ್ಕೆ ಇ… ಸುದ್ದಿ ಹರಡಿದೆ. ಅಲ್ಲದೇ ಶರಣ್ … ಹಣ ಹೂಡಲಿದ್ದಾರೆ ಎಂದು … ಇದೆಲ್ಲ ಸುದ್ದಿಯನ್ನು ಅಲ್ಲಗಳೆದಿ… ತಾವು ನಿರ್ಮಾಣ ಸಂಸ್ಥೆ… ಮಾಡುವುದಾಗಿ ಹೇಳಿದ್ದು ನಿಜ. ಸದ್ಯ ಯಾವುದೇ ಚಿತ್ರವನ್ನು ನಿರ್ಮಾಣ ಮಾಡುತ್ತಿಲ್ಲ ಅಂದಿದ್ದಾರೆ.



ಶರಣ್ ಸಿನಿಮಾವನ್ನು ತಮ್ಮ … ಮ್ಯಾನೇಜರ್ ಕುಮಾರ್ ತಯಾರಿಸುತ್ತಿರುವ ವಿಷಯವನ್ನು ಖಚಿತಪಡಿಸಿದ್ದಾರೆ. ಅಲ್ಲಿಗೆ ಪವನ್ ಒಡೆಯರ್ ನಿರ್ದೇಶನದ, ಶರಣ್ ನಟನೆಯ ಚಿತ್ರಕ್ಕೆ, ಪುನೀತ್ ಹಣ ಹಾಕುತ್ತಿಲ್ಲ ಎಂದಾಯಿತು.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 2667
Fax : 26604536, E-mail :lankesh70@rediffmail.com